# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಜೂನ್, ೨೦೧೫ ಸಂಪಾದಕ : ಡಿ.ಎಸ್.ನಾಗಭೂಷಣ ಸಂಪುಟ: ೪ ಸಂಚಿಕೆ: ೧೧

**ಚಂದಾ** : ವಾರ್ಷಿಕ: ರೂ. ೧೫೦/-(ವ್ಯಕ್ತಿಗಳಿಗೆ) ರೂ.೨೫೦/-(ಸಂಸ್ಥೆ/ಗ್ರಂಥಾಲಯಗಳಿಗೆ) ಬಿಡಿ ಪ್ರತಿ: ರೂ. ೨೦/- ಪುಟಗಳು: ೨೦

**ವಿಳಾಸ:** ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨೪೨೨೮೪ ಈಮೇಲ್: dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಕಳೆದ ವಾರ, ಅಂದರೆ ಮೇ ಕೊನೆಯ ವಾರ ರಾಜಕೀಯವಾಗಿ ಜನತೆ ಎರಡು ಮುಖ್ಯ ಕಾಲಘಟ್ಟಗಳನ್ನು ಗಮನಿಸಿತು. ಒಂದು, ಸಿದ್ಧರಾಮಯ್ಯನವರ ಸರ್ಕಾರ ಎರಡು ವರ್ಷಗಳನ್ನು ಪೂರೈಸಿದರೆ, ಕೇಂದ್ರದ ಮೋದಿ ಸರ್ಕಾರ ಒಂದು ವರ್ಷವನ್ನು ಪೂರೈಸಿತು. ಮೂಲಭೂತ ಬದಲಾವಣೆಗಳ ಆಶ್ವಾಸನೆಗಳ ಮೇಲೆ ಅಧಿಕಾರಕ್ಕೆ ಬಂದ ಮೋದಿ ಸರ್ಕಾರಕ್ಕೆ ಒಂದು ವರ್ಷ ತನ್ನ ಶೀಲವನ್ನು ತೋರಲು ಸಣ್ಣ ಅವಧಿಯಾದುದರಿಂದ ಅದರ ಬಗ್ಗೆ ನಿರ್ಣಾಯಕ ಮಾತುಗಳನ್ನೇನೂ ಸದ್ಯಕ್ಕೆ ಆಡಲಾಗದೇನೋ. ಆದರೆ, ಸಿದ್ಧರಾಮಯ್ಯನವರ ಸರ್ಕಾರ ತನ್ನ ಜನತಾ ಆದೇಶದ ಹೆಚ್ಚೂ ಕಡಿಮೆ ಅರ್ಧ ಅವಧಿಯನ್ನು ಮುಗಿಸಿರುವುದರಿಂದ ಅದರ ಸಾಧನೆಗಳ ಬಗ್ಗೆ ಇಲ್ಲಿ ಕೆಲವು ಮುಖ್ಯ ಮಾತುಗಳನ್ನಾಡಬಹುದೆಂದು ಕಾಣುತ್ತದೆ..

ಸಿದ್ಧರಾಮಯ್ಯನವರ ಸರ್ಕಾರ ರಾಜಕೀಯವಾಗಿ ಒಂದು ಮಿಶ್ರಗುಣದ ಸರ್ಕಾರ. ತಾಂತ್ರಿಕವಾಗಿ ಅದನ್ನು ಕಾಂಗ್ರೆಸ್ ಸರ್ಕಾರವೆಂದು ಕರೆಯಬಹುದೇ ಹೊರತು ಸ್ವತಃ ಸಿದ್ಧರಾಮಯ್ಯನವರನ್ನೇ ಕಾಂಗ್ರೆಸ್ಸಿಗ ಎಂದು ಕರೆಯಲಾಗದೇನೋ! ಏಕೆಂದರೆ ಅವರು ರಾಜಕೀಯ ಜೀವನದ ಬಹುಪಾಲು ಕಾಲವನ್ನು ಕಳೆದಿರುವುದು ಕಾಂಗ್ರೆಸ್ ವಿರೋಧಿ ರಾಜಕಾರಣದಲ್ಲಿ; ಅವರ ರಾಜಕೀಯ ವ್ಯಕ್ತಿತ್ವದ ಎರಕ ರೂಪುಗೊಂಡಿರುವುದು ಇಂತಹ ರಾಜಕಾರಣದಲ್ಲೇ. ಜೊತೆಗೆ ಅವರು ತಮ್ಮನ್ನು ಆಪ್ತ ವಲಯದಲ್ಲಿ ಗುರುತಿಸಿಕೊಳ್ಳುವುದು ಕಾಂಗ್ರೆಸ್ಸೇತರವಾದದ ಪಿತಾಮಹರೆನಿಸಿದ ಸಮಾಜವಾದಿ ನಾಯಕ ಲೋಹಿಯಾರ ಅನುಯಾಯಿಯೆಂದು. ಅವರ ರಾಜಕೀಯ ಆಪ್ತವಲಯವಿರಲಿ, ಅವರ ಸಚಿವ ಸಂಪುಟದ ಗಣನೀಯ ಭಾಗವೂ ಅವರೊಡನೆ ಬಹುಕಾಲ ಕಾಂಗ್ರೆಸ್ಸೇತರ ರಾಜಕಾರಣ ಮಾಡಿದ ಜನತಾ ಪರಿವಾರದ ವಲಯಕ್ಕೆ ಸೇರಿದ್ದೇ ಆಗಿದೆ. ಸಿದ್ಧರಾಮಯ್ಯ ಕಾಂಗ್ರೆಸ್ ಸೇರಿದ್ದೇ, ದೇವೇಗೌಡರ ಕುಟುಂಬ ಪರಿವಾರವಾಗಿ ಪರಿವರ್ತಿತವಾಗತೊಡಗಿದ್ದ ಅಳಿದುಳಿದ ಜನತಾ ಪರಿವಾರದಲ್ಲಿ ಉಳಿದರೆ ತಾವು ರಾಜ್ಯದ ಮುಖ್ಯಮಂತ್ರಿಯಾಗುವ ಕನಸು ನನಸಾಗುವುದಿಲ್ಲ ಎಂಬ ಏಕೈಕ ಕಾರಣಕ್ಕೆ. ಇಲ್ಲದಿದ್ದರೆ ರಾಜ್ಯಕ್ಕೆ ಒಂದು ಪರ್ಯಾಯ ರಾಜಕೀಯ ವ್ಯವಸ್ಥೆ ನೀಡಬಲ್ಲ ಸಾಮರ್ಥ್ಯವನ್ನು ಅವರು ಆಗ ಗಳಿಸಿಕೊಂಡಿದ್ದರು. ಆದರೆ ಆ ರಾಜಕೀಯ ಧೈರ್ಯ ಅವರು ತೋರದಿದ್ದುದಕ್ಕೆ ಅವರ ಈ ಮಹಾತ್ವಾಕಾಂಕ್ಷೆಯೇ ಕಾರಣವಾಗಿತ್ತು.

ಇಂದು ಸಿದ್ಧರಾಮಯ್ಯ ತಮ್ಮೆಲ್ಲ ತಾತ್ವಿಕ ಸಾಮಾಜವಾದಿ ಹಿನ್ನೆಲೆ ಮತ್ತು ವೈಯಕ್ತಿಕ ಸದುದ್ದೇಶಗಳ ಹೊರತಾಗಿಯೂ, ರಾಜ್ಯಕ್ಕೆ ಸರಾಸರಿಗಿಂತ ಹೆಚ್ಚಿನ ಮಟ್ಟದ ಆಡಳಿತ ನೀಡಲಾಗದಿದ್ದರೆ ಅದಕ್ಕೆ ಅವರ ಈ ಬೋಳು ಮಹತ್ವಾಕಾಂಕ್ಷೆಯೇ ಕಾರಣವಾಗಿದೆ. ಇದನ್ನು ಬೋಳು ಎಂದು ಏಕೆ ಕರೆಯಬೇಕಾಗಿದೆ ಅಂದರೆ, ಈ ಹಿಂದೆಯೇ ಒಮ್ಮೆ ಬರೆದಿದ್ದಂತೆ, ಅದೊಂದು ರಾಜಕೀಯ ತಾತ್ವಿಕ ಬದ್ಧತೆಯಿಂದ ರೂಪುಗೊಂಡ ಮಹತ್ವಾಕಾಂಕ್ಷೆಯಾಗಿರದೆ, ಕೇವಲ ವೈಯಕ್ತಿಕ ಮಹಾತಾಕಾಂಕ್ಷೆಯಾಗಿತ್ತು. ಹಾಗಾಗಿಯೇ ಅವರು ಅಧಿಕಾರ ಕಳೆದುಕೊಳ್ಳುವ ಆತಂಕದಲ್ಲಿ ಹಲವು ರಾಜಿಗಳನ್ನು ಮಾಡಿಕೊಳ್ಳಬೇಕಾಗಿ ಬಂದಿದೆ. ಆ ಮಟ್ಟಿಗೆ ಅವರು ಈಗ ಕಾಂಗ್ರೆಸ್ಸಿಗರೇ ಆಗಿದ್ದಾರೆ. ಉದಾಹರಣೆಗೆ, ಅವರು ತಾವು ಮುಖ್ಯಮಂತ್ರಿಯಾಗಿ ಮಾಡಬೇಕಾದ ಕೆಲಸಕ್ಕೆ ಯೋಗ್ಯವಾದ ಒಂದು ಸಚಿವ ಸಂಪುಟವನ್ನೂ ಅವರು ಹೊಂದಲಾಗಿಲ್ಲ. ಜಾರ್ಜ್, ಡಿ.ಕೆ.ಶಿ, ಅಂಬರೀಶ್, ಶಾಮನೂರು, ಚಿಂಚನಸೂರು, ಖಮರುಲ್ ಇಸ್ಲಾಂ, ದೇಶಪಾಂಡೆ ಮುಂತಾದವರನ್ನು ಇಟ್ಟುಕೊಂಡು ಎಂತಹ ದಕ್ಷ, ಸ್ವಚ್ಛ ಮತ್ತು ಜನಪರ ಆಡಳಿತ ನೀಡಲು ಸಾಧ್ಯ? ಇಬ್ರಾಹಿಂ ಜೊತೆಗಿರದೆ ಇವರು ರಾಜಕಾರಣ ಮಾಡಲಾರರು ಎಂದರೆ ಏನು ಹೇಳೋಣ? ಇತ್ತೀಚೆಗೆ ಅವರ ಸರ್ಕಾರವನ್ನು ದಿನವಹಿಯಾಗಿ ಸುತ್ತಿಕೊಳ್ಳುತ್ತಿರುವ ಹಗರಣಗಳು, ಆಡಳಿತ ವೈಫಲ್ಯ ಪ್ರಕರಣಗಳು, ತಪ್ಪು ನಿರ್ಧಾರಗಳ ಪ್ರಸಂಗಗಳಿಗೆ ಇದೇ ಕಾರಣವಾಗಿದೆ. ಒಬ್ಬ ಮುಖ್ಯಮಂತ್ರಿ ಯಶಸ್ಸನ್ನು ಕಾಣುವುದು, ಪೋಲೀಸ್ ಠಾಣೆ, ಸರ್ಕಾರಿ ಶಾಲೆ, ಆಸ್ಪತ್ರೆಗಳೂ ಸೇರಿದಂತೆ ಸರ್ಕಾರದ ಕಛೇರಿಗಳು ಎಷ್ಟರಮಟ್ಟಿಗೆ ನಿಜವಾಗಿ ಜನತೆಯ ಕಛೇರಿಗಳಾಗಿವೆ ಎಂಬುದರಲ್ಲಿ. ಆದರಿಂದು ಅವೆಲ್ಲ ಹೇಗಿವೆ ಎಂಬುದು ಸಿದ್ಧರಾಮಯ್ಯನವರಿಗೆ ಗೊತ್ತಿಲ್ಲದಿಲ್ಲ. ಹೇಗೂ ಅವರೇ ಹಿಂದೊಮ್ಮೆ ತಾವೇನೂ ರಾಜಕೀಯವಾಗಿ ಪರಿಶುದ್ಧರಲ್ಲ ಎಂದು ಹೇಳಿಕೊಂಡಿಬಿಟ್ಟಿದ್ದಾರಲ್ಲ? ಹಾಗಾಗಿಯೇ ಅವರ ಸಮಾಜವಾದ ಅಹಿಂದವಾದ ಮಾತ್ರವಾಗಿ ಅವನತಿಗೊಂಡಿದೆ. ಇದರ ಫಲವಾಗಿಯೇ, ಸಮಾಜವಾದಿ ಕಾರ್ಯಕ್ರಮಗಳೆನಿಸಬೇಕಿದ್ದ ಅನ್ನಭಾಗ್ಯ, ಕ್ಷೀರಭಾಗ್ಯ ಮುಂತಾದ ಜನತಾ ಹಕ್ಕುಗಳ ಯೋಜನೆಗಳು ಸರಿಯಾದ ಗುರಿಗಾರಿಕೆ ಇಲ್ಲದೆ ದಾನ-ಧರ್ಮಗಳ ಕಾರ್ಯಕ್ರಮಗಳಾಗಿ ಕಾಣುತ್ತಿವೆ.

ಸಿದ್ಧರಾಮಯ್ಯನವರಿಗೆ ತಮ್ಮ ಬದುಕಿನ ಮಹತ್ವಾಕಾಂಕ್ಷೆಯನ್ನು ವೈಯಕ್ತಿಕ ನೆಲೆಯಿಂದ ಸಾರ್ವಜನಿಕ ನೆಲೆಗೆ ತಂದು ಅದನ್ನು ಅರ್ಥಪೂರ್ಣಗೊಳಿಸಿಕೊಳ್ಳಲು ಕಾಲ ಮಿಂಚಿಹೋಗುತ್ತಿದೆ. ಕೆಲವು ದಿಟ್ಟ ಹಾಗೂ ನಿಷ್ಠುರ ನಿರ್ಧಾರಗಳನ್ನು ತೆಗೆದುಕೊಳ್ಳಲು ಅವರ ಅಧಿಕಾರಾವಧಿಯ ನಿರ್ಣಾಯಕ ಘಟ್ಟವಿದು. ಸಿದ್ಧರಾಮಯ್ಯನವರ ಬಗ್ಗೆ ಇನ್ನೂ ಜನತೆಗೆ ಸಾಕಷ್ಟು ಸದಾಶಯವಿದೆ. ಅದನ್ನು ಸದುಪಯೋಗಪಡಿಸಿಕೊಳ್ಳಲು ಇದು ಕೊನೆಯ ಅವಕಾಶ ಎಂದಷ್ಟೇ ನಾವು ಈ ಸಂದರ್ಭದಲ್ಲಿ ಹೇಳಬಹುದು.

ಇನ್ನು ಮೋದಿ ಸರ್ಕಾರ ಒಂದು ವರ್ಷವನ್ನಷ್ಟೇ ಮುಗಿಸಿರುವುದರಿಂದ ಈವರೆಗಿನ ಸಂಚಿಕೆಗಳಲ್ಲಿ ಅದರ ಬಗ್ಗೆ ಬರೆದಿರುವ ಮಾತುಗಳಿಗೆ ಹೊರತಾದ ಕಟುವಾದ ವಿಮರ್ಶೆ ಸಲ್ಲದೇನೋ. ಜೊತೆಗೆ ಬಹಳ ವರ್ಷಗಳ ನಂತರ ದೇಶಕ್ಕೊಬ್ಬ ಜನತಾ ಪ್ರತಿನಿಧಿಯೆನಿಸಿದ (ಅವರ ಏಕವ್ಯಕ್ತಿ ಪ್ರದರ್ಶನಪ್ರಿಯತೆಯ ಹೊರತಾಗಿಯೂ) ಪ್ರಧಾನಮಂತ್ರಿಯೊಬ್ಬರು ದೊರೆತಿದ್ದು, ರಾಷ್ಟ್ರಾಡಳಿತಕ್ಕೆ ಒಂದು ರಾಜಕೀಯ ಉತ್ತರದಾಯಿತ್ವ ಮರಳಿರುವುದು ಒಂದು ಸ್ವಾಗತಾರ್ಹ ಅಂಶ. ಆದರೆ ದೇಶದಲ್ಲಿನ ಕೋಮು ಪರಿಸ್ಥಿತಿ ಸೂಕ್ಷ್ಮವಾಗುತ್ತಿದ್ದು ಅದರ ಹೊಣೆಯನ್ನು ಮೋದಿಯವರೇ ಹೊರಬೇಕಿದೆ. ಇನ್ನು ಮೋದಿಯವರ ಸಮರೋಪಾದಿಯ ವಿದೇಶಾಂಗ ವ್ಯವಹಾರಗಳು ಇನ್ನೂ ರಚನಾತ್ಮಕ ಫಲಿತಾಂಶಗಳನ್ನೇನೂ ನೀಡದಿದ್ದರೂ, ಕುತೂಹಲಕಾರಿಯಾಗಿಯಂತೂ ಇದೆ!

ಒಟ್ಟು ನೋಟದಲ್ಲಿ ಹೇಳುವುದಾದರೆ ತನ್ನ ಭರವಸೆಗಳ ಭಾರಕ್ಕೆ ತಾನೇ ಏದುಸಿರುಬಿಡುತ್ತಿರುವ ಸರ್ಕಾರವಿದು. ಅದರ ಭಾರಿ ಉದ್ಯಮಪರ, ರೈತ ಮತ್ತು ಶ್ರೀಸಾಮಾನ್ಯ ವಿರೋಧಿಯಾದ ನಿಲುವು ಅದರ ಮೊದಲ ಬಜೆಟ್‌ನಲ್ಲೇ-ತೆರಿಗೆ ರಿಯಾಯ್ತಿಗಳು ಮತ್ತು ಆಹಾರ, ಉದ್ಯೋಗ, ಆರೋಗ್ಯ, ಶಿಕ್ಷಣ ಇತ್ಯಾದಿಗಳಿಗೆ ಸಂಬಂಧಪಟ್ಟ ಸಾಮಾಜಿಕ ಕಾರ್ಯಕ್ರಮಗಳ ಮೇಲಿನ ಖರ್ಚಿನ ಗಣನೀಯ ಕಡಿತಗಳಲ್ಲಿ ಅಧಿಕೃತವಾಗಿಯೇ ವ್ಯಕ್ತವಾಗಿದೆ. ಜನಧನ್ ಯೋಜನೆ, ಪ್ರಧಾನಮಂತ್ರಿಯವರ ಅಪಘಾತ ಮತ್ತು ಜೀವ ವಿಮಾ ಯೋಜನೆಗಳು ಇದಕ್ಕೆ ಪರಿಹಾರ ಒದಗಿಸಲಾರವು. ಏಕೆಂದರೆ ಅವು ಈಗ ತಗ್ಗುತ್ತಿರುವ ಉತ್ಪಾದನೆ, ದೇಶೀಯ ಬಂಡವಾಳ ಹೂಡಿಕೆಗಳನ್ನು ಹೆಚ್ಚಿಸಲಾರವು ಹಾಗೂ ಹೆಚ್ಚುತ್ತಿರುವ ನಿರುದ್ಯೋಗವನ್ನು ತಹಬಂದಿಗೆ ತರಲಾರವು. ಇನ್ನು ಸರ್ಕಾರ ಹಗರಣ ಮುಕ್ತವಾಗಿದೆ ಎಂಬುದೇ ಅದರ ಹೆಗ್ಗಳಿಕೆಯಾಗದು. ಅದರ ಅಭಿವೃದ್ಧಿ ಮಾದರಿ ಎಷ್ಟು ಅಪಾಯಕಾರಿಯಾಗಿದೆ ಎಂಬುದನ್ನು ಇದೇ ಸಂಚಿಕೆಯ 'ಸಮಕಾಲೀನ' ಅಂಕಣದಲ್ಲಿ ವಿವರಿಸಲಾಗಿರುವುದನ್ನೂ ಓದುಗರು ಗಮನಿಸಬಹುದು.

**-ಸಂಪಾದಕ**

# ನಮ್ಮ ಸಮಾಜವಾದಿಗಳು : ಸರಳ ಸಜ್ಜನ ಹುಗಳವಳ್ಳಿ ಸುರೇಂದ್ರ



ಕರ್ನಾಟಕದ ಸಮಾಜವಾದಿ ಮಹಾನ್ ನಾಯಕ ಶಾಂತವೇರಿ ಗೋಪಾಲಗೌಡರ ಅನುಯಾಯಿಗಳಾಗಿ ಬಹಳ ಪ್ರಸಿದ್ಧರಾಗಿ ಎದ್ದುಕಾಣದಿದ್ದರೂ ಮರೆಯಲ್ಲಿದ್ದುಕೊಂಡು ಗೌಡರು ಪ್ರತಿಪಾದಿಸಿದ ಮೌಲ್ಯಗಳನ್ನು ಅನುಷ್ಠಾನಗೊಳಿಸಿ, ಸ್ವಚ್ಛ ರಾಜಕಾರಣ ಮಾಡಿ ಜನ ಮನ್ನಣೆಗಳಿಸಿದ ಕೆಲವರಿದ್ದರು;ಇದ್ದಾರೆ. ಅಂಥವರಲ್ಲಿ ಹುಗಳವಳ್ಳಿ ಸುರೇಂದ್ರ ಒಬ್ಬರಾಗಿದ್ದರು. ಗೋಪಾಲಗೌಡರ "ನೈಜ ವಾರಸುದಾರ" ಎಂದು ಗೌಡರ ಪತ್ನಿ ಸೋನಕ್ಕನವರಿಂದಲೇ ಮೆಚ್ಚುಗೆ ಪಡೆದ ಹೆಚ್ಚುಗಾರಿಕೆ ಅವರದು. ಗೋಪಾಲಗೌಡರೂ ಅವರನ್ನು ಬಹುವಾಗಿ ನೆಚ್ಚಿಕೊಂಡಿದ್ದರು.

ಹಾಗೆ ನೋಡಿದರೆ ತಾವೊಬ್ಬ ರಾಜಕೀಯ ಹೋರಾಟಗಾರನೆಂಬ ಕಾರಣಕ್ಕೆ ಸುರೇಂದ್ರ, ಗೌಡರ ಗಮನ ಸೆಳೆದವರಲ್ಲ. ಬದಲಿಗೆ ಒಬ್ಬ ಕ್ರೀಡಾಪಟುವಾಗಿ ಪರಿಚಿತರಾದವರು. ಕಳೆದ ಅರವತ್ತರ ದಶಕದಲ್ಲಿ ಕೋಣಂದೂರಿನಲ್ಲಿ ತಾಲ್ಲೂಕು ಮಟ್ಟದ ಬಾಲ್ ಬ್ಯಾಟ್ಮಿಂಟನ್ ಪಂದ್ಯಾವಳಿಯೊಂದು ನಡೆದಾಗ ಅದರಲ್ಲಿ ಗೆದ್ದ ಹುಗಳವಳ್ಳಿ ಸಹೋದರರೇ ಮೂವರು ಮುಖ್ಯ ಆಟಗಾರರಾಗಿದ್ದ ಕುಡುಮಲ್ಲಿಗೆ ತಂಡದ ಸುರೇಂದ್ರರನ್ನು ಕೋ.ಲಿಂಗಪ್ಪ ಗೌಡರಿಗೆ ಪರಿಚಯಿಸಿದರು. ಅಲ್ಲಿಂದ ತೊಡಗಿದ ಗೌಡರ ಆತ್ಮೀಯ ಸಂಬಂಧ, ಮನೆಗೆ ಹೋಗಿ ಊಟ ಮಾಡುವ, ಮದುವೆ ಮಾಡಿಸುವ, ಮಗನಿಗೆ ಹೆಸರಿಡುವವರೆಗೂ ಸಾಗಿತು. ಹೀಗೆ ತಮ್ಮ ವ್ಯಕ್ತಿತ್ವದಿಂದ ಗೌಡರ ಪ್ರೀತಿಗೆ ಸುರೇಂದ್ರ ಪಾತ್ರರಾದರು.

ಈಗ್ಗೆ ಸರಿಯಾಗಿ ಮೂರು ವರ್ಷಗಳ ಹಿಂದೆ (ಮೇ ೧೧, ೨೦೧೨) ನಿಧನರಾದ ಹೆಚ್.ಡಿ.ಸುರೇಂದ್ರ ಹುಟ್ಟಿದ್ದು ೧೯೩೮ರಲ್ಲಿ. ತೀರ್ಥಹಳ್ಳಿ ಸಮೀಪದ ಹುಗಳವಳ್ಳಿಯಲ್ಲಿ. ತಂದೆ ದಾಸಣ್ಣಗೌಡರು, ತಾಯಿ ಅಕ್ಕಮ್ಮ. ಮಲೆನಾಡು ಜಿಲ್ಲೆಗಳಲ್ಲಿ ಭೂ ಸುಧಾರಣೆಯ ಕಾನೂನು ಯಶಸ್ವಿಯಾಗಿ ಜಾರಿಯಾಗುವಲ್ಲಿ ಅದಕ್ಕಾಗಿ ಹೋರಾಡಿದ ಗೇಣಿದಾರರಷ್ಟೇ ಜಮೀನುದಾರರ ಪಾತ್ರವೂ ಮುಖ್ಯವಾಗಿತ್ತು. ಈ ಭಾಗದಲ್ಲಿ ಬಹಳಷ್ಟು ಜನ ದೊಡ್ಡ ಭೂ ಹಿಡುವಳಿದಾರರು ಸ್ವಪ್ರೇರಣೆಯಿಂದ ಉಳುವವರಿಗೆ ನೆಲದೊಡೆತನ ಬಿಟ್ಟುಕೊಟ್ಟರು. ಈ ಕಾರಣದಿಂದಾಗಿ ಬಹಳಷ್ಟು ಕಡೆ ಗಲಭೆ ಗೊಂದಲಗಳಿಲ್ಲದೇ ಕಾನೂನು ಜಾರಿಯಾಯಿತೆಂಬುದು ಐತಿಹಾಸಿಕ ವಾಸ್ತವ. ಗೋಪಾಲಗೌಡರ ಗುರುಗಳಾದ ಗುಬ್ಬಿಗ ಸದಾಶಿವರಾಯರು, ಗೆಳೆಯರಾದ ಗೇರುಗಲ್ಲು ಕರಿಬಸಪ್ಪಗೌಡರು, ಗೇಣಿದಾರರಿಗೆ ಜಮೀನು ಬಿಟ್ಟ ಉದಾರಿಗಳಾದರೆ ಕೊಪ್ಪಲು ಶಂಕರನಾರಾಯಣ ಭಟ್ಟರು ಮತ್ತು ಹುಗಳವಳ್ಳಿ ಸುರೇಂದ್ರ ಒಕ್ಕಲುಗಳಿಗೆ ಒಡೆತನ ಕೊಟ್ಟ ಹೃದಯವಂತ ಭೂಮಾಲೀಕರಾಗಿದ್ದಾರೆ.

ಬಾಲಕ ಸುರೇಂದ್ರ ಶಾಲಾ ದಿನಗಳಲ್ಲೇ ಗೋಪಾಲಗೌಡರ ಭಾಷಣಗಳನ್ನು ಕೇಳಿ ಚಳುವಳಿಗಳನ್ನು ನೋಡಿ ಪ್ರಭಾವಿತರಾಗಿದ್ದರು. ಲೋಹಿಯಾ ಸಿದ್ಧಾಂತಗಳನ್ನು ಸ್ವೀಕರಿಸಿದ್ದರು. ಮನೆಯಲ್ಲಿ ತಂದೆಯೊಂದಿಗೆ ತಮ್ಮ ಗೇಣಿದಾರರ ಮನೆಗಳಿಗೆ ವಸೂಲಿಗೆ ಹೋಗುತ್ತಿದ್ದ ಎಳೆಯನ ಮನಸ್ಸಿನ ಮೇಲೆ ದುಡಿವ ಬಡವರ ಬವಣೆಗಳು ಆವರ ನೋವು ಸಂಕಟಗಳು ಅಳಿಸಲಾಗದ ಅಚ್ಚು ಒತ್ತಿದ್ದವು. ಸಮಾಜವಾದದಲ್ಲಿ ಇದಕ್ಕೆ ಪರಿಹಾರವಿದೆ ಎಂಬುದನ್ನು ಮನಗಂಡ ಸುರೇಂದ್ರ, ತಮಗೆ ಯಜಮಾನಿಕೆ ಬರುತ್ತಿದ್ದಂತೆ ಒಕ್ಕಲುಗಳು ಕೇಳುವ ಮೊದಲೇ ಅವರ ಗೆಯ್ಮೆಯ ಗದ್ದೆ ತೋಟಗಳನ್ನು ಅವರವರಿಗೇ ಬರೆದುಕೊಟ್ಟು ಗೌರವದಿಂದ ನಮಿಸಿ ಬಂದರು.

ತಾನು ಒಪ್ಪಿದ ನಂಬಿದ ಆದರ್ಶಕ್ಕೆ ತನ್ನನ್ನೇ ಒಡ್ಡಿಕೊಂಡು ಅನುಷ್ಠಾನಗೊಳಿಸಿ ಆದ ನಷ್ಟವನ್ನು ಲೆಕ್ಕಿಸದೇ ಹೊಳೆಹೊನ್ನೂರು ಸಮೀಪ ಕನಸಿನಕಟ್ಟೆಯಲ್ಲಿ ನೆಲೆಸಿ ಸ್ವತಃ ದುಡಿಯುತ್ತ ಸಮಾಜವಾದವನ್ನು ನನಸಾಗಿಸಿದ ಅಪರೂಪದ ವ್ಯಕ್ತಿ ಸುರೇಂದ್ರ. ದುಡಿಮೆಗಾಗಿ ಬಹುಮುಖ ಕೌಶಲಗಳನ್ನು ಅವರು ಕರಗತ ಮಾಡಿಕೊಂಡಿದ್ದರು. ಅವರ ಮಗ ನವೀನ್‌ಚಂದ್ರ ಹೇಳುವಂತೆ ಅವರು ಕೃಷಿಕಾರ್ಮಿಕ, ಪ್ಲಂಬರ್, ಮೆಕ್ಯಾನಿಕ್, ಎಲೆಕ್ಟ್ರೀಷಿಯನ್ ಎಲ್ಲವೂ ಆಗಿದ್ದರು. ಇತರ ರಾಜಕಾರಣಿಗಳಂತೆ ಬಿಳಿ ಬಟ್ಟೆಯವರಾಗಿರದೇ ಕೈ ಮೈ ಕೆಸರು ಮಾಡಿಕೊಂಡು ದುಡಿಯುತ್ತಿದ್ದು ದುಡಿಯುತ್ತಲೇ ಅಸುನೀಗಿದವರು. ತಮ್ಮ ಜಮೀನಿನಿಂದ ತೆಂಗಿನಕಾಯಿ ಆಯ್ದು ಮನೆಗೆ ತರಲು ಟಿಲ್ಲರ್ ಚಾಲನೆ ಮಾಡುತ್ತಿದ್ದಾಗಲೇ ಹೃದಯಾಘಾತಕ್ಕೊಳಗಾಗಿ ಕುಸಿದು ಬಿದ್ದರು. (ಹುಟ್ಟಿನಿಂದ ಅವರ ಹೃದಯದಲ್ಲಿ ಒಂದು ರಂಧ್ರವಿತ್ತಂತೆ) ಕಠಿಣ ದುಡಿಮೆಗಾರರಾದರೂ, ಅತ್ಯಂತ ಮೃದು ಹೃದಯಿ, ಮೃದು ಮಾತುಗಾರ ಸುರೇಂದ್ರ. ಯಾರನ್ನೂ ಏಕವಚನದಲ್ಲಿ ಮಾತನಾಡಿಸುವವರಲ್ಲ. ಸಣ್ಣವರು ದೊಡ್ಡವರೆಂದು ಭೇದ ಬಗೆದವರಲ್ಲ. ಕಷ್ಟದಲ್ಲಿರುವವರನ್ನು ಕಂಡು ಅವರ ಹೃದಯ ಕರಗಿ ಹೋಗುತ್ತಿತ್ತು. ಎಷ್ಟೋ ಮಂದಿ ಮಿತ್ರರಿಗೆ ದೀನ–ದಲಿತರಿಗೆ ಸಹಾಯ ಮಾಡುತ್ತಿದ್ದರು. ತಮ್ಮ ಆಪ್ತ ಗೆಳೆಯರಾದ ಕೋಣಂದೂರು ಲಿಂಗಪ್ಪ ಶಾಸಕರಾಗಿ ಬೆಂಗಳೂರಿನಲ್ಲಿರುತ್ತಿದ್ದಾಗ ಊರಿನಲ್ಲಿ ಸಂಕಷ್ಟದಿಂದ ಜೀವನ ನಡೆಸುತ್ತಿದ್ದ ಅವರ ತಾಯಿ, ಪತ್ನಿ, ಮಕ್ಕಳಿಗೆ ಅಕ್ಕಿ, ಕೊಬ್ಬರಿ ಮತ್ತಿತರ ಸಾಮಗ್ರಿಗಳನ್ನು ಆಗಾಗ ತಂದುಕೊಡುತ್ತಿದ್ದುದನ್ನು ಲಿಂಗಪ್ಪನವರ ಸಹಧರ್ಮಿಣಿ ಗಿರಿಜಕ್ಕ ಸ್ಮರಿಸಿಕೊಳ್ಳುತ್ತಾರೆ. ಸ್ವತಃ ಅತ್ಯಂತ ಸರಳ ಸ್ವಚ್ಛವಾಗಿ ಬದುಕಿದ ಅವರು ಬಹುತೇಕ ಸಮಾಜವಾದಿಗಳ ಸಾಧಾರಣ ದೌರ್ಬಲ್ಯವಾದ ಸೆರೆ ಕುಡಿಯುವುದಿರಲಿ, ಸಿಗರೇಟು ನಶ್ಯಗಳನ್ನೂ ಹತ್ತಿರ ಸೇರಿಸಿದವರಲ್ಲ. ದುರಭ್ಯಾಸಗಳನ್ನು ಕೆಡಕುಗಳನ್ನು ಅವರು ಸಹಿಸುತ್ತಿರಲಿಲ್ಲ. ಅಂಥ ಸಂದರ್ಭಗಳಲ್ಲಿ ಅವರ ನುಡಿ ನೇರ ನಿಷ್ಠುರವಾಗುತ್ತಿತ್ತು. ಗೋಪಾಲಗೌಡರಿಗೇ ನೀವು ಕುಡಿಯಬಾರದು ಎಂದು ಹೇಳುತ್ತಿದ್ದರಂತೆ. ಮೂರನೇ ಮಗುವಿನ ತಂದೆಯಾಗಲು ಸಿದ್ಧತೆ ನಡೆಸಿದ್ದ ಲಿಂಗಪ್ಪನವರಿಗೆ ಒಂದು ಎರಡನ್ನು ಸಾಕುವುದೇ ಕಷ್ಟವಾಗಿರುವಾಗ ಇನ್ನೊಂದು ಯಾಕೆ ಬೇಕಿತ್ತು ಎಂದು ಕೇಳಿದ್ದರಂತೆ. ಅವರ ಕಠಿಣ ನುಡಿಗಳ ಹಿಂದೆ ಇತರರ ಹಿತಚಿಂತನೆ ಇರುತ್ತಿತ್ತೇ ಹೊರತು ಅಹಂಕಾರವಲ್ಲ. ಮಾತು ಮತ್ತು ಕ್ರಿಯೆ ಒಂದಾಗಿರಬೇಕು ಎಂಬುದು ಅವರ ಧೃಡ ನಂಬಿಕೆಯಾಗಿತ್ತು. ಹಾಗಿಲ್ಲದವರನ್ನು ನೋಡಿ ನೋಯುತ್ತಿದ್ದರು, ಮರುಗುತ್ತಿದ್ದರು.

ಸ್ವಾರ್ಥತ್ಯಾಗ ಮತ್ತು ಪ್ರಾಮಾಣಿಕತೆ ಅವರಲ್ಲಿ ಎದ್ದುಕಾಣುವ ಗುಣಗಳು. ಗೋಪಾಲಗೌಡರು ಅಸ್ವಸ್ಥರಾಗಿ ಹಾಸಿಗೆ ಹಿಡಿದಾಗ ಎದುರಾದ(೧೯೭೨) ವಿಧಾನಸಭಾ ಚುನಾವಣೆಯಲ್ಲಿ ಗೌಡರ ಸ್ಥಾನದಲ್ಲಿ ಸ್ಪರ್ಧಿಸಲು ಸುರೇಂದ್ರರ ಹೆಸರನ್ನೇ ಗೌಡರು ಸೂಚಿಸಿದ್ದರು. ಅದನ್ನು ಒಪ್ಪದ ಸುರೇಂದ್ರ ಮಿತ್ರ ಕೋಣಂದೂರು ಲಿಂಗಪ್ಪನವರಿಗೆ ಪ್ರಾಂಜಲ ಮನಸ್ಸಿನಿಂದ ಸ್ಥಾನ ಬಿಟ್ಟುಕೊಟ್ಟರು. ಅಷ್ಟೇ ಅಲ್ಲದೇ ಅವರ ಗೆಲುವಿಗಾಗಿ ಹಗಲಿರುಳು ಶ್ರಮಿಸಿದರು. ಗೌಡರ ಕಾಲಾನಂತರ ಇನ್ನೊಂದು ಚುನಾವಣೆಯಲ್ಲಿ ಗೌಡರ ಮಗ ರಾಮಮನೋಹರರನ್ನು ಸ್ಪರ್ಧೆಗೆ ಇಳಿಸಿ, ಅವರು ಸೋಲುತ್ತಾರೆಂಬುದು ಗೊತ್ತಿದ್ದೂ ಸ್ವತಃ ಖರ್ಚು ಮಾಡಿಕೊಂಡು ಪ್ರಚಾರ ನಡೆಸಿದರು.

೧೯೮೯ರ ಚುನಾವಣೆಯಲ್ಲಿ ಹೆಚ್.ಡಿ. ದೇವೇಗೌಡರ ಒತ್ತಾಯಕ್ಕೆ ಮಣಿದು ತಾವೇ ಅಭ್ಯರ್ಥಿಯಾಗಬೇಕಾಗಿ ಬಂದಾಗ ಖರ್ಚಿಗಾಗಿ ಧನ ಸಹಾಯ ಮಾಡಿದವರಿಗೆ ಚುನಾವಣಾ ನಂತರ ಲೆಕ್ಕಾಚಾರ ಒಪ್ಪಿಸಿ ಉಳಿದ ಹಣವನ್ನು ಅವರವರಿಗೆ ಹಿಂತಿರುಗಿಸಿ ನಿಸ್ಪೃಹತೆಯನ್ನು ಮೆರೆದರು.

ಹೆಚ್.ಡಿ.ಸುರೇಂದ್ರ ಒಳ್ಳೆಯ ವಾಗ್ಮಿಯೇನಲ್ಲ. ಭಾಷಣ ಬಿಗಿಯುವಲ್ಲಿ ಅವರು ಹಿಂದೆ. ಅವರದೇನಿದ್ದರೂ ಕೆಲಸ ಮಾಡಿ ತೋರುವುದು. ಅವರು ರಾಜಕೀಯ ಪ್ರವೇಶಿಸುವ ಮೊದಲೇ ಕಾಗೋಡು ಚಳುವಳಿ ಮುಗಿದು ಹೋಗಿತ್ತು. ಲೋಹಿಯಾ ನೇತೃತ್ವದ ರಾಷ್ಟ್ರವ್ಯಾಪಿ ಭೂ ಆಕ್ರಮಣ ಚಳುವಳಿಯಲ್ಲಿ ಭಾಗಿಯಾಗಿ ಅವರು ಬಳ್ಳಾರಿ ಜೈಲಿನಲ್ಲಿ ಸೆರೆವಾಸ ಅನುಭವಿಸಿದ್ದರು. ಅನೇಕ ತಾಲ್ಲೂಕು, ಜಿಲ್ಲಾ ಮಟ್ಟದ ಚಳುವಳಿಗಳಲ್ಲಿ ಭಾಗವಹಿಸಿದ್ದರು. ಊರವರು, ಸರೀಕರು, ಅಸಹಾಯಕರಿಗೆ ಅನೇಕ ಬಗೆಯಲ್ಲಿ ನೆರವಾಗುತ್ತಿದ್ದರು. ಆದ್ದರಿಂದಲೇ ಆಂತರ್ಯದಲ್ಲಿ ಸುರೇಂದ್ರರನ್ನು ಬಹುವಾಗಿ ಪ್ರೀತಿಸುವ ಮೆಚ್ಚುವ ಅವರ ಅಭಿಮಾನಿಗಳೂ, ಅನುಯಾಯಿಗಳೂ ಬಹು ಸಂಖ್ಯೆಯಲ್ಲಿ ಇದ್ದರು. ಒಟ್ಟಾರೆ ಸುರೇಂದ್ರ ಇತರ ಎಷ್ಟೋ ಮಂದಿ ಸಮಾಜವಾದಿಗಳಂತೆ ಹಾರಾಟ, ಚೀರಾಟ, ಆರ್ಭಟ, ಆಕ್ರಮಣಶೀಲತೆಗಳ ಪ್ರಖರ ಪ್ರಭಾರಕರನಂತಲ್ಲದೇ ಹಿತವಾದ ನಡೆ ನುಡಿಯ ತಣ್ಣನೇ ಕಾಂತಿಯ ಹಿಮಕರನಂತ ನಾಯಕರಾಗಿದ್ದರೆನ್ನಬಹುದು.

**–ಡಾ. ಜೆ.ಕೆ. ರಮೇಶ**

# ಪ್ರೊ. ಬಿ. ಕೃಷ್ಣಪ್ಪ ನೆನಪಿನ ಮಾಲೆ-೩೨

–ಇಂದಿರಾ ಬಿ. ಕೃಷ್ಣಪ್ಪ

## ಚಂದ್ರಗುತ್ತಿಯಲ್ಲಿನ ಆ ರುದ್ರಭಯಂಕರ ದಿನ!

**ಧಾ**ರ್ಮಿಕತೆಯ ಹೆಸರಿನಲ್ಲಿ ತಳಸಮುದಾಯದ ಮಹಿಳೆಯರ ಮೇಲೆ ಹೇರಲ್ಪಟ್ಟ ದೇವದಾಸಿ ಪದ್ಧತಿ, ಗಂಧದುಡಿಕೆ, ಬೆತ್ತಲೆ ಸೇವೆ ಇತ್ಯಾದಿ ಅಮಾನವೀಯ ಆಚರಣೆಗಳು ಮಹಿಳೆಯರ ಲೈಂಗಿಕ ಗುಲಾಮಗಿರಿಯನ್ನು ಸ್ಥಿರೀಕರಿಸುವ ಪುರುಷ ಪ್ರಧಾನ್ಯತೆಯ ಕ್ರೂರ ವ್ಯವಸ್ಥೆಯಾಗಿ ಬೆಳೆದು ಬಂದಿವೆ. ಇಂಥಹ ಬೆತ್ತಲೆ ಸೇವೆ ಪದ್ಧತಿಯು ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ, ಚಂದ್ರಗುತ್ತಿಯಲ್ಲಿ ಪರಂಪರಾನುಗತವಾಗಿ ಗುತ್ತವ್ವನ ಅಥವಾ ರೇಣುಕಾ ದೇವಿಯ ಭಕ್ತಿಯ ಹೆಸರಿನಲ್ಲಿ ಮಹಿಳೆಯರ ಗೌರವವನ್ನು ಹರಾಜಿಗಿಡುವ ಮತ್ತು ಅದನ್ನು ನೋಡಿ ಸಂಭ್ರಮಿಸುವ ಒಂದು ಆಚರಣೆಯಾಗಿ ಶತಮಾನಗಳಿಂದಲೂ ನಡೆದುಬರುತ್ತಿದೆ. ಪ್ರಭುತ್ವ ಸಹ ಇಂಥಹ ಅನಾಗರೀಕ ಆಚರಣೆಯನ್ನು ಪೋಷಿಸುವ, ಸಕಲ ಸೌಲಭ್ಯವನ್ನೊದಗಿಸಿ ಅದನ್ನು ಸಂಸ್ಕೃತೀಕರಣಗೊಳಿಸುವ ಧರ್ಮನಿರಪೇಕ್ಷತೆಯ ಹುಸಿ ಹುನ್ನಾರವನ್ನೇ ಪ್ರದರ್ಶಿಸುತ್ತದೆ.

ಇಂಥಹ ಅನಾಗರೀಕತೆಯ ವಿರುದ್ಧ, ಕರ್ನಾಟಕ ದಲಿತ ಸಂಘರ್ಷ ಸಮಿತಿಯು, ಪ್ರೊ. ಬಿ. ಕೃಷ್ಣಪ್ಪನವರ ನೇತೃತ್ವದಲ್ಲಿ ವೈಚಾರಿಕ ಸಮರವನ್ನೇ ಸಾರಿತು. ೧೯೮೪ರಲ್ಲಿ ಚಂದ್ರಗುತ್ತಿಯಲ್ಲಿ ಜಾತ್ರೆ ನಡೆಯುತ್ತಿದ್ದ ದಿನದಂದೇ ಪ್ರೊ. ಬಿ.ಕೆ.ಯವರು ಅವರ ಅಧ್ಯಾಪಕ ಮಿತ್ರರಾದ ಚಂದ್ರಶೇಖರಯ್ಯ, ವೇಣುಗೋಪಾಲ್ ಮತ್ತು ಗುರಪ್ಪರವರೊಂದಿಗೆ, ಅಲ್ಲೇನು ನಡೆಯುತ್ತಿದೆ ಎಂದು ಕಣ್ಣಾರೆ ಕಾಣಲು ಹೋಗಿದ್ದರು. ಅಲ್ಲಿ ಕಂಡ ದೃಶ್ಯಗಳನ್ನು ಅವರ ಮಾತಿನಲ್ಲೇ ಹೇಳುವುದಾದರೆ, 'ಬೆತ್ತಲೆ ಮೆರವಣಿಗೆಗೆ ವಯಸ್ಸಿನ ಮಿತಿ ಇಲ್ಲ. ಎರಡು ವರ್ಷದ ನಗ್ನ ಮಗುವನ್ನು ಬೆತ್ತಲೆ ತಾಯಿಯೊಬ್ಬಳು ಸೊಂಟದಲ್ಲಿ ಕವುಚಿಕೊಂಡು ಓಡುವ ದೃಶ್ಯ ನಮ್ಮ ದುಃಖದ ಕಟ್ಟೆಯನ್ನೇ ಒಡೆಯಿತು. ಬೆಟ್ಟದ ಬುಡದಲ್ಲಿ ೬೦ ವರ್ಷದ ಬೆತ್ತಲೆ ಮುದುಕನೊಬ್ಬ ಬಿಸಿಲಿನ ತಾಪ ತಾಳಲಾರದೆ ಮೂರ್ಛೆ ಹೋಗಿದ್ದ. ಜನ ಸುತ್ತುಗಟ್ಟಿ ಆತನ ತಲೆಗೆ ನೀರು ತಟ್ಟುತ್ತಿದ್ದರು. ೧೨ ವರ್ಷದ ಬೆತ್ತಲೆ ಹುಡುಗಿಯನ್ನು ನಗ್ನ ತಾಯಿಯೊಬ್ಬಳು ಕೈಹಿಡಿದುಕೊಂಡು ಸಾಗುತ್ತಿದ್ದಳು. ಐದು ವರ್ಷದ ಹೆಣ್ಣು ಮಗು ನಡೆಯಲು ಶಕ್ತಿ ಇಲ್ಲದೆ ಅಳುತ್ತಿತ್ತು. ತಂದೆ "ಉಧೋ ಉಧೋ" ಎನ್ನುತ್ತಾ ಬಲವಂತವಾಗಿ ಅದನ್ನು ನಡೆಸಿಕೊಂಡು ಹೋಗುವ ದೃಶ್ಯ ಅಮಾನುಷವಾಗಿತ್ತು. ಬಾಲ್ಯದಿಂದಲೇ ಮಕ್ಕಳನ್ನು ಇಂಥಾ ಮೃಗೀಯ ಪದ್ಧತಿಗೆ ಗುರಿ ಮಾಡಿ, ಅವರ ಭವಿಷ್ಯವನ್ನೇ ಕತ್ತಲಾಗಿಸುತ್ತಾರೆ. ಈ ದೈವೀ ಕ್ರೌರ್ಯ ಎಣೆಯಿಲ್ಲದ್ದು, ೧೦-೧೫ ವರ್ಷದ ಹುಡುಗಿಯರು ೨೦ ವರ್ಷದ ನವ ಯುವತಿಯರು, ಗೃಹಿಣಿಯರು, ಅವಿವಾಹಿತೆಯರು, ೬೦ ವರ್ಷದ ಮುದುಕಿಯರು, ಮಧ್ಯ ವಯಸ್ಸಿನ ಹೆಂಗಸರು, ಈ ಸೇವೆಗೆ ವಯೋಮಾನದ ಅಂತರವೇ ಇಲ್ಲ. ಒಂದು ಕಡೆ ೬೦ ವರ್ಷದ ಮುದುಕಿಯೊಬ್ಬಳು, ತಲೆ ಮೇಲೆ ಬುಟ್ಟಿ ಹೊತ್ತುಕೊಂಡು ಹೋಗುತ್ತಿದ್ದು, ಆಕೆಯ ೪೦ ವರ್ಷದ ಗಂಡು ಮಕ್ಕಳು ಅಮ್ಮನ ಹಿಂದೆ ನಡೆಯುತ್ತಿದ್ದರು. ಮತ್ತೊಂದು ಕಡೆ ೨೦ ವರ್ಷದ ಅವಿವಾಹಿತ ತರುಣಿ ಬೆತ್ತಲೆ ಹೋಗುತ್ತಿದ್ದಳು. ಅವರ ತಂದೆ ಪಕ್ಕದಲ್ಲಿ ಬಿಂದಿಗೆ ಹೊತ್ತು ಹೋಗುತ್ತಿದ್ದ. ೨ ವರ್ಷದ ಮಗ ತಾಯಿಯ ನಗ್ನತೆಯನ್ನು, ೪೦ ವರ್ಷದ ಮಕ್ಕಳು, ೬೦ ವರ್ಷದ ತಾಯಿಯ, ನಗ್ನತೆಯನ್ನು ೩೦ ವರ್ಷದ ಮಗಳ ನಗ್ನತೆಯನ್ನು ಕಾಣುವ ತಂದೆಯ ಚಿತ್ರ ನಾವು ಇತಿಹಾಸದಲ್ಲಿ ಓದುವ ಕಾಡು ಮನುಷ್ಯರ ಅನಾಗರೀಕ ಬದುಕನ್ನು ನೆನಪಿಗೆ ತರುತ್ತದೆ.'

ಈ ದೃಶ್ಯಗಳನ್ನು ಕಂಡಂಥ ಕೃಷ್ಣಪ್ಪ "ನನ್ನ ಜನಗಳಿಗೆ ಯಾವಾಗ ಬುದ್ಧಿ ಬರುತ್ತಪ್ಪಾ" ಎಂದು ಬಿಕ್ಕಿ ಬಿಕ್ಕಿ ಅಳುತ್ತಾ ಸೀಮೆಸೀಗೆ ಲಂಟಾನಿನ ಪೊದೆಯಲ್ಲಿ ಕುಸಿದು ಬಿಟ್ಟರು ಎಂದು ಅವರ ಜೊತೆಗಿದ್ದ ಚಂದ್ರಶೇಖರಯ್ಯನವರೂ ಗದ್ಗದಿತರಾಗಿ ಈಗಲೂ ಜ್ಞಾಪಿಸಿಕೊಳ್ಳುವರು. ಈ ಮೌಢ್ಯತೆ, ಶೋಷಣೆಯನ್ನು ಕೊನೆಗಾಣಿಸಬೇಕೆಂದು ಕೃಷ್ಣಪ್ಪನವರು ಆಗಲೇ ನಿರ್ಧರಿಸಿದರು. ಮರುವರ್ಷ ಅಂದರೆ ೧೯೮೫ರಲ್ಲಿ ಚುನಾವಣೆಯ ಕಾರಣದಿಂದ, ತೀವ್ರತರವಾದ ಹೋರಾಟ ಹಮ್ಮಿಕೊಳ್ಳಲಾಗಲಿಲ್ಲ. ಆದರೂ ದಸಂಸ, ಕರಪತ್ರ ವಿತರಿಸಿ, ಜನರಲ್ಲಿ ಜಾಗೃತಿಯನ್ನುಂಟು ಮಾಡಲು ಪ್ರಯತ್ನಿಸಿತು ಮತ್ತು ಬೃಹತ್ ಪ್ರತಿಭಟನಾ ಮೆರವಣಿಗೆ ಮಾಡುವುದರ ಮುಖಾಂತರ ಸರ್ಕಾರಕ್ಕೆ ಮತ್ತು ಜಿಲ್ಲಾಡಳಿತಕ್ಕೆ ಅವರ ಕರ್ತವ್ಯದ ಅರಿವನ್ನು ಮೂಡಿಸಲು ಪ್ರಯತ್ನಿಸಿತು. ಕೃಷ್ಣಪ್ಪ, ಚಂದ್ರಗುತ್ತಿ ಬೆತ್ತಲೆ ಸೇವೆಯ ಸಚಿತ್ರ ವರದಿಯನ್ನು ತಯಾರಿಸಿ, ಮೊದಲು ಪ್ರಜಾವಾಣಿ ಪತ್ರಿಕೆಗೆ ಕಳುಹಿಸಿದರು. ಆ ಪತ್ರಿಕೆ, ಈ ಲೇಖನ ವಿವಾದಕ್ಕೆ ಎಡೆಯಾಗುತ್ತದೆಂದು ಹೇಳಿ ಹಿಂತಿರುಗಿಸಿತ್ತು. ತದನಂತರ ಅದು 'ಲಂಕೇಶ್ ಪತ್ರಿಕೆ'ಯಲ್ಲಿ ಪ್ರಕಟವಾಯಿತು. ಈ ವಿಷಯದಲ್ಲಿ ವಿಧಾನಸಭೆಯಲ್ಲಿ ದೊಡ್ಡ ಚರ್ಚೆಯೇ ನಡೆಯಿತು. ಅಂದಿನ ಮುಖ್ಯಮಂತ್ರಿ ಜೆ.ಹೆಚ್.ಪಟೇಲರು, ಗೃಹಮಂತ್ರಿ ರಾಚಯ್ಯನವರೂ, "ಅಮಾನುಷ ಬೆತ್ತಲೆ ಆಚರಣೆ ನಿಲ್ಲಿಸಲು ಸೂಕ್ತ ಕ್ರಮ ಕೈಗೊಳ್ಳುವುದಾಗಿ" ಹೇಳಿಕೆ ಕೊಟ್ಟರು.ಇಷ್ಟೆಲ್ಲಾ ಆದಾಗ್ಯೂ, ಸ್ಥಳೀಯ ಶಾಸಕರಾದ ಸಮಾಜವಾದಿ ಬಂಗಾರಪ್ಪನವರು, ತುಟಿಪಿಟಿಕ್ಕೆನ್ನದೆ ಇದ್ದರು.



ಚಂದ್ರಗುತ್ತಿಯ ರೇಣುಕಾದೇವಿಯ ಗುಡಿ

ಪುನಃ ಮರುವರ್ಷ ಅಂದರೆ ೧೯೮೬ರ ಮಾರ್ಚ್ ತಿಂಗಳಲ್ಲಿ ನಡೆಯುವ ಜಾತ್ರೆ ಸಂದರ್ಭದಲ್ಲಿ ಹೋರಾಟಕ್ಕೆ ಪೂರ್ವಭಾವಿ ಸಿದ್ಧತೆಗಳು ದಸಂಸದಿಂದ ನಡೆಸುತ್ತಾ, ಕೃಷ್ಣಪ್ಪ, ಜಿಲ್ಲಾಡಳಿತ ಮತ್ತು ವಿವಿಧ ಜನಪರ ಸಂಘಟನೆಗಳೊಟ್ಟಿಗೆ, ಜನರಲ್ಲಿ ಅರಿವು ಮೂಡಿಸುವ ಹಾಡು-ನಾಟಕ-ಚರ್ಚೆ-ಸಭೆ-ವಿಚಾರ ಗೋಷ್ಠಿಗಳನ್ನು ಒಂದು ತಿಂಗಳಿಂದಲೂ ಆ ಪ್ರದೇಶದಲ್ಲಿ ನಡೆಸಲು ಕ್ರಮ ಕೈಗೊಂಡರು. ರಾಜೇಂದ್ರ ಚೆನ್ನಿಯವರು "ಬೆತ್ತಲೆ ಸೇವೆ" ನಾಟಕ ಬರೆದರು. ಓ.ಎಲ್. ನಾಗಭೂಷಣಸ್ವಾಮಿ, ಎಂ. ಚಂದ್ರಶೇಖರಯ್ಯನವರ ನಿರ್ದೇಶನದಲ್ಲಿ ಬೀದಿ ನಾಟಕ, ಸೊರಬ ಸುತ್ತಮುತ್ತಲಿನ ಗ್ರಾಮಗಳಲ್ಲಿ ಪ್ರದರ್ಶನಗೊಂಡಿತು. ದಲಿತ ಕಲಾಮಂಡಳಿಯ ಹಾಡಿನ ತಂಡ ಹಳ್ಳಿಹಳ್ಳಿಗಳಲ್ಲಿ ಸಂಚರಿಸಿ ಜಾಗೃತಿ ಮೂಡಿಸಿತ್ತು. ಕೃಷ್ಣಪ್ಪ ಮತ್ತು ದಸಂಸ ಹೋರಾಟಪಡೆ ಮತ್ತು ಶಿವಮೊಗ್ಗ ಜಿಲ್ಲೆ ವಿಚಾರ ವೇದಿಕೆಯವರು, ರಾಚಪ್ಪ, ಸಣ್ಣರಾಮು, ಎಂ.ಬಿ. ನಟರಾಜ್, ಅಣತಿ ರಾಜಪ್ಪ ಮಾಸ್ತರ್ ಮುಂತಾದ ಅಧ್ಯಾಪಕ ಮಿತ್ರರು, ಸುಮಾರು ಒಂದೂವರೆ ತಿಂಗಳು ಸೊರಬವನ್ನೇ ಸುತ್ತುವರಿದು ಹಗಲಿರುಳೆನ್ನದೆ, ಬೆತ್ತಲೆಸೇವೆ ನಿಷೇಧ ಜನಜಾಗೃತಿ ಭೂಮಿಕೆಯನ್ನು ಸಜ್ಜುಗೊಳಿಸಿದರು. ಅಲ್ಲೇ ವಿಶೇಷ ತಹಶೀಲ್ದಾರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ರುದ್ರಪ್ಪ ಹನಗವಾಡಿಯವರು, ಈ ಜಾಗೃತಿ ಕಾರ್ಯಕ್ರಮದಲ್ಲಿ ಅಧಿಕಾರಿ ಮಿತ್ರರಾಗಿ ತೊಡಗಿಕೊಂಡಿದ್ದರು.

ಸೊರಬಕ್ಕೆ ತೆರಳುವಾಗ ಕೃಷ್ಣಪ್ಪ, ಅವರು ವಾಪಸ್ಸು ಬರುವ ದಿನವನ್ನು ಖಚಿತವಾಗಿ ತಿಳಿಸಿರಲಿಲ್ಲ. ಅವರ ಸಿದ್ಧತಾ ಭರಾಟೆಗಳು, ಮನೆಯಲ್ಲೇ ನಡೆಯುವ ಚರ್ಚೆಗಳಲ್ಲಿ ಭಾಗಿಯಾಗುತ್ತಾ, ಲೇಖನ ಸಾಮಗ್ರಿಗಳಿಂದ ಮಾಹಿತಿ ಪಡೆದುಕೊಂಡಿದ್ದ, ನಾನೂ ಈ ಹೋರಾಟದಲ್ಲಿ ಭಾಗಿಯಾಗಬೇಕೆಂದು ತೀರ್ಮಾನಿಸಿದೆ. ಬಹಳ ದಿನ ರಜೆ ದೊರಕದ ಕಾರಣ, ೩-೪ ದಿನಗಳಾದರೂ ಅಲ್ಲಿನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಸಿದ್ಧತೆ ನಡೆಸಿದ್ದೆ. ಈ ಐತಿಹಾಸಿಕ ಹೋರಾಟದಲ್ಲಿ ಇಡೀ ಕುಟುಂಬ ಭಾಗವಹಿಸಬೇಕೆಂಬ ಇಚ್ಛೆಯಿದ್ದರೂ ಮಕ್ಕಳ ಪರೀಕ್ಷೆಗಳ ಸಮಯವಾದ್ದರಿಂದ ನಾನಂತೂ ಹೊರಡುವುದು ನಿಶ್ಚಿತವಾಗಿತ್ತು. ನನ್ನ ಸಾಕುತಾಯಿ 'ಬಚ್ಚಿಮ್ಮಾ'ರೂ ನನ್ನೊಡನೆ ಹೊರಟೇ ಬಿಟ್ಟರು.

ನಾನು ಸೊರಬಕ್ಕೆ ಬರುವ ಕಿಂಚಿತ್ ಸುಳಿವೂ ಕೃಷ್ಣಪ್ಪನವರಿಗೆ ಇರಲಿಲ್ಲ.

ನಾನು ಬಚ್ಚಿಮ್ಮಾ, ತೀರಾ ಅಗತ್ಯ ಪರಿಕರಗಳೊಂದಿಗೆ ಚಂದ್ರಗುತ್ತಿಗೆ ೨೦.೩.೧೯೮೬ರಂದು ಬೆಳಗಿನ ೯–೧೦ ಗಂಟೆಗೆ ಬಂದು ಸೇರಿದೆವು. ವರದಾ ನದಿಯ ನದಿಯ ತಟದಿಂದ ಆರಂಭವಾದ ಬೆತ್ತಲೆ ಸೇವೆ ವಿರುದ್ಧದ ಸಮರವನ್ನು ವೀಕ್ಷಿಸುತ್ತಾ ನಮ್ಮ ಒಡನಾಡಿಗಳನ್ನು ಹುಡುಕುತ್ತಾ, ನಾವು ಅತಿ ಎಚ್ಚರಿಕೆಯಿಂದ, ಸಮರಾಂಗಣವನ್ನು ಹಾದು, ಬೆಟ್ಟವನ್ನು ಸೇರಿದೆವು. ದಾರಿಗುಂಟ, ನಾವು ಕಂಡ ಭೀಭತ್ಸ ದೃಶ್ಯಗಳು, ಭೀಕರತೆ–ಕರುಣೆ–ಅವಿವೇಕ–ನಿರ್ಲಕ್ಷ್ಯ–ಬೇಜವಾಬ್ದಾರಿಗಳನ್ನು ಪ್ರತಿಬಿಂಬಿಸುತ್ತಿತ್ತು.

ಹಾಲು ಕುಡಿವ ಕಂದಮ್ಮನನ್ನು ಬೆತ್ತಲೆ ಮಾಡಿ ತಾನೂ ಬೆತ್ತಲಾಗುವ ತಾಯಿ, ಪತಿ–ಪತ್ನಿಯನ್ನು ಬೆತ್ತಲು ಮಾಡುವುದು, ವಯಸ್ಕ ಗಂಡು ಮಗ ಬೆತ್ತಲಾಗಿ ಬಾಯಲ್ಲಿ ಬೇವಿನಕಡ್ಡಿ ಕಚ್ಚಿ ಓಡುವುದು, ಹದಿಹರೆಯದ ಬೆತ್ತಲೆ ಹೆಣ್ಣುಮಕ್ಕಳು ಹರಿಣಿಯಂತ ಓಟ–ಇವುಗಳು ವರದಾ ನದಿ ಹಾದು ಚಂದ್ರಗುತ್ತಿ ಮುಖ್ಯ ಬೀದಿಗೆ ಸೇರುವಲ್ಲಿ ನೋಡಿದವುಗಳಾದರೆ, ಸಿಬಿಐ ಅಧಿಕಾರಿಯನ್ನೇ ಬೆತ್ತಲುಗೊಳಿಸಿ, ಮೆರವಣಿಗೆ ಮಾಡಿದ್ದು, ಪೋಲೀಸ್ ಮತ್ತು ಮಹಿಳಾ ಪೋಲೀಸರನ್ನು ಬೆತ್ತಲೆಗೊಳಿಸಿದ್ದು, ಶಂಕಿತ ದಸಂಸ ಕಾರ್ಯಕರ್ತರ ಮೇಲೆ ತ್ರಿಶೂಲದ ದಾಳಿ, ಪೋಲೀಸ್ ಠಾಣೆಯೊಳಗೆ ನುಗ್ಗಿದ್ದು, ಬೋರ್ಡ್, ಕುರ್ಚಿ ಇತ್ಯಾದಿ ಕಛೇರಿ ಪರಿಕರಗಳನ್ನು ಕಿತ್ತೊಗೆದು, ಡಿವೈಎಸ್‌ಪಿಯವರನ್ನು ವಿವಸ್ತ್ರಗೊಳಿಸಿ, 'ಉಧೋ ಉಧೋ' ಎಂದು ಕೂಗಿಸುತ್ತಾ, ಎಳೆದೊಯ್ದದ್ದು ಪತ್ರಿಕಾ ವರದಿಗಾರರ ಮೇಲೆ ಹಲ್ಲೆ – ಕ್ಯಾಮರ ಪುಡಿಪುಡಿ, ಜೋಗತಿಯ ಬೆತ್ತಲೆ ಕುಣಿತ, ತ್ರಿಶೂಲಧಾರಿಗಳ ಭರ್ಜರಿ ಕೇಕೆ ಕೂಗಾಟ ಓಡಾಟ ಪಡ್ಡೆ ಹುಡುಗರ ಭಂಡಾರ ಚೆಲ್ಲಾಟ, ತಿವಿದಾಟಗಳು ಚಂದ್ರಗುತ್ತಿಯ ಇಡೀ ವಾತಾವರಣವೇ ಹಳದಿ – ಕೆಂಪು ಭಂಡಾರದಿಂದಾವೃತ್ತವಾದ ಭೂಪ್ರದೇಶವೆಂಬಂತೆ ಗೋಚರವಾಗುವಂತೆ ಮಾಡಿದ್ದವು. ರಸ್ತೆಯ ತುಂಬೆಲ್ಲಾ, ಪೂಜಾ ಸಾಮಾಗ್ರಿಗಳು, ಕ್ಯಾಮರಾ, ಪುಸ್ತಕಗಳ ಚೆಲ್ಲಾಟ, ಬೆಟ್ಟದ ಮೇಲಿನ ಮಾತಂಗಿ ಗುಡಿಯಲ್ಲಿ ಬೆತ್ತಲೆ ಮಹಿಳೆಯರ ಮೇಲೆ, ಅರ್ಚಕ ಬಾಂಧವರಿಂದ ಶುದ್ಧ ನೀರಿನ ಸುರುವುವಿಕೆ, ಹೊಸವಸ್ತ್ರ ಹಂಚಿಕೆ – ಧಾರಣೆಗಳು ಅವ್ಯಾಹತವಾಗಿ ನಡೆಯುತ್ತಿತ್ತು. ಇವುಗಳೆಲ್ಲವನ್ನೂ ಭಯಗ್ರಸ್ತ ಮೂಕ ಪ್ರೇಕ್ಷಕರಾಗಿ ನೋಡುತ್ತಾ ಬೆಟ್ಟವನ್ನಲೆದಿದ್ದೆವು.

ನಮ್ಮವರಿಲ್ಲದ ಸ್ಥಳದಲ್ಲಿ, ಧರ್ಮದ ಅಫೀಮು – ನುಂಗಿದವರ ನಡುವೆ ಪುನಃ ಹಾದು ಹೋಗಬೇಕಾದ ವಿಷಮ ಪರಿಸ್ಥಿತಿಯಲ್ಲಿ ನಾವಿದ್ದೆವು. ವಿಭ್ರಾಂತಿಗೊಳಗಾದವರಿಂದ, ನಾವು ಬೆತ್ತಲಾಗುವುದನ್ನು, ದೌರ್ಜನ್ಯಕ್ಕೊಳಗಾಗುವುದನ್ನು ತಪ್ಪಿಸಿಕೊಳ್ಳುವ ಯುಕ್ತಿಗಳನ್ನು ಹೆಣೆಯುತ್ತಾ ನಾವು ಸಾಗಿದ್ದೆವು. ಅದಾಗಲೇ ನೆತ್ತಿಯ ಸೂರ್ಯ ಇಳಿಮುಖನಾಗುತ್ತಿದ್ದ. ಎಲ್ಲೆಂದರಲ್ಲಿ ಪೋಲಿಸ್ ತಿರುಗಾಟ, ಜೋಗಮ್ಮ, ಜೋಗತಿಯರ ಅವಿತುಕೊಳ್ಳುವಿಕೆ, ಸಂಶಯಾಸ್ಪದ ವ್ಯಕ್ತಿಗಳನ್ನು ಪೋಲೀಸ್ ವ್ಯಾನ್‌ಗೆ ತುಂಬಿಕೊಳ್ಳುತ್ತಿರುವುದನ್ನು ವೀಕ್ಷಿಸುತ್ತಾ ಬದಲಾದ ಪರಿಸ್ಥಿತಿಯ ಬಗ್ಗೆ ನಾನು ಬಚ್ಚಿಮ್ಮಾ ಪಿಸುಪಿಸು ಮಾತನಾಡುತ್ತಾ ಬಸ್ ನಿಲ್ದಾಣದಲ್ಲಿ ಬಸ್ ಹತ್ತಿದ್ದೆವು. ಬಸ್ಸಿನಲ್ಲಿ ಡ್ರೈವರ್–ಕಂಡಕ್ಟರ್‌ರವರಿಗೂ ಕೂಡ, ದುಷ್ಕರ್ಮಿಗಳು ಬಸ್ಸಿನೊಳಗೆ ನುಗ್ಗಿ ಹಲ್ಲೆ ನಡಸಲಾರರೆಂಬ ಭರವಸೆ ಇರಲಿಲ್ಲ. ಬಂದಾಕ್ಷಣವೇ, ಶಿರಾಳಕೊಪ್ಪ – ಶಿಕಾರಿಪುರ – ಸೊರಬ ಅಂತ ಕೂಗುತ್ತಾ ಬಸ್ಸು ತಿರುಗಿಸಿ ಹೊರಟೇಬಿಟ್ಟರು. 'ಸದ್ಯ ಬಚಾವಾದೆವಲ್ಲ!' ಎಂದು ನಿರಮ್ಮಳವಾದರೂ ಒಂದು ಭೀಭತ್ಸ್ಯ ಯುದ್ಧದಿಂದ ಜೀವವುಳಿಸಿಕೊಂಡು ಬಂದ ಸಿನಿಮಾ ಕತೆಯಂತೆ, ಮನಸ್ಸು ಆ ಚಿತ್ರಣದ ಸುತ್ತಲೂ ಸುತ್ತುತ್ತಲೇ ಇತ್ತು.

ನಾವು ಸೊರಬಕ್ಕೆ ಬಂದಾಕ್ಷಣ ಬಸ್ ಸ್ಟ್ಯಾಂಡಿನ ಬಳಿ, ಪೋಲೀಸ್ ಸ್ಟೇಷನ್ ಹತ್ತಿರ ಕಾದಿದ್ದ ತಿರುಮಲೇಶ್, ಹನುಮಂತಪ್ಪ, ನಟರಾಜ್, ದಿವಾಕರ ಹೆಗ್ಡೆ, ಘಾಸಲ್ಕರ್, ರಾಜಪ್ಪ ಮಾಸ್ತರ್ ಮುಂತಾದ ಮಿತ್ರ ಪಡೆ ನನ್ನ ಸುರಕ್ಷಿತ ವಾಪಸಿಗೆ ಕಾದಿದ್ದು, ನನ್ನನ್ನು ಕಂಡಾಕ್ಷಣ ನಿಟ್ಟುಸಿರುಬಿಟ್ಟಿದ್ದರು. "ನೀವು ಕೃಷ್ಣಪ್ಪನವರ ಹೆಂಡತಿಯೆಂದು ತಿಳಿದಿದ್ದರೆ, ನಿಮ್ಮನ್ನು ಕೊಂದೇ ಹಾಕುತ್ತಿದ್ದರು" ಎಂದರು. ಅಲ್ಲೇ ಇದ್ದ ಶಿವಪ್ಪ ಮಾಸ್ತರ ಮನೆಯಲ್ಲಿ ಸುಧಾರಿಸಿಕೊಳ್ಳುತ್ತಿರುವಾಗ ಯಾರೋ ಬಿ.ಕೆ.ಯವರನ್ನು ಬೈಕ್‌ನಲ್ಲಿ ಕರೆತಂದು ಬಿಟ್ಟರು. ಬಳಲಿ ಬಸವಳಿದ ದೇಹ– ಪಂಚೆಯುಟ್ಟು ತಲೆಗೆ ಟವಲ್ ಸುತ್ತಿಕೊಂಡ, ಬರಿಗಾಲ ಕೃಷ್ಣಪ್ಪ ಸುಧಾರಿಸಿಕೊಂಡಾಕ್ಷಣ, ನನ್ನನ್ನು ಒಮ್ಮೆ ನೋಡಿದರು ಅಷ್ಟೇ. ಮತ್ತೆ ಚಂದ್ರಗುತ್ತಿಗೆ ತೆರಳಿದ್ದ ಎಲ್ಲಾ ಸಂಗಾತಿಗಳ ಸುರಕ್ಷಿತ ವಾಪಸಾತಿ ವಿಚಾರಿಸತೊಡಗಿದರು. ಶಿವಪ್ಪ ಮನೆಯವರ ಉಪಹಾರ– ಆಸರೆಗಳಿಗೆ ನಾನು ಇಂದಿಗೂ ಕೃತಜ್ಞಳಾಗಿದ್ದೇನೆ. **(ಮುಂದುವರೆಯುವುದು)**

---

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಏಪ್ರಿಲ್ ಸಂಚಿಕೆಯಲ್ಲಿನ 'ಇಸ್ಲಾಂಗೊಂದು ಪುನರುಜ್ಜೀವನ ಬೇಕಿದೆ; ಎಂಬ ಲೇಖನದಲ್ಲಿ ಹಸನ್ ಸುರೂರ್ ಅವರು ಇಸ್ಲಾಂ ಕುರಿತಂತೆ ಇಂದು ಇತರರ ಮನದಲ್ಲಿರುವ ಎಲ್ಲ ಪ್ರಶ್ನೆಗಳನ್ನೂ ಎತ್ತಿದ್ದಾರೆ. ಆತ್ಮದ್ರೋಹದಿಂದಾಗಿ ಇಸ್ಲಾಂ ವಿನಾಶದ ಹಾದಿ ಹಿಡಿದಿರುವ ಬಗ್ಗೆ ಮತ್ತು ತುರ್ತು ಚಿಕಿತ್ಸೆ ಆಗದಿದ್ದಲ್ಲಿ ಇಸ್ಲಾಂಗಷ್ಟೇ ಅಲ್ಲ, ಇಡೀ ಮನುಕುಲಕ್ಕೆ ಆಗುವ ಹಾನಿ ಕುರಿತು ಎಚ್ಚರಿಸಿದ್ದಾರೆ. ನಾನು ತಿಳಿದಂತೆ, ಇದು ಎಲ್ಲ ವಿವೇಕವಂತ ಮುಸ್ಲಿಮರ ಅನಿಸಿಕೆಯೂ ಹೌದು.

ಒಂದು ಧರ್ಮ ಅಥವಾ ಧರ್ಮಗ್ರಂಥ ಏಕಕಾಲಕ್ಕೆ ಆತ್ಮೋನ್ನತಿ ಹಾಗೂ ಶಾಂತಿಗಾಗಿ, ಮತ್ತೊಂದೆಡೆ ವಿನಾಶದ, ವಿಚ್ಛಿದ್ರಕಾರಿ ಶಕ್ತಿಗಳಿಗೆ ಸ್ಫೂರ್ತಿ ನೀಡಲು ಹೇಗೆ ಸಧ್ಯ? ಎಲ್ಲಿಯೋ ಏನೋ ತಪ್ಪಿದೆ. ಎಲ್ಲ ಧರ್ಮಗ್ರಂಥಗಳೂ ಯಾವುದೋ ಕಾಲದಲ್ಲಿ ಆ ಕಾಲದ ಅಗತ್ಯಕ್ಕೆ ತಕ್ಕಂತೆ ರೂಪುಗೊಂಡಿರುತ್ತವೆ. ಅವು ಕಾಲಾತೀತ, ಪ್ರಶ್ನಾತೀತ ಅನ್ನುವುದೇ ವಿವೇಚನಾರಹಿತವಾದುದು. ಎಲ್ಲ ಧರ್ಮಗ್ರಂಥಗಳನ್ನೂ ಜರಡಿ ಹಿಡಿದು ಇಂದಿನ ಅಗತ್ಯಕ್ಕೆ ತಕ್ಕಂತೆ ಅವುಗಳನ್ನು ಕಾಲೋಚಿತಗೊಳಿಸಿಕೊಳ್ಳದೇ ಹೋದರೆ ಅವು ಮನುಕುಲಕ್ಕೆ ಮುಳುವಾಗುತ್ತವೆ.

**–ವೆಂಕಟೇಶ ಮಾಚಕನೂರ,** ಧಾರವಾಡ

ನಿಮ್ಮ ಪತ್ರಿಕೆಯ ಹಾಗೆಯೇ ಒಟ್ಟು ಸಮಾಜವಾದಿಗಳ ಕಾಳಜಿಗಳನ್ನು ಒಪ್ಪುತ್ತಲೇ, ನನಗನ್ನಿಸಿದ ವಿಚಾರವೆಂದರೆ– ನಿಮ್ಮ ಭಾವುಕ ಅರ್ಥಶಾಸ್ತ್ರ ಮತ್ತು ರಾಜಕೀಯ ಶಾಸ್ತ್ರಗಳ ಕಣ್ಣುಗಳಲ್ಲಿ ಮೋದಿ ಮಾಡಿದ್ದೆಲ್ಲ ತಪ್ಪಾಗಿ ಕಾಣುತ್ತದೆ. ಮೋದಿ ವಿರೋಧ ಎಲ್ಲ ಎಡಪಂಥೀಯರ ಮತ್ತು ನಿಷ್ಪಂಥ ಕಾಂಗ್ರೆಸ್ಸಿಗರ ಏಕೈಕ ಅಜೆಂಡಾ ಆಗಿ, ಅವರಿಗೆಲ್ಲ ಸೋನಿಯಾ–ಮನಮೋಹನರ ಸರ್ಕಾರದಲ್ಲೂ ಗುಣ ಕಾಣತೊಡಗಿದೆ! ವ್ಯಾಪಾರ ಮತ್ತು ವ್ಯಾಪಾರಿ ವಿರೋಧಿ ನೀತಿಯನ್ನು ಪರಿಷ್ಕರಿಸಿಕೊಳ್ಳಬೇಕು. ವ್ಯಾಪಾರ ಒಂದು ಸೇವೆ, ತಪಸ್ಸು. ಹುನ್ನಾರವೂ ಅಲ್ಲ, ಲಾಭಕೋರತನವೂ ಅಲ್ಲ.

**–ಎಂ. ಪ್ರಭಾಕರ ಜೋಷಿ,** ಮಂಗಳೂರು

ವೈವಿಧ್ಯಮಯ ವಿಷಯಗಳನ್ನು ಕುರಿತ ಲೇಖನಗಳಿಂದ ತುಂಬಿರುವ 'ಹೊಸ ಮನುಷ್ಯ' ಸಮಾಜವಾದದ ವಿಸ್ತಾರ ಭಿತ್ತಿಯನ್ನು ತೆರೆದಿಡುತ್ತಾ, ನಮ್ಮ ಜ್ಞಾನ ದಿಗಂತಗಳನ್ನು ವಿಸ್ತರಿಸುತ್ತಿದೆ. ಈ ವಿಶಿಷ್ಟತೆ ಮತ್ತು ಗುಣಗಳಿಂದಾಗಿಯೇ ಪತ್ರಿಕೆ ಇಂತಹ ಇತರ ಪತ್ರಿಕೆಗಳ ಗುಣಮಟ್ಟ ಮತ್ತು ಅಂದಚೆಂದಗಳನ್ನೂ ಹೆಚ್ಚಿಸಲು ಪ್ರೇರೇಪಿಸಿದಂತೆ ಕಾಣುತ್ತದೆ.

**–ಎಸ್. ನಾಗರಾಜು,** ಬೆಂಗಳೂರು

ನನ್ನ ಬಾಲ್ಯ ಮಿತ್ರ ಜಾರ್ಜ್ ಫರ್ನಾಂಡಿಸ್‌ರನ್ನು ಕುರಿತ ನಿಮ್ಮ ಲೇಖನ ತುಂಬ ಚೆನ್ನಾಗಿದೆ. ಆದರೆ ಒಂದು ತಿದ್ದುಪಡಿ: ಅವರನ್ನು ಮುಂಬೈನಲ್ಲಿ ಬೆಳೆಸಿದ ಕಾರ್ಮಿಕ ನಾಯಕ ಪಿ. ಡಿ'ಮೆಲ್ಲೋ ಮೂಲತಃ ಮಂಗಳೂರಿನವರಾಗಿದ್ದು, ಆಗಿನ ಮುಂಬೈ ಸರ್ಕಾರದಿಂದ ಗಡೀಪಾರಾಗಿ ತಮ್ಮ ಈ ಸ್ವಂತ ಊರಿಗೆ ಬಂದಿದ್ದಾಗಲೇ ಅವರಿಗೆ ಜಾರ್ಜ್‌ರ ಪರಿಚಯವಾಗಿತ್ತು ಮತ್ತು ಅಲ್ಲಿಯೇ ಡಿ'ಮೆಲ್ಲೋರಿಂದ ಜಾರ್ಜ್ ಕಾರ್ಮಿಕ ಹೋರಾಟದ ಮೊದಲ ಪಾಠಗಳನ್ನು ಕಲಿತದ್ದು.

**–ಅಮ್ಮೆಂಬಳ ಆನಂದ,** ಮಣಿಪಾಲ

ಮಹಾರಾಷ್ಟ್ರದ ನಿರ್ಮಮ ಪುರೋಹಿತಶಾಹಿ ಬಗ್ಗೆ ಬರೆಯುತ್ತಾ ನೀವು ವಿಚಾರವಾದಿಗಳಾದ ದಾಬೋಲ್ಕರ್ ಮತ್ತು ಪನ್ಸಾರೆಯವರ ಕೊಲೆಗಳ ಬಗ್ಗೆ ಪ್ರಸ್ತಾಪಿಸುತ್ತಾ ಹೇಳಿರುವ ಸಂತ ತುಕಾರಾಮರ ಕೊಲೆ, ಬಾಲಗಂಗಾಧರರ ಪರಮ ಜಾತೀಯತೆಯನ್ನು ಕುರಿತ ಮಾತುಗಳು ನನ್ನನ್ನು ಬೆಚ್ಚಿಬೀಳಿಸಿದವು.

**–ಎಂ. ಲಕ್ಷ್ಮಿ,** ತುಮಕೂರು

ಶಿವರಾಮ ಕಾರಂತರ ಬಗ್ಗೆ ತಮ್ಮ ಆತ್ಮಕತೆಯಲ್ಲಿ ಅವಹೇಳನಕಾರಿಯಾಗಿ ಬರೆದಿರುವ ಪಾಟೀಲ ಪುಟ್ಟಪ್ಪ ಮತ್ತು ಅದರ ಪ್ರಕಾಶಕ ಚನ್ನಬಸವಣ್ಣನವರಿಗೆ ನೀವು ಪ್ರತಿಭಟನೆ ಸಲ್ಲಿಸಿರುವುದು ಸಾಹಿತ್ಯ–ಸಂಸ್ಕೃತಿಗಳಲ್ಲಿ ಸದಭಿರುಚಿ ಕಾಪಾಡುವ ದೃಷ್ಟಿಯಿಂದ ಸರಿಯಾಗಿಯೇ ಇದೆ. ಸೂರ್ಯ–ಚಂದ್ರರ ಕೆಳಗೆ ನಡೆಯುವುದೆಲ್ಲದರ ಬಗೆಗೂ ಯಾರೂ ಕೇರು ಮಾಡದ ತೀರ್ಪು ನೀಡುವುದನ್ನೇ ಗೀಳು ಮಾಡಿಕೊಂಡಿರುವ ಪಾಟೀಲ ಪುಟ್ಟಪ್ಪನವರಿಗೆ ಸತ್ಯ ಹೇಳುವ ಅಂತಹ ಹಠವಿದ್ದಿದ್ದರೆ, ಕಾರಂತರು ಅಥವಾ ಆ ಘಟನೆಗೆ ಸಾಕ್ಷಿಯಾದವರು ಜೀವಂತವಿದ್ದಾಗಲೇ ಬರೆಯಬೇಕಿತ್ತು. ತಮ್ಮ ಆತ್ಮಕಥೆಯಲ್ಲಿ ಇತರರ ಬದುಕಿನ ಕಥೆ ಹೇಳುವ ಬದಲು ತಮ್ಮ ಬದುಕಿನ, ಕುಟುಂಬದ ಎಲ್ಲ ವ್ಯವಹಾರಗಳ ಕಥೆಗಳನ್ನೂ ಕಾರಂತರಂತೆಯೇ ಬಿಚ್ಚಿಟ್ಟಿದ್ದರೆ, ಅವರ ಹಠವನ್ನು ಒಪ್ಪಬಹುದಿತ್ತು.

**–ಎಂ. ಬಸವರಾಜು,** ಚಿತ್ರದುರ್ಗ

ಮೇ ಸಂಚಿಕೆಯಲ್ಲಿನ ನಿಮ್ಮ ಅಭಿನಂದನೆ ಮತ್ತು ಪ್ರತಿಭಟನೆ ಎರಡನ್ನೂ ಸಮಚಿತ್ತ ಮತ್ತು ಸಮಾನ ಪ್ರೀತಿಯೊಂದಿಗೆ ಸ್ವೀಕರಿಸಿದ್ದೇನೆ. ಕನ್ನಡದ ಅನನ್ಯ

ಲೇಖಕರೂ, ಹಿರಿಯರೂ ಆದ ಪಾಟೀಲ ಪುಟ್ಟಪ್ಪನವರು ಶಿವರಾಮ ಕಾರಂತರ ಬಗ್ಗೆ ಬರೆದುದನ್ನು ಸಮರ್ಥಿಸಿಕೊಂಡಿದ್ದಾರೆ ಹಾಗೂ ಕಾರಂತರ ಬಗ್ಗೆ ತಮಗೆ ಗೌರವವಿರುವುದಾಗಿ ವಿವರಣೆ ನೀಡಿದ್ದಾರೆ. ಮೇಲಾಗಿ ಅವರು ಬರೆದುದಕ್ಕೆ ಅವರೇ ಬಾಧ್ಯಸ್ಥರೇ ಹೊರತು ಪ್ರಕಾಶಕರಲ್ಲ. ಅಲ್ಲದೆ, ಓರೆಕೋರೆಗಳಿಲ್ಲದ ಮನುಷ್ಯ ಸಿಗುವುದಾದರೂ ಎಲ್ಲಿ? ಜೊತೆಗೆ, ಒಂದೆರಡು ಕಾರಣಗಳಿಂದಾಗಿ ದೊಡ್ಡವರು ಸಣ್ಣವರೆನಿಸಿಕೊಳ್ಳುವುದಿಲ್ಲ. ಪ್ರಾಜ್ಞ ಓದುಗರು ಬೇಕಾದುದನ್ನು ಸ್ವೀಕರಿಸುತ್ತಾರೆ.

**–ಸಿ.ಚನ್ನಬಸವಣ್ಣ,** ಬಳ್ಳಾರಿ

ಪತ್ರಿಕೆ ಆರಂಭವಾದ ದಿನದಿಂದಲೂ ಓದಿ, ಮೆಚ್ಚುತ್ತಾ ನಿಮ್ಮ ಬಗ್ಗೆ ಗೌರವ ತಾಳುತ್ತಾ ಬಂದಿರುವ ನನಗೆ ಕಳೆದ ಸಂಚಿಕೆಯಲ್ಲಿ ಲೋಹಿಯಾ ಪ್ರಕಾಶನದ ಚನ್ನಬಸವಣ್ಣನವರ ಬಗೆಗಿನ ನಿಮ್ಮ ಪ್ರತಿಭಟನೆಯನ್ನು ಓದಿ ವಿಷಾದವೆನಿಸಿತು.

ಪಾಟೀಲ ಪುಟ್ಟಪ್ಪನವರು ಎಂದಿನಿಂದಲೂ ಅನೈತಿಕತೆ, ಭ್ರಷ್ಟಚಾರ, ಸಮಾಜಘಾತುಕ ಕೃತ್ಯಗಳ ಬಗ್ಗೆ ಖುಲ್ಲಂ ಖುಲ್ಲಾ ಬರೆಯುತ್ತಾ ಬಂದಿದ್ದಾರೆ ಮತ್ತು ಅದನ್ನೆಲ್ಲ ಧೈರ್ಯದಿಂದ ಎದುರಿಸಿಯೂ ಇದ್ದಾರೆ. ನೀವು ಆಕ್ಷೇಪಿಸಿರುವ ಕಾರಂತರನ್ನು ಕುರಿತ ಅವರ ಮಾತುಗಳು ಹುಬ್ಬಳ್ಳಿ–ಧಾರವಾಡ–ಗದಗಗಳಲ್ಲಿ ಜನಜನಿತವಾದ ಮಾತುಗಳಾಗಿವೆ. ಕಾರಂತರು ಹರೆಯದಲ್ಲಿದ್ದಾಗಿನಿಂದಲೂ ಪುಟ್ಟಪ್ಪನವರು ಈ ಮಾತುಗಳನ್ನು ಆಡುತ್ತಾ, ಬರೆಯುತ್ತಾ ಬಂದಿದ್ದಾರೆ. ಇದನ್ನೋದಿದ ಕಾರಂತರೇ ಪ್ರತಿಭಟಿಸಲಿಲ್ಲ. ಅವರಿಬ್ಬರೂ ಒಳ್ಳೆಯ ಗೆಳೆಯರಾಗಿದ್ದವರು.

**–ಎಚ್.ಎಸ್. ಪಾಟೀಲ,** ಕೊಪ್ಪಳ

**(ಕಾರಂತರು ಜೀವಂತವಿದ್ದಾಗಲೇ ಈ ಬಗ್ಗೆ ಪಾಟೀಲ ಪುಟ್ಟಪ್ಪನವರು ಬರೆದಿದ್ದ ಒಂದು ತುಣುಕು/ದಾಖಲೆ ಎಚ್.ಎಸ್. ಪಾಟೀಲರಲ್ಲಿದ್ದಲ್ಲಿ ಅದನ್ನು ಬಹಿರಂಗಪಡಿಸುವುದು ಒಳಿತು.–ಸಂ)**

'ಸುಸ್ಥಿರ ಬದುಕು', 'ಸರಳ ಬದುಕು' ನಮ್ಮದಾಗಬೇಕು ಎನ್ನುವ ಆಶಯ ಎಲ್ಲ ವಿವೇಕವಂತರದಾಗಿದೆ. ಆದರೆ ಇದನ್ನು ಸಾಧಿಸುವ ಬಗೆಯೆಂತು?

ನಮ್ಮಲ್ಲಿ ಅನೇಕರು ಹತ್ತಿಪ್ಪತ್ತು ಎಕರೆ ಗದ್ದೆ–ತೋಟಗಳನ್ನು ಹೊಂದಿ 'ಸಾವಯವ ಕೃಷಿ', 'ಸಹಜ ಕೃಷಿ' ಮಾಡುತ್ತಾ, 'ಸುಸ್ಥಿರ ಬದುಕು' ಕಂಡುಕೊಳ್ಳುವುದು, ಲಕ್ಷ ರೂಪಾಯಿ ಸಂಬಳ ಪಡೆಯುತ್ತಾ ಅಪರೂಪಕ್ಕೆ ಖಾದಿ ಬಟ್ಟೆ ತೊಡುತ್ತಾ 'ಸರಳ ಬದುಕು' ನಡೆಸುವುದು ದೊಡ್ಡ ಸಂಗತಿಯಲ್ಲ. ಆದರೆ ಒಂದು ಚಿಕ್ಕ ಮನೆ ಕಟ್ಟಿಕೊಳ್ಳಲೂ ಭೂಮಿ ಇಲ್ಲದವರು, ತಿಂಗಳು ಮುಗಿಸುವ ಮುನ್ನವೇ ಏದುಸಿರು ಬಿಡುವ ಸಾಮಾನ್ಯ ನೌಕರರು 'ಪ್ರಕೃತಿಗೆ ಹತ್ತಿರವಾಗಿ ಬದುಕುವುದು', 'ಸರಳವಾಗಿ ಬದುಕುವುದು' ತುಂಬಾ ದುಬಾರಿಯಾದ ಸಂಗತಿಯಾಗಿದೆ. ಆದ್ದರಿಂದಲೇ "ಈ 'ಸುಸ್ಥಿರ ಬದುಕು' ಆಂದೋಲನವನ್ನು ನಿಜವಾಗಿ ಅನ್ನ ತಿನ್ನುವ ಜನಸಾಮಾನ್ಯರಿಗಾಗಿ ರೂಪಿಸಲಾಗಿದೆಯೋ ಅಥವಾ ಇದು ಬರಿ ಕನಸು ಕಾಣುವುದರಲ್ಲೇ ಅರ್ಧ ಸತ್ತು ಹೋಗಿರುವ ಮಧ್ಯಮ ವರ್ಗದ ಹೋರಾಟಗಾರರ ಇನ್ನೊಂದು ಕನಸಿನಾಟಕ್ಕಾಗಿಯೋ?" ಎನ್ನುವ ನಿಮ್ಮ ಪ್ರಶ್ನೆಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾಗಿದೆ.

**–ಸರ್ಜಾಶಂಕರ್ ಹರಳಿಮಠ,** ಶಿವಮೊಗ್ಗ

ಸುಮಾರು ಒಂದೂವರೆ ವರ್ಷದ ನಂತರ ನಾನು ಮನೆಯಿಂದ ಹೊರಹೊರಟು ಸುಸ್ಥಿರ ಬದುಕನ್ನು ಆಶಿಸಿ ಪ್ರಸನ್ನ ಸತ್ಯಾಗ್ರಹ ನಡೆಸುತ್ತಿರುವ ಬದನವಾಳು ಗ್ರಾಮಕ್ಕೆ ಹೋಗಿಬಂದೆ. ಪ್ರಸನ್ನ ದಕ್ಷ ಸಂಘಟಕರು. ಎದೆ ತುಂಬ ಆದರ್ಶವನ್ನು ಮೆತ್ತಿಕೊಂಡ ಅನೇಕ ಗೆಳೆಯರನ್ನು ನಾನು ಅಲ್ಲಿ ಕಂಡೆ.

ಗಾಂಧಿ ಕಾಲದಲ್ಲೇ ನೂರಕ್ಕೆ ತೊಂಬತ್ತು ಜನ ಖಾದಿ ತೊಡುತ್ತಿರಲಿಲ್ಲ. ಮಿಲ್ಲುಗಳಲ್ಲಿ ಉತ್ಪಾದಿಸುವ ಬಟ್ಟೆಗಳು ಅವರಿಗೆ ಪ್ರಿಯವಾಗಿದ್ದವು ಮತ್ತು ದುಡಿಮೆಗೆ ಅನುಕೂಲಕರವಾಗಿದ್ದವು. ಸ್ವದೇಶಿ ಮಂತ್ರ ಪ್ರಣೀತ ಗಾಂಧೀವಾದವನ್ನು ಮರೆತು ನಾವು ಭಾರತೀಯರು ಹಿಂತಿರುಗಿ ಹೋಗದಷ್ಟು ದೂರ ಕ್ರಮಿಸಿದ್ದೇವೆ.

ಚರಕ ನೂಲುವುದು, ಯಂತ್ರ ನಾಗರೀಕತೆಯಿಂದ ತಪ್ಪಿಸಿಕೊಂಡು ಬದುಕುವುದು ವ್ಯಕ್ತಿನೆಲೆಯ ಆದರ್ಶ ಮಾತ್ರ. ಅದೊಂದು ಉತ್ತಮ ಮಾದರಿಯೆಂಬಂತೆ ಜನರೊಂದಿಗಿರುತ್ತದೆ.

**–ಪ್ರೊ. ಶಿವರಾಮು ಕಾಡನಕುಪ್ಪೆ,** ಮೈಸೂರು

ಬದನವಾಳು ಸತ್ಯಾಗ್ರಹ ಕುರಿತ ನಿಮ್ಮ ಬರಹ ನಿಜದ ಸೂಜಿಮೊನೆಯಂತಿದೆ. ಈ ಕಾಲದ ಎಲ್ಲ ಸತ್ಯಾಗ್ರಹ, ಚಳುವಳಿಗಳ ಆಂತರ್ಯವನ್ನು, ನಮ್ಮೆಲ್ಲರ ಹತಾಶೆ, ಸುಲಭ ಕನಸುಗಾರಿಕೆಯ ದುರಂತವನ್ನು ತುಸು ಚೂಪು ಎನಿಸಿದರೂ, ಆತ್ಮೀಯವೆನ್ನುವಂತೆ ಬರೆದಿದ್ದೀರಿ. ಇಂದಿಗೆ ಬೇಕಾದ, ಇಂದಿಗೆ ಸಲ್ಲುವ ಗಾಂಧಿಯನ್ನು ಕಂಡುಕೊಳ್ಳಬೇಕೆಂಬ ಮಾತು ನಿಜ. ಇತ್ತೀಚಿನ ದಿನಗಳಲ್ಲಿ ನಾನು ಓದಿದ ಒಳ್ಳೆಯ ಬರಹಗಳಲ್ಲಿ ಇದೂ ಒಂದು.

**–ಶ್ರೀಕಾಂತ ಎನ್.ವಿ.** ದಾವಣಗೆರೆ

## ಜಾತಿಗಣತಿ ಎತ್ತಿದ ಜಾತಿ ಪ್ರಶ್ನೆ: ಮುಂದುವರೆದ ಸಂವಾದ

೧. ಸಮಾಜವಾದದ ಗುರಿ ಜಾತಿ ವಿನಾಶವೋ, ಜಾತಿ ಸಮಾನತೆಯೋ ಎಂಬ ಬಿ. ರಾಜೇಶ್‌ರವರ ಮೂಲ ಪ್ರಶ್ನೆಗೆ ಉತ್ತರಿಸುವುದಾದರೆ, ಜಾತಿ ಸಮಾನತೆಗೆ ಮೊದಲ ಆದ್ಯತೆ ಇರಬೇಕೆಂಬುದು ನನ್ನ ಅಭಿಪ್ರಾಯ. ಜಾತಿಯನ್ನು ವಿರೋಧಿಸಲಿಕ್ಕೆ ಅಸಮಾನತೆಯ ಹೊರತಾಗಿ ಬೇರೆ ಕಾರಣಗಳಾದರೂ ಏನಿವೆ? ಅಲ್ಲದೆ ಜಾತಿ ವಿನಾಶ ಎಂಬುದು ಕೈಗೆಟುಕದ ಗುರಿ. ಜಾತಿ, ಧರ್ಮ ಮತ್ತು ವರ್ಗ ಈ ಮೂರನ್ನು ಯಾವ ರಾಜಕೀಯ ವ್ಯವಸ್ಥೆ ಅಥವಾ ಸಿದ್ಧಾಂತಗಳಿಂದಲೂ ತೊಡೆದು ಹಾಕಲು ಸಾಧ್ಯವಿಲ್ಲ. ಆದರೆ ಸಮಾನತೆಯ ಆಶಯದ ಮೂಲಕ ಉತ್ತಮ ನಾಗರೀಕ ಸಮಾಜದ ನಿರ್ಮಾಣವನ್ನು ಎಲ್ಲೆಡೆಯೂ ನೋಡುತ್ತಿದ್ದೇವೆ.

ಜಾತಿಯು ಕುಟುಂಬದ ವಿಸ್ತೃತ ರೂಪದಂತಿದ್ದು, ತನ್ನದೇಯಾದ ಜೀವನ ಶೈಲಿ, ಸಾಂಸ್ಕೃತಿಕ ಚಹರೆಗಳನ್ನು ಹೊಂದಿದೆ. ಇಂತಹ ವೈವಿಧ್ಯತೆಯನ್ನು ಕಳೆದುಕೊಂಡು ಯಂತ್ರಮಾನವರಂತೆ ಬದುಕುವ ಏಕರೂಪದ ರೋಬೋ ಫ್ಯಾಮಿಲಿ ಯಾರಿಗೆ ಬೇಕು? ಇದು ಎಲ್ಲ ಜಾತಿ ಪಂಗಡಗಳ ಕುರಿತ ಕೂಲಂಕುಶ ನೋಟವೇ ಹೊರತು ನಮ್ಮ ನಮ್ಮ ಜಾತಿಯ ಗುಡಿಸಲೊಳಗಿನ ನುಸಳುವಿಕೆ ಅಲ್ಲ. ಅಂತರ್ಜಾತಿಯ ವಿವಾಹವನ್ನು ನಾನು ಕೂಡಾ ಇಷ್ಟಪಡುವುದಕ್ಕೆ ಕಾರಣ ಎರಡು ಭಿನ್ನ ಸಂಸ್ಕೃತಿಗಳು ಒಂದೇ ಸೂರಿನಡಿ ಹರಡಿಕೊಳ್ಳುವುದರಿಂದ ಮನುಷ್ಯ ಪಡೆಯಬಹುದಾದ ಸಾಮಾಜಿಕ ಸಹಿಷ್ಣುತೆ ಮತ್ತು ಮಾನವೀಯ ಮೌಲ್ಯಗಳೇ ಹೊರತು ಇನ್ನಾವುದೋ ಕ್ರಾಂತಿಯ ಕಾರಣಕ್ಕಲ್ಲ. ಈ ಬೆಳವಣಿಗೆಯಲ್ಲಿ ಜಾತಿಯ ಮೂಲ ಸಾಂಸ್ಕೃತಿಕ ಚಹರೆಗಳು ಕ್ರಮೇಣ ಬದಲಾಗುತ್ತಾ ಇನ್ನೊಂದೇ ಸ್ವರೂಪವನ್ನು ಪಡೆದು ಕೊನೆಗೆ ಜಾತಿಯೇ ಇಲ್ಲವಾದರೂ ಸರಿಯೆ. ಆದರೆ ಜಾತಿ ವಿನಾಶದ ಹಟವಾರಿತನ ಮಾತ್ರ ಬೇಕಿಲ್ಲ. ಈ ದೃಷ್ಟಿಯಿಂದ 'ಸಮಾಜವಾದವೆಂದರೆ ಏಕರೂಪತೆಯಾಗಿರದೆ ವೈವಿಧ್ಯತೆಯಾಗಿದ್ದು, ಜಾತಿಗಳು ಸಾಮಾಜಿಕ ಹಾಗೂ ಸಾಂಸ್ಕೃತಿಕ ವೈವಿಧ್ಯತೆಯ ಘಟಕಗಳಾಗಿ ಉಳಿದುಕೊಳ್ಳುವಲ್ಲಿ ಸಮಾಜವಾದಿಗಳಿಗೆ ಯಾವ ಅಭ್ಯಂತರವೂ ಇರಲಾರದು' ಎಂಬ ಬಾಪು ಹೆದ್ದೂರ್ ಶೆಟ್ಟಿಯವರ ಮಾತನ್ನು ನಾನೂ ಬೆಂಬಲಿಸುತ್ತೇನೆ.

**–ಎನ್.ಎಂ. ಕುಲಕರ್ಣಿ,** ಹೆಗ್ಗೋಡು

೨. ಸಮಾಜವಾದವು ಜಾತಿ ವಿನಾಶವನ್ನು ಸ್ಪಷ್ಟವಾಗಿ ಬಯಸಿ, ತನ್ಮೂಲಕ ಮಾನವ ನೆಲೆಯ ಸಮಾನತೆಯನ್ನು ಸಾಧಿಸಲು ಸಾಧ್ಯವೆಂದು ಹೇಳುತ್ತದೆ. ಸ್ವತಂತ್ರ ಭಾರತದ ಮೀಸಲಾತಿ ಪರಿಕಲ್ಪನೆಯು ಓಲೈಕೆಯ ರಾಜಕಾರಣದ ಅಸ್ತ್ರವಾಗಿ ಬಳಕೆಯಾಗುತ್ತಿರುವುದರಿಂದ *ಅಹಿಂದ* ಜಾತಿಗಳು ತಂತಮ್ಮ ವೃತ್ತದಲ್ಲೇ ಮತ್ತಷ್ಟು ಗಟ್ಟಿಗೊಳ್ಳುತ್ತಾ ಮತಗಳಿಕೆಯ ಕೇಂದ್ರಗಳಾಗಿ ರಾಜಕಾರಣಿಗಳ ಕೈಗೊಂಬೆಗಳಾಗಿವೆ. ಇದರಲ್ಲಿ ಸಮಾಜವಾದಿ ಸಿದ್ಧಾಂತದ ತಪ್ಪಿಲ್ಲ. ಗಾಂಧೀವಾದದಂತೆ ಸಮಾಜವಾದವು ಕೂಡ ಜನತೆಯ ಆಚರಣೆಯಿಂದ ದೂರವಾಗಿ ಅಕಾಡೆಮಿಕ್ ವಲಯದ ಚರ್ಚೆಯ ವಸ್ತುವಾಗಿ ಉಳಿದಿದೆ.

ಅಂತರ್ಜಾತೀಯ ಮದುವೆಗಳೆಲ್ಲವೂ ಬಹುಪಾಲು ಪ್ರೇಮವಿವಾಹಗಳು. ಅಂಥ ಮದುವೆಗಳಲ್ಲಿ ಸೈದ್ಧಾಂತಿಕ ನೆಲೆಯಲ್ಲಿ ಒಂದಾದವರು ಜಾತಿರಹಿತವಾಗಿ ಬದುಕುತ್ತಾರೆ; ತಮ್ಮ ಮಕ್ಕಳನ್ನು ಹಾಗೆಯೇ ಬೆಳೆಸುತ್ತಾರೆ. ಇಂಥವರಲ್ಲಿ ಯಾವ ಜಾತಿಗೆ ಸೇರಬೇಕೆನ್ನುವ ಆಸೆ ಅಥವಾ ಗೊಂದಲವಿರುವುದಿಲ್ಲ. 'ಅಸ್ಪೃಶ್ಯ'ರೂ ಸೇರಿದಂತೆ ನನ್ನ ವಾರಿಗೆಯ ನೂರಾರು ದಂಪತಿಗಳು ನನ್ನ ಕಣ್ಮುಂದೆ ಜಾತಿರಹಿತರಾಗೇ ಬದುಕಿದ್ದಾರೆ; ಬದುಕುತ್ತಿದ್ದಾರೆ. ಮೀಸಲಾತಿ ಸೌಲಭ್ಯಕ್ಕಾಗಿ ಜಾತಿಯನ್ನು ಬಳಸಿಕೊಳ್ಳಬಹುದೆನ್ನುವವರ ನಿಲವನ್ನು ನಾನು ಒಪ್ಪಿಕೊಳ್ಳಲಾರೆ. ಇಲ್ಲಿ ಬದ್ಧತೆ ಮುಖ್ಯ; ಹೊಂದಾಣಿಕೆಯಲ್ಲ.

**–ಪ್ರೊ. ಶಿವರಾಮು ಕಾಡನಕುಪ್ಪೆ,** ಮೈಸೂರು

೩. ಮೇ ಸಂಚಿಕೆಯಲ್ಲಿ ಕೆ.ಪಿ. ನಟರಾಜು ಅವರು ಬರೆದಿರುವ ಪ್ರತಿಕ್ರಿಯೆ ಅಸಂಬದ್ಧವಾಗಿದೆ. ತಾತ್ವಿಕ ಭಿನ್ನಾಭಿಪ್ರಾಯಗಳಿದ್ದರೆ ನೇರ ಮಾತುಗಳಲ್ಲಿ ಅದನ್ನು ದಾಖಲಿಸಬೇಕೆ ಹೊರತು, ಮೊಲ, ನರಿ, ನಾಯಿಗಳಿಗೆ ಹೋಲಿಕೆಯಂತಹ ಅಸಂಗತ ತರ್ಕದಿಂದ ಯಾವ ಸಮಸ್ಯೆಯೂ ಬಗೆಹರಿಯುವುದಿಲ್ಲ. ಇವರು ಲೋಹಿಯಾ, ಸಮಾಜವಾದ, ಸಮಾಜ ಮತ್ತು ಪ್ರಕೃತಿಯನ್ನು ಅರ್ಥಮಾಡಿಕೊಂಡಿರುವ ರೀತಿ ಇದೇನಾ? ಇವರ ದೃಷ್ಟಿಯಲ್ಲಿ ಪ್ರಾಣಿಗಳು ಕೀಳೆ?

ಇದೇ ಸಂಚಿಕೆಯಲ್ಲಿ ಮತ್ತೊಂದು ಪ್ರತಿಕ್ರಿಯೆ ನೀಡಿರುವ ಬಾಪು ಹೆದ್ದೂರ ಶೆಟ್ಟಿ ಅವರು ಹೇಳಿರುವುದೇ ಸಮಾಜವಾದ ಎನ್ನುವುದಾದರೆ ಅಂತಹ ಸಮಾಜವಾದ ನಮಗೆ ಖಂಡಿತ ಬೇಡ.

**–ಸಮಾಜವಾದಿ ಅಧ್ಯಯನ ಕೇಂದ್ರ ಟ್ರಸ್ಟ್,** ಮೈಸೂರು

## ೪. 'ಜಾತಿ'ಯನ್ನು ಮೊದಲು ತೆಗೆಯಬೇಕಾಗಿರುವುದು ಮನಸ್ಸಿನಿಂದಲೋ ದಾಖಲಾತಿಯಿಂದಲೋ?

ಈ ಪತ್ರ ಪ್ರಕಟಗೊಳ್ಳುವ ವೇಳೆಗೆ ಜಾತಿ ಸಮೀಕ್ಷೆ ಮುಗಿದಿರುತ್ತದೆ. ಕರ್ನಾಟಕ ಸರ್ಕಾರ ಜಾತಿ ಗಣತಿ ಮೂಲಕ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮೀಕ್ಷೆ ಕೈಗೊಂಡಾಗ ಅಂತರ್ಜಾತಿ ವಿವಾಹಿತ ದಂಪತಿಗಳು ಮತ್ತು ಅವರ ಮಕ್ಕಳು ಜಾತಿ, ಧರ್ಮದ ಕಾಲಂನಲ್ಲಿ ಏನನ್ನು ತುಂಬಬೇಕು ಎಂಬ ಪ್ರಶ್ನೆ ಎದ್ದಿತು. ಸಮೀಕ್ಷೆಯ ಸಂದರ್ಭದಲ್ಲಿ ಅಂತರ್ಜಾತಿ ವಿವಾಹಿತ ಪತಿ–ಪತ್ನಿಯರು ಜಾತಿ–ಧರ್ಮದ ಕಾಲಂನಲ್ಲಿ ಅವರವರ ಮೂಲ ಜಾತಿ/ಧರ್ಮವನ್ನು ನಮೂದು ಮಾಡುವಂತೆ ಮತ್ತು ಮಕ್ಕಳ ವಿಚಾರದಲ್ಲಿ ಪೋಷಕರೇ ಅವರ ಮಕ್ಕಳ ಜಾತಿಯನ್ನು ನಿರ್ಧರಿಸುವಂತೆ ನಾವು ಕೆಲವು ಗೆಳೆಯರು ಮನವಿ ಮಾಡಿದೆವು. ಹಾಗೆ ಕೋರಿದವರಲ್ಲಿ ನಾನು ಒಬ್ಬ. 'ಹೊಸ ಮನುಷ್ಯ'ದಲ್ಲಿ ಗೆಳೆಯ ರವಿಚಂದ್ರ ಚಿಕ್ಕೆಂಪಿಹುಂಡಿ ನಮ್ಮ ನಿಲುವನ್ನು ಪ್ರಶ್ನಿಸಿದ್ದಾರೆ.

ಆದರೆ ಜಾತಿ ಸಮೀಕ್ಷೆ ಮುಗಿದಿದ್ದರೂ, ಈಗ ಎತ್ತಿರುವ ಪ್ರಶ್ನೆ ಹಾಗೆಯೇ ಉಳಿದು ಬಿಡುತ್ತದೆ. ಇದಕ್ಕೆ ಉತ್ತರ ಕಂಡುಕೊಳ್ಳುವುದು ಅತ್ಯಗತ್ಯವಾಗಿದೆ. ಸಮೀಕ್ಷೆಯಲ್ಲಿ ಜಾತಿಯನ್ನು ನಮೂದಿಸುವುದರಿಂದ ಜಾತಿವಾದಿಗಳಾಗುತ್ತೇವೆಯೇ? ಅಥವಾ ಜಾತ್ಯಾತೀತ ತತ್ವವನ್ನು ಘೋಷಿಸಿಕೊಂಡಿರುವ ಮಾನವ ಮಂಟಪ ಜಾತಿ ನಮೂದಿಸಿ ಎಂದು ಹೇಳಿದರೆ ತತ್ವಭ್ರಷ್ಟವಾಗುವುದೇ? ಹೌದು ಅನ್ನುವುದಾದರೆ ನಮ್ಮ ಸಂವಿಧಾನ ಜಾತ್ಯಾತೀತವೋ? ಅಲ್ಲವೋ? ಏಕೆಂದರೆ ನಮ್ಮ ಸಂವಿಧಾನ ಜಾತ್ಯಾತೀತವಾಗಿದ್ದು ಹಿಂದುಳಿದವರಿಗೆ. ಇತರೆ ಹಿಂದುಳಿದವರಿಗೆ ಜಾತಿಯಾಧಾರಿತ ವಿಶೇಷ ಸವಲತ್ತು ನೀಡಲು ಅವಕಾಶ ಕಲ್ಪಿಸಿಕೊಡುವ ಮೂಲಕ 'ಜಾತಿ' ಮಾಡುತ್ತಿದೆ ಅನ್ನಿಸುವುದಿಲ್ಲವೇ? ಅದನ್ನೇ ಅಲ್ಲವೇ ಮೀಸಲಾತಿಯ ವಿಷಯ ಬಂದಾಗೆಲ್ಲಾ ಮೀಸಲಾತಿ ವಿರೋಧಿಗಳು ಹೇಳುತ್ತಾ ಬಂದಿರುವುದು. ಗೆಳೆಯ ರವಿಚಂದ್ರ ಈಗಾಗಲೇ 'ಜಾತಿ' ಬಿಟ್ಟು 'ಜಾತ್ಯಾತೀತ' ಆಗಿರುವುದರಿಂದ ಅವರ ಜಾತಿ ಕೇಳುವುದು ಅಪರಾಧವಾಗಬಹುದು! ಆದರೆ ನನ್ನದು ಪರಿಶಿಷ್ಠ ಜಾತಿಗಳಲ್ಲೊಂದು. ಅಸ್ಪೃಶ್ಯತೆಯ ಅವಮಾನವನ್ನು ಅನುಭವಿಸಿರುವ ನಾನು ಅಥವಾ ನನ್ನಂತಹವರು ಜಾತಿ ಮುಂದುವರೆಯುವುದಾದರೆ ಜಾತಿ ದಾಖಲಿಸಿ ಎಂದು ಹೇಳಲು ಸಾಧ್ಯವೇ?

'ಜಾತಿ'ಯನ್ನು ಮೊದಲು ತೆಗೆಯಬೇಕಾಗಿರುವುದು ಮನಸ್ಸಿನಿಂದಲೋ ದಾಖಲಾತಿಯಿಂದಲೋ? ದಾಖಲಾತಿಗಳಲ್ಲಿ 'ಜಾತ್ಯಾತೀತ' ಎಂದು ಬರೆಸಿ ಮನಸ್ಸಿನಲ್ಲಿ ಜಾತಿವಾದಿಗಳಾಗಿರಲು ಸಾಧ್ಯವಿಲ್ಲವೇ? ಅರ್ಥಾತ್ ಜಾತಿಯನ್ನು ನಮೂದಿಸಿ ಸಮೀಕ್ಷೆಯನ್ನು ಯಶಸ್ವಿಗೊಳಿಸಲು ಸಹಕರಿಸಬೇಕಲ್ಲವೇ? ವಿಚಿತ್ರವೆಂದರೆ ಗಣತಿಯಲ್ಲಿ ಜಾತಿಯನ್ನು ನಮೂದಿಸಲು ಒಪ್ಪದಿರುವ ಮಾನವ ಮಂಟಪದ ಟ್ರಸ್ಟಿಗಳೇ ಈ ಹಿಂದೆ ಜಾತಿ ಗಣತಿ ಆಗಬೇಕು ಎಂದು ಹೋರಾಟ ಮಾಡಿದ್ದಾರೆ. ಸಂದರ್ಭ ಸಿಕ್ಕಾಗಲೆಲ್ಲಾ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಆದರೆ ಸಮೀಕ್ಷೆ ನಡೆಯುತ್ತಿರುವಾಗ 'ಜಾತ್ಯಾತೀತ ತತ್ವ' ಎಂಬ ಹೆಸರಿನಲ್ಲಿ ಮಡಿವಂತಿಕೆ ಪ್ರದರ್ಶಿಸುತ್ತಿದ್ದಾರೆ. ಇದು ಇಬ್ಬಗೆ ನೀತಿಯಲ್ಲವೇ? ನನ್ನ ಮಕ್ಕಳು ಬೆಂಗಳೂರಿನಂಥ ಊರಿನಲ್ಲಿ ಬೆಳೆಯುತ್ತಿರುವುದರಿಂದ ಅವರಿಗೆ ಅಸ್ಪೃಶ್ಯತೆಯ ಅನುಭವ ನನ್ನ ಹಳ್ಳಿಗೆ ಹೋದಾಗ ಮಾತ್ರ ಆಗುತ್ತದೆ. ಇದಲ್ಲದೆ ನಾನು ಮತ್ತು ನನ್ನ ಹೆಂಡತಿ ಇಬ್ಬರು ನ್ಯಾಯವಾದಿಗಳು. ನನ್ನ ಇಬ್ಬರೂ ಮಕ್ಕಳಿಗೂ ವಿದ್ಯಾಭ್ಯಾಸ ಹಾಗೂ ಮತ್ತಿತರ ಖರ್ಚು ಭರಿಸುವ ಸಂಪಾದನೆ ಇದೆ. ನನ್ನ ಅಥವಾ ನನ್ನಂತವರ ಮಕ್ಕಳಿಗೆ ಜಾತಿ ಬರೆಸದೆ ಮೀಸಲಾತಿ ಪಡೆಯದಿದ್ದರೂ ನಡೆಯುತ್ತದೆ. ಆದರೆ ಇದೇ ಮಾನದಂಡವನ್ನು ಎಲ್ಲರಿಗೂ ಅನ್ವಯಿಸಲು ಸಾಧ್ಯವಾ? ಎಷ್ಟೋ ಜನ ಅಂತರ್ಜಾತಿ/ಅಂತರ್ಧರ್ಮೀಯ ದಂಪತಿಗಳ ಮಕ್ಕಳು ತಾರತಮ್ಯ ಮತ್ತು ಬಡತನವನ್ನು ಅನುಭವಿಸುತ್ತಾ ಇದ್ದಾರೆ. ಅವರಿಗೆ ಜಾತಿಯಿಂದ ಗುರುತಿಸಿಕೊಳ್ಳಬೇಡಿ ಎಂದು ಹೇಳಿ ಸರ್ಕಾರದ ವಿಶೇಷ ಸವಲತ್ತುಗಳಿಂದ ವಂಚಿಸುವುದು ನ್ಯಾಯವೇ? ಅವರಿಗೆ ನಾವೊಂದು ಪರಿಹಾರ ಸೂಚಿಸಬೇಕಲ್ಲವೇ?

ಅಂತರ್ಜಾತಿ/ಅಂತರ್ಧರ್ಮೀಯ ದಂಪತಿಗಳ ಮಕ್ಕಳಿಗೆ ಶೇ. ೧ ರಷ್ಟು ಮೀಸಲಾತಿ ಕಲ್ಪಿಸಬೇಕು ಎಂದು ಶಿಫಾರಸ್ಸು ಮಾಡಿರುವ ಪ್ರೊ.ರವಿವರ್ಮಕುಮಾರ್ ವರದಿಯ ಜಾರಿಗೆ ಮೊದಲು ನಾವು ಸರ್ಕಾರವನ್ನು ಒತ್ತಾಯಿಸಬೇಕು. ಆ ವರದಿಯ ಜಾರಿಗೆ ಕಿಂಚಿತ್ತೂ ಹೋರಾಟ ಮಾಡದೆ ಜಾತಿ ಬರೆಯಲು ಹೇಳಿದರೆ ಜಾತ್ಯಾತೀತ ತತ್ವಕ್ಕೆ ಭಂಗ ಬರುತ್ತದೆ ಎಂದು ಹೇಳುವುದರಲ್ಲಿ ಅರ್ಥವಿದೆಯೇ? ಆದಕಾರಣ ಅಂತಹ ಮೀಸಲಾತಿ ಜಾರಿಗೆ ಬರುವ ತನಕ ಜಾತಿಯಾಧಾರಿತ ಮೀಸಲಾತಿ ಪಡೆಯುವ ವ್ಯವಸ್ಥೆ ಮುಂದುವರೆಯಬೇಕು. ನಾವು ಪರ್ಯಾಯವನ್ನು ಕೊಟ್ಟ ನಂತರ ನಮಗೆ ಆ ರೀತಿ ಹೇಳಲು ನೈತಿಕತೆ ಇರುತ್ತದೆ ಎಂಬುದು ನನ್ನ ಭಾವನೆ.

ಇವತ್ತಿಗೂ ಸಹ ಸಣ್ಣ, ಅತಿ ಸಣ್ಣ ಸಮಯದಾಯಗಳು ಸಮಾಜದ ಮುಖ್ಯ ವಾಹಿನಿಗೆ ಬರಲು ಆಗದೆ ಒದ್ದಾಡುತ್ತಿವೆ. ಅಲೆಮಾರಿಗಳು, ಅರೆ–ಅಲೆಮಾರಿಗಳು ಇನ್ನೂ ನೆಲೆ ಕಾಣದೇ ದಿಕ್ಕು–ದೆಸೆ ಇಲ್ಲದಂತಿದ್ದಾರೆ. ಅಂತಹ ಜಾತಿಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ವಿವರಗಳು ಇಂತಹ ಸಮೀಕ್ಷೆಯಿಂದ ಮಾತ್ರ ಸಿಗಲು ಸಾಧ್ಯ. ಆ ವಿವರಗಳಿಂದ ಆ ಸಮುದಾಯಗಳಿಗೆ ನೆಲೆಯನ್ನು ರೂಪಿಸಲು ಸಾಧ್ಯ. ಆ ಸಮುದಾಯದಿಂದ ಬಂದ ಅಲ್ಲೊಬ್ಬರು, ಇಲ್ಲೊಬ್ಬರು ಅಂತರ್ಜಾತಿ ವಿವಾಹ ಆಗಿರಬಹುದು. ಅಂತರ್ಜಾತಿ ವಿವಾಹವಾದ ಒಂದೇ ಕಾರಣಕ್ಕೆ ಜಾತಿ ಬರೆಸಬಾರದು ಎನ್ನುವುದಾದರೆ ಆ ಸಮುದಾಯಗಳ ಬೆರಳೆಣಿಕೆಯಷ್ಟು ವಿದ್ಯಾವಂತರ, ಉದ್ಯೋಗಸ್ಥರ ಸಂಖ್ಯೆ ದಾಖಲಾಗುವುದನ್ನು ತಪ್ಪಿಸಬೇಕೆ? ಒಂದು ವೇಳೆ ಒಳ ಮೀಸಲಾತಿ ಜಾರಿಗೆ ಬಂದು ಮೀಸಲಾತಿಯಲ್ಲಿ ಪಾಲು ನೀಡುವಾಗ, ಮೊದಲೇ ಕಮ್ಮಿ ಸಂಖ್ಯೆಯಲ್ಲಿರುವ ಅಂತಹ ಸಮುದಾಯಗಳ ಜನಸಂಖ್ಯೆಯನ್ನು ತಗ್ಗಿಸುವ ಮೂಲಕ ಆ ಸಮುದಾಯಕ್ಕೆ ಸಿಗುವ ಮೀಸಲಾತಿಯ ಪ್ರಮಾಣವನ್ನು ಕಡಿಮೆಗೊಳಿಸಬೇಕೆ?

ಮೀಸಲಾತಿಯನ್ನು ಹೇಗಾದರೂ ಮಾಡಿ ತೆಗೆದು ಹಾಕಬೇಕು ಎಂದು ಮೀಸಲಾತಿ ವಿರೋಧಿ ಗುಂಪು ಮೊದಲಿನಿಂದಲೂ ಕೆಲಸ ಮಾಡುತ್ತಿದೆ. ಅವರಿಗೆ 'ಜಾತಿ ತೋರಿಸಬಾರದು', ಅಂತರ್ಜಾತಿ/ಅಂತರ್ಧರ್ಮೀಯ ದಂಪತಿಗಳು ಎಂದಷ್ಟೇ ದಾಖಲಿಸಬೇಕು ಎಂದರೆ ಮೀಸಲಾತಿಯನ್ನು ನಿಷ್ಕ್ರಿಯಗೊಳಿಸುವ ಮಂತ್ರದಂಡವನ್ನೇ ಅವರ ಕೈಗೆ ಕೊಟ್ಟಂತಾಗುತ್ತದೆ. ಅದು ಹೇಗೆ ಅಂದರೆ, ಹೇಗೂ ಜಾತಿ ನಮೂದಿಸಬೇಕಿಲ್ಲವಾದರಿಂದ ಜಾತಿಯೊಳಗೆ ಮದುವೆಯಾಗಿರುವವರಿಗೂ ಅಂತರ್ಜಾತಿ/ ಅಂತರ್ಧರ್ಮೀಯ ದಂಪತಿಗಳೆಂದು ಬರೆಯಿಸಿ ಎಂದು ಪುಸಲಾಯಿಸಿದರೆ ಸಾಕಲ್ಲವೆ. ಇನ್ನು ಒಂದು ಅಪಾಯವನ್ನು ಗುರುತಿಸಬಹುದು, ನಾಳೆ ಅಂತರ್ಜಾತಿ/ಅಂತರ್ಧರ್ಮೀಯ ಮಕ್ಕಳಿಗೆ ಮೀಸಲಾತಿ ಜಾರಿ ಆಯಿತು ಎಂದು ಇಟ್ಟುಕೊಳ್ಳೋಣ. ಆಗ ಅಪ್ಪ–ಅಮ್ಮನ ಜಾತಿ ಯಾವುದೆಂದು ಬರೆಸದೆ "ಅಂತರ್ಜಾತಿ ಅಥವಾ ಅಂತರ್ಧರ್ಮೀಯ ದಂಪತಿಗಳ ಮಗು" ಎಂದಷ್ಟೇ ನಮೂದು ಮಾಡುವುದಾದರೆ ಜಾತಿಯೊಳಗೆ ಮದುವೆಯಾದ ಯಾರು ಬೇಕಾದರೂ ಬರೆಸಬಹುದಲ್ಲವೇ? ಇಂತಹ ಅನಾಹುತಗಳಿಗೆ ನಾವು ಆಸ್ಪದ ನೀಡಬೇಕೆ?

**–ಎಚ್.ವಿ.ಮಂಜುನಾಥ,** ಬೆಂಗಳೂರು

## ೫. ಸ್ವಲಾಭ–ನಷ್ಟಗಳ ಲೆಕ್ಕಾಚಾರದ ವಿತಂಡವಾದ

'ಮಾನವ ಮಂಟಪ'ದ ಆಶಯ ಮತ್ತು ಸಾಮಾಜಿಕ, ಶೈಕ್ಷಣಿಕ, ಜಾತಿ ಗಣತಿ ವೇಳೆ ಅಂತರ್ಜಾತಿ ವಿವಾಹಿತರು ಏನೆಂದು ನಮೂದಿಸಬೇಕು ಎನ್ನುವ ವಿಷಯದಲ್ಲಿ ಮತ್ತಷ್ಟು ಸ್ಪಷ್ಟತೆ ಸಿಗಬಹುದೆಂಬ ನಿರೀಕ್ಷೆಯಲ್ಲಿ ಬೆಂಗಳೂರಿನಲ್ಲಿ ನಡೆದ ಮಾನವಮಂಟಪದ ಸಭೆಗೆ ನಾನೂ ಹೋಗಿದ್ದೆ. ಆದರೆ, 'ಇಲ್ಲಿ ಸೇರಿರುವವರೆಲ್ಲ ಸಮಾನ ಆಸಕ್ತರು; ಏಕ ಆಶಯಕ್ಕೆ ಬದ್ಧರಾದವರು' ಎಂದು ತಿಳಿದಿದ್ದ ನನಗೆ ಅದು ಪೂರ್ತಿ ನಿಜವಲ್ಲ ಎನ್ನುವುದು ಸ್ವಲ್ಪಹೊತ್ತಿನಲ್ಲೇ ಅರಿವಿಗೆ ಬಂದಿತು.

ಜಾತಿ ಸಂಘಟನೆಗಳ ಸಭೆಗಳಲ್ಲಿ ಆಯಾ ಜಾತಿಯ ಉದ್ಧಾರಕರು ಏರು ಗಂಟಲಿನಲ್ಲಿ ಆರ್ಭಟಿಸುವ ರೀತಿಯಲ್ಲಿಯೇ ಇಲ್ಲಿಯೂ ನಮ್ಮ ಹಿರಿಯ ಗೆಳೆಯರು ತಮ್ಮ ಜಾತಿ; ಅವುಗಳ ಹಿಂದಿರುವ 'ಸ್ಮೃತಿ'ಯ ಪರ ಪರಾಕು ಹಾಕ ತೊಡಗಿದರು. ಬಿ.ರಾಜೇಶ್ ಅವರಂತೆಯೇ ನಾನೂ ಗೊಂದಲಕ್ಕೆ ಬಿದ್ದೆ. "ದಾರಿ ತಪ್ಪಿ ಇಲ್ಲಿಗೆ ಬಂದೆನಾ?" ಎನ್ನಿಸತೊಡಗಿತು. "ಗಣತಿಯ ವೈವಾಹಿಕ ಕಲಂನಲ್ಲಿ ಅಂತರ್ಜಾತಿ ಎಂದು ನಮೂದಿಸುವಂತೆ ಕರೆಕೊಡೋಣ" ಎಂಬ ಮಾನವ ಮಂಟಪದ ಹಿರಿಯರ ಸಲಹೆ ತುಮಕೂರಿನ ಗೆಳೆಯರಿಗೆ ಅಪಥ್ಯವಾಯಿತು.

"ಜಾತಿ/ಧರ್ಮದ ಕಲಂನಲ್ಲಿ ಭಾರತೀಯ ಎಂದು ದಾಖಲಿಸೋಣ" ಎಂಬ ಕೆಲವರ ಸಲಹೆ ಕೂಡ ಅವರ ಕಿವಿಗೆ ಬೀಳಲಿಲ್ಲ. "ಜಾತಿ, ಉಪ ಜಾತಿಗಳನ್ನು ದಾಖಲಿಸಲೇ ಬೇಕು. ಇಲ್ಲವೇ ಅಂತರ್ಜಾತಿ ಎಂದು ಬರೆಸುವುದಕ್ಕೆ ಅರ್ಥವೇ ಇರುವುದಿಲ್ಲ. ಮೇಲ್ಜಾತಿಯವರು ಇದನ್ನು ದುರ್ಬಳಕೆ ಮಾಡಿಕೊಂಡು ಗಣತಿಯ ಆಶಯವನ್ನೇ ಸೋಲಿಸಬಹುದು..." ಎಂದೆಲ್ಲ ಆತಂಕಿಸಿದರು. "ಯಾವುದೇ ಜಾತಿಯನ್ನು ನಮೂದಿಸುವುದು ಅವರವರ ವೈಯಕ್ತಿಕ ನಿರ್ಧಾರ. ಮಾನವ ಮಂಟಪ ನಿಮ್ಮ ಜಾತಿಯನ್ನು ನಮೂದಿಸಿ ಎಂದು ಕರೆಕೊಡಲಾಗದು. ಹಾಗೆ ಕರೆಕೊಟ್ಟರೆ ಅದು ಸಂಸ್ಥೆಯ ಆಶಯಕ್ಕೆ ವಿರುದ್ಧವಾಗುತ್ತದೆ" ಎಂದು ನಟರಾಜ ಹುಳಿಯಾರ್ ಮತ್ತಿತರರು ಸ್ಪಷ್ಟನೆ ನೀಡಿದರೂ ತುಮಕೂರು

ಗೆಳೆಯರಿಗೆ ಅದು ಕೇಳಿಸಲಿಲ್ಲ. ಮಾನವ ಮಂಟಪದ ನೀತಿ–ನಿರ್ಧಾರಗಳನ್ನು ತಮ್ಮ ಹದಕ್ಕೆ ಹೀಗೇ ಬಗ್ಗಿಸಬೇಕು ಎಂದು ಪೂರ್ವನಿರ್ಧರಿತ ಹಠ ತೊಟ್ಟು ಬಂದಂತಿತ್ತು ಅವರ ವರಸೆ.

ಪ್ರಸ್ತುತದ ಸಾಮಾಜಿಕ ವ್ಯವಸ್ಥೆಯಲ್ಲಿ ಬಹುತೇಕರು ತಮ್ಮ ಜಾತಿಯ ಅಹಂಕಾರವನ್ನು ಮೆರೆಯಲು ಹವಣಿಸುತ್ತಿರುವ ಹೊತ್ತಿನಲ್ಲಿ ಗಣತಿಯ ಆಶಯವನ್ನು ಸೋಲಿಸಲಿಕ್ಕೆ ಮೇಲ್ಜಾತಿಯವರು ಜಾತ್ಯಾತೀತತೆಯ ಸೋಗು ಹಾಕಬಹುದೆಂಬ ಈ ಗೆಳೆಯರ ಆತಂಕಭರಿತ ತರ್ಕ ವಿಚಿತ್ರವಾಗಿ ತೋರಿತು. "ಇಷ್ಟು ವರ್ಷ ಸಮಾಜವಾದವನ್ನು ಉಸಿರಾಡಿದ ಇವರು ಮತ್ತು ಇಂಥವರೇ ತಮ್ಮ ಜಾತಿ–ಸ್ಮೃತಿಯನ್ನು ಬಿಡಲು ತಯಾರಿಲ್ಲ. ಹಾಗಿದ್ದಾಗ ಜಾತಿಯನ್ನೇ ಉಸಿರಾಡುವ ಜನರು ಹೇಗೆ ತಾನೆ ಬಿಟ್ಟಾರು?" ಎಂದು ಪಕ್ಕದಲ್ಲಿದ್ದ ಗೆಳೆಯರೊಬ್ಬರು ಕೇಳಿದ್ದು ನನಗೂ ಹೌದೆನಿಸಿತು.

ಆರೋಗ್ಯಕರ ಚರ್ಚೆಯ ಬದಲು ವಿತಂಡವಾದವೇ ಮೇಲುಗೈ ಪಡೆಯುವಂತೆ ತೋರಿತು. ಈ ವಿಷಯದಲ್ಲಿ ನನಗಿರುವ ಸ್ಪಷ್ಟತೆಯೂ ಗೊಂದಲಕ್ಕೆ ಜಾರಿಬಿಡಬಹುದೆಂಬ ಆತಂಕದಲ್ಲಿ ಅಲ್ಲಿಂದ ಎದ್ದು ಬಂದೆ. ನಂತರ, ಈ ಹಿರಿಯ ಗೆಳೆಯರು ಪತ್ರಿಕಾ ಹೇಳಿಕೆಗಳ ಮೂಲಕವೂ 'ಜಾತಿ ಗೊಂದಲ'ವನ್ನು ಮುಂದುವರಿಸಿದ್ದು, ಘನವಾದ ಆಶಯವನ್ನು ಹೊತ್ತ ಮಾನವ ಮಂಟಪದ ಹೆಸರನ್ನು ಅದಕ್ಕೆ ಬಳಸಿಕೊಂಡದ್ದು ಕಂಡು ಬೇಸರವಾಯಿತು.

ವಾದ ವಿವಾದಗಳೇನೇ ಇರಲಿ. ಜಗತ್ತು ಬದಲಾಗುತ್ತದೆ ಎಂದು ಕಾಯದೆ ನಮ್ಮಷ್ಟಕ್ಕೆ ನಾವು ಬದಲಾಗುವುದೇ ಹೆಚ್ಚು ಅರ್ಥಪೂರ್ಣ ಎಂದುಕೊಂಡಿರುವ ನಾವೊಂದಷ್ಟು ಗೆಳೆಯರು ಗಣತಿ ವೇಳೆ 'ಭಾರತೀಯ' ಎಂದೇ ಬರೆಸಿದೆವು. 'ಭಾರತೀಯರು' ಎಂದು ದಾಖಲಿಸಿದಾಕ್ಷಣ ತುಮಕೂರಿನ ಗೆಳೆಯರು ನಮ್ಮನ್ನು 'ಹಿಂದುಳಿದ ಜಾತಿ, ವರ್ಗಗಳ ವಿರೋಧಿಗಳು, ತಳ ಸಮುದಾಯಗಳ ಶತ್ರುಗಳು' ಎಂದೇನೂ ಭಾವಿಸಬೇಕಿಲ್ಲ. 'ಮನುಷ್ಯರು ಎನ್ನಿಸಿಕೊಳ್ಳಲು ಲಾಯಕ್ಕಾದವರಲ್ಲ' ಎಂದು ನಮ್ಮ ಕುರಿತು ಅವರಂದುಕೊಂಡರೆ ಅವರ ಅಂತಹ ಅಭಿಪ್ರಾಯಕ್ಕೆ ಮರುಕ ಪಡುವುದರ ಹೊರತು ಇನ್ನೇನನ್ನೂ ಮಾಡಲಾಗುವುದಿಲ್ಲ.

ಈ ಮಧ್ಯೆ ನಡೆದು, ಮುಗಿದ ಜಾತಿ ಗಣತಿ ಸಂದರ್ಭದಲ್ಲಿ ಒಳ ಜಾತಿಗಳ ಗೋಡೆಯನ್ನು ಒಡೆದು ತಮ್ಮ ತಮ್ಮ ಜಾತಿಯ 'ಕೋಟೆ'ಯನ್ನು ಏರಿಸಿಕೊಳ್ಳಲು ನೂರಾರು ಜಾತಿ ಸಂಘಟನೆಗಳು ಶ್ರಮಿಸಿದವು. ದೊಡ್ಡ ಜಾತಿಗಳಿಗೆ ಅದು ಸಂಖ್ಯಾ ಅಹಂಕಾರದ ಪ್ರಶ್ನೆಯಾದರೆ, ತಳ ಜಾತಿ ಸಮುದಾಯಗಳಿಗೆ ಮೀಸಲು ನ್ಯಾಯ ಮತ್ತು ಅಸ್ತಿತ್ವದ ಪ್ರಶ್ನೆಯಾಗಿತ್ತು. ಈ ಪಟ್ಟಿಯಲ್ಲಿ ಒಂದಷ್ಟು ಜಾತಿರಹಿತ 'ಭಾರತೀಯ'ರ ಸಂಖ್ಯೆ ಮೂಡಲಿ ಎಂಬುದಷ್ಟೆ ನಮ್ಮ ಹಂಬಲವಾಗಿತ್ತು. ಈ ಅಲ್ಪ ಸಂಖ್ಯೆ ಯಾವುದೇ 'ಜಾತಿ ಸಂಸ್ಥಾನ'ಕ್ಕೆ ಧಕ್ಕೆಯನ್ನೇನು ತರುತ್ತಿರಲಿಲ್ಲ. ಬದಲು, ಭವಿಷ್ಯದಲ್ಲಿ ಜಾತ್ಯತೀತತೆಯೆಡೆಗಿನ ಚಲನೆಗೆ ಒಂದಷ್ಟು ಹುರುಪು ತುಂಬುವ ಸಾಧನವಾಗಬಹುದು ಎಂದುಕೊಂಡಿದ್ದೆವು.

ನಾವೀಗ ಆರ್ಥಿಕವಾಗಿ ತಕ್ಕಮಟ್ಟಿಗೆ ಸಬಲರಾಗಿದ್ದೇವೆ. ಇನ್ನಾದರೂ ನಾವು, ನಮ್ಮ ಮಕ್ಕಳು ಸರಕಾರದಿಂದ ದಕ್ಕಬಹುದಾದ ಲಾಭಗಳನ್ನು ಪಡೆಯಲು ಬಯಸುವುದಿಲ್ಲ. ಅರ್ಹರಾದವರಿಗೆ ಅದು ಲಭ್ಯವಾಗಲಿ ಎಂಬ ಕನಿಷ್ಠ ಪ್ರಜ್ಞೆ ನಮ್ಮೊಳಗೆ ಅರಳಿದರೆ 'ಜಾತಿ'ಯ ಮಿತಿಯನ್ನು ಮೀರುವುದು ದೊಡ್ಡ ಸಂಗತಿಯೇನಲ್ಲ. ಆದರೆ, "ಹುಚ್ಚು ಭ್ರಮೆಗೆ ಬಿದ್ದು ಜಾತಿಯನ್ನು ತ್ಯಜಿಸಿದರೆ ನಾಳೆ ನಮ್ಮ ಮಕ್ಕಳಿಗೆ ಮೆಡಿಕಲ್, ಎಂಜಿನಿಯರಿಂಗ್‌ಗೆ ಸೀಟು ಅಲ್ಪ ಅಂಕದಲ್ಲಿ ಕೈ ತಪ್ಪಬಹುದು, ಮೀಸಲಿನಡಿ ಸಿಕ್ಕಬಹುದಾದ ಉದ್ಯೋಗ ಯಾರದೋ ಪಾಲಾಗಬಹುದು" ಎಂಬ ಸ್ವಲಾಭ–ನಷ್ಟದ ಲೆಕ್ಕಾಚಾರಕ್ಕೆ ಪಕ್ಕಾದರೆ ಹೀಗೆ ಸಮಾಜವಾದಿಗಳೆಂದುಕೊಂಡವರೂ 'ಜಾತಿ'ಯ ಮಿತಿಯಲ್ಲೇ ಬಿದ್ದು ಒದ್ದಾಡುವಂತಾಗುತ್ತದೆ. "ಜಾತಿಯ ಸ್ಮೃತಿಯನ್ನು ಉಳಿಸಿಕೊಳ್ಳಲಿಕ್ಕಾಗಿಯಾದರೂ ಅದರೊಂದಿಗಿನ ನಂಟನ್ನು ಕಳಚಿಕೊಳ್ಳಬಾರದು" ಎಂಬ ಕಪಟ ನಾಟಕ ಆಡುವ ಸ್ಥಿತಿಯೂ ಬರುತ್ತದೆ. ಇಂಥ ನಾಟಕಗಳನ್ನು ಜನ ಹೆಚ್ಚು ಕಾಲ ನಂಬುವುದಿಲ್ಲ ಎನ್ನುವುದಕ್ಕೆ ನಮ್ಮ ಸುತ್ತಲೇ ಅನೇಕ ನಿದರ್ಶನಗಳಿವೆ ಕೂಡ. ಒಂದೋ ಆಡಿದ ಮಾತಿಗೆ ತಕ್ಕಂತೆ ಬದುಕಬೇಕು. ಅದಾಗದಿದ್ದರೆ, ಸಮಾಜವಾದ, ಪ್ರಗತಿಪರ ಚಿಂತನೆ, ಜಾತ್ಯತೀತತೆ... ಇತ್ಯಾದಿ ಸೋಗುಗಳನ್ನು ಕಳಚಿಟ್ಟು 'ಹೇಗೆ ಬೇಕೋ ಹಾಗೆ' ತೆಪ್ಪಗೆ ಬದುಕುವುದು ಸೂಕ್ತ. ಇಲ್ಲವೇ ಜನರ ಕಣ್ಣಿನಲ್ಲಿ ಮೊಲ, ನಾಯಿ, ನರಿ ಅಥವಾ ಅಮಾಯಕ ಮೃಗಗಳಿಗಿಂತ (ಈ ಪ್ರಾಣಿಗಳ ಕ್ಷಮೆ ಕೋರಿ/ಕಳೆದ ಸಂಚಿಕೆಯ ಕೆ.ಪಿ.ನಟರಾಜ ಅವರ ಪ್ರತಿಕ್ರಿಯೆ ಗಮನಿಸಿ)ಕಡೆಯಾಗಬೇಕಾಗುತ್ತದೆ

**–ಸ್ನೇಹಾ ಓಂಕಾರ್**, ಮೈಸೂರು

## ೫. ಸಂಪಾದಕರ ಕೆಲ ಮಾತುಗಳು:

ಮೂರು ಸಂಚಿಕೆಗಳಷ್ಟು ಬೆಳೆದಿರುವ ಈ ಸಂವಾದವನ್ನು ಈ ಕೆಲವು ಮಾತುಗಳೊಂದಿಗೆ ಮುಕ್ತಾಯಮಾಡಬಹುದೆಂದು ಕಾಣುತ್ತದೆ:

೧. ಮದುವೆ ಮನುಷ್ಯ ಜಾತಿಯ ಚಟುವಟಿಕೆಯಾದ್ದರಿಂದ ಮತ್ತು ಮನುಷ್ಯರಿಗೆ ಮದುವೆ ಎಂಬುದು ಒಂದು ಜೀವ–ಭಾವದ ಸಂಬಂಧ ಎಂಬುದು ಒಂದು ಸಾಂಸ್ಕೃತಿಕ ತಿಳುವಳಿಕೆಯಾಗಿರುವುದರಿಂದ ಯಾರೂ ಅಂತರ್ಜಾತಿ ಮದುವೆಯಾಗಬೇಕೆಂದೇ ಅದನ್ನು ಆಗುವುದಿಲ್ಲ. ಜಾತಿ ಎಂಬುದು ಹಿಂದಲ್ಲದಿದ್ದರೂ ಇಂದು ಒಂದು ಟೊಳ್ಳು ಕಲ್ಪನೆಯಾಗಿದೆ ಎಂಬ ಅರಿವಿರುವವರು ತಾವು ಇಷ್ಟಪಟ್ಟವರನ್ನು ಜಾತಿ ಪರಿಗಣನೆ ಇಲ್ಲದೆ ಮದುವೆಯಾಗುವುದನ್ನು ಸಾಮಾಜಿಕವಾಗಿ ಅಂತರ್ಜಾತಿ ವಿವಾಹವೆಂದು ಗುರುತಿಸಲಾಗುವುದಷ್ಟೆ.

೨. ಊಟ–ತಿಂಡಿ, ಪೂಜೆ ಪುನಸ್ಕಾರಗಳ ರೀತಿ ನೀತಿಗಳ ಕ್ರೋಢೀಕರಣವೇ ಸಂಸ್ಕೃತಿಯೆಂದು ಭಾವಿಸುವವರು ಮಾತ್ರ ಜಾತಿಯನ್ನು ಸಂಸ್ಕೃತಿಯೊಂದಿಗೆ ಸಮೀಕರಿಸುವರು. ಹಾಗೆ ಮಾಡುವ ಮೂಲಕ ಅವರು ಜಾತಿಗೆ ಸಲ್ಲದ ಮೌಲಿಕತೆಯನ್ನು ಕೊಟ್ಟು ಸಂಸ್ಕೃತಿ ಶಬ್ದವನ್ನು ಅಪಮೌಲ್ಯೀಕರಿಸುವರು. ಇಂತಹ ಸಂಸ್ಕೃತಿ ಕಲ್ಪನೆ ಕಾಂಗ್ರೆಸ್ ಸಂಸ್ಕೃತಿ, ಗೂಂಡಾ ಸಂಸ್ಕೃತಿ ಶಬ್ದಗಳಲ್ಲಿ ಬಳಸಲಾಗುವ ಸಂಸ್ಕೃತಿ ಶಬ್ದದ ಜೊತೆಯಾಗಬಲ್ಲದ್ದು ಮಾತ್ರ. ಏಕೆಂದರೆ ಅಂತರ್ಜಾತಿ ಅಥವಾ ಅಂತರ್ಧರ್ಮೀಯ ವಿವಾಹವಾದವರ ಕುಟುಂಬಗಳಲ್ಲಿ ಸಂಸ್ಕೃತಿ ಇಲ್ಲವೆ ಎಂಬ ಪ್ರಶ್ನೆ ಏಳುತ್ತದೆ. ಹಾಗೆ ನೋಡಿದರೆ ಇಂತಹ ಕುಟುಂಬಗಳಲ್ಲಿ ಇವರು ಹೇಳುವಂತಹ ಸಂಸ್ಕೃತಿ ಹೆಚ್ಚು ವೈವಿಧ್ಯಮಯವೂ ಸಮೃದ್ಧವೂ ಆಗಿ ಕಾಣಬರುತ್ತದೆ.

೩. ಜಾತಿ ಸಮಾನತೆ ಎಂಬುದೇ ಒಂದು ಅಸಂಗತ ಮಾತು. ಏಕೆಂದರೆ ಇಂಡಿಯಾದಲ್ಲಿ ನಿಜವಾಗಿ ಇರುವುದು ಜಾತಿಯಲ್ಲ. ಅದೊಂದು ನಿರ್ಲಿಪ್ತ ಶಬ್ದವಷ್ಟೆ. ಇರುವುದು, ಜಾತಿ ವ್ಯವಸ್ಥೆ. ಅದರ ಅಸಂಗತತೆಗಳು, ಅಪಾಯಗಳು ವಿವಿಧ ರೂಪಗಳಲ್ಲಿ ಇಂದು ಕಣ್ಣಿಗೆ ಒಡೆಯುವಂತೆ ಕಾಣುತ್ತಿವೆ. ಆ ವ್ಯವಸ್ಥೆಗೆ ಒಂದು ಇತಿಹಾಸವಿದೆ. ಆ ಇತಿಹಾಸಕ್ಕೆ ಅಂಬೇಡ್ಕರ್, ಲೋಹಿಯಾ ಇತ್ಯಾದಿ ಚಿಂತಕರು ಗುರುತಿಸಿದಂತೆ ಮತ್ತೂ ಮುಖ್ಯವಾಗಿ ನಮಗೆ ಸ್ವತಃ ಅನುಭವಕ್ಕೆ ಬರುತ್ತಿರುವಂತೆ ಧಾರ್ಮಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಆಯಾಮಗಳು ಮಾತ್ರವಲ್ಲದೆ ಮಾನವಶಾಸ್ತ್ರೀಯ ಆಯಾಮವೂ ಇದೆ. ಹಾಗಾಗಿ ಜಾತಿ ವಿನಾಶ ಎಂಬುದು ಒಂದು ಸಂಕೀರ್ಣ ಪ್ರಕ್ರಿಯೆಯಾಗಿದ್ದು, ಅದು ಒಂದೇ ಏಟಿನಲ್ಲಿ ಸಾಧ್ಯವಾಗುವುದು ವಿವಿಧ ಜಾತಿಗಳ ರಕ್ತ ಮಿಲನದಿಂದ. ಅಂದರೆ ಅಂತರಜಾತಿ ವಿವಾಹಗಳಿಂದ ಮಾತ್ರ. ಮಿಕ್ಕೆಲ್ಲ ಮಾರ್ಗಗಳು ಅದಕ್ಕೆ ಪೂರಕವಷ್ಟೆ. ಹಾಗಾಗಿ ಜಾತಿ ವ್ಯವಸ್ಥೆ ನಮ್ಮ ದೇಶಕ್ಕೆ, ಸಮಾಜಕ್ಕೆ ಈಗ ಕೆಟ್ಟದನ್ನೇ ಮಾಡುತ್ತಿದೆ ಎಂದು ಪ್ರಾಮಾಣಿಕವಾಗಿ ನಂಬಿರುವವರು ಈ ವಿಧಾನದ ಮೂಲಕ ಜಾತಿ ವಿನಾಶಕ್ಕೆ ಮುಂದಾಗಬೇಕೇ ಹೊರತು, ಜಾತಿ ಸಮಾನತೆಯೆಂಬ ರಾಜಿಕಬೂಲಿ ಮಾತುಗಳನ್ನಾಡಬಾರದು. ಹೇಗೂ ಜಾತಿ ವಿನಾಶ ಸಾಂವಿಧಾನಿಕ ಆದೇಶವೇನೂ ಅಲ್ಲವಾದ್ದರಿಂದ, ಜಾತಿ ವ್ಯವಸ್ಥೆಯಿಂದ ಹೊರಬರಲಾಗದವರು ತಂತಮ್ಮ ರಾಜಿಕಬೂಲಿಗಳೊಂದಿಗೆ ಅಲ್ಲಿಯೇ ಸುಕ್ಷೇಮವಾಗಿ, ಸುಖವಾಗಿ ಇರಲು ಸ್ವತಂತ್ರರು. ಆದರೆ ಇತರರನ್ನು ಗೊಂದಲಕ್ಕೆ ತಳ್ಳುವುದು ಬೇಡ.

೩.ಲೋಹಿಯಾ 'ಹಿಂದುಳಿದ' ಜಾತಿಗಳಿಗೆ ವಿಶೇಷ ಅವಕಾಶಗಳ ಬಗ್ಗೆ ಆಡಿದ ಮಾತುಗಳಲ್ಲಿ ಜಾತಿ ವಿನಾಶ ಕಾರ್ಯಕ್ರಮದ ವಿರುದ್ಧದ ಯಾವ ಧ್ವನಿಯೂ ಕಾಣುವುದಿಲ್ಲ. ಅವರು ಬದುಕಿದ್ದ ಸಮಯದವರೆಗೂ (ಮತ್ತು ಆನಂತರವೂ) ಅವರ ಪಕ್ಷದಿಂದ ಜಾತಿ ವಿನಾಶ ಸಮ್ಮೇಳನಗಳು ನಡೆಯುತ್ತಿದ್ದವು.

೪. ವಿಶೇಷ ಅವಕಾಶ ಅಥವಾ ಮೀಸಲಾತಿ ಜಾತಿ ವಿನಾಶಕ್ಕೆ ಸಿದ್ಧೌಷಧಿ ಎಂದೇನೂ ಲೋಹಿಯಾ ನಂಬಿರಲಿಲ್ಲ ಅಥವಾ ಯಾರೂ ನಂಬಬೇಕಿಲ್ಲ. ನಮ್ಮ ಈವರೆಗಿನ ಅನುಭವವೂ ಅದನ್ನೇ ಹೇಳುತ್ತಿದೆ. ಅದು, ಜಾತಿ ವ್ಯವಸ್ಥೆಯ ಕಾರಣದಿಂದಾಗಿ ಆಧುನಿಕ ವ್ಯವಸ್ಥೆಯಲ್ಲಿ ನ್ಯಾಯಬದ್ಧ ಪಾಲುದಾರರಾಗಲು ಸಾಧ್ಯವಾಗದೇ ಹೋಗಿದ್ದ ಸಮುದಾಯಗಳಿಗೆ ಆತ್ಮವಿಶ್ವಾಸ ತುಂಬಿ ಅವರು ಸಮಾಜದ ಒಟ್ಟು ಹಿತದ ಕಾರ್ಯಗಳಲ್ಲಿ ತೊಡಗಿಕೊಳ್ಳುವ ಹಕ್ಕು ಮತ್ತು ಕರ್ತವ ಪ್ರಜ್ಞೆಯನ್ನು ಗಳಿಸಲಿ ಮತ್ತು ಅದರ ಭಾಗವಾಗಿ ತನ್ನನ್ನು ದುರ್ಬಲನ್ನಾಗಿಸಿದ್ದ ಜಾತಿ ವ್ಯವಸ್ಥೆಯನ್ನು ನಿರಾಕರಿಸಿ ಅದರಿಂದ ಹೊರಬರಲಿ ಎಂಬ ದೂರ ಉದ್ದೇಶವನ್ನು ಹೊಂದಿತ್ತೆನ್ನಬಹುದು. ಆದರೆ ಈ ಒಂದು ಘನ ತಾತ್ವಿಕ ಉದ್ದೇಶದ ಈ ಮೀಸಲಾತಿ ನೀತಿ ಆಧುನಿಕ ವ್ಯವಸ್ಥೆಯನ್ನು ಕಟ್ಟುವ ಭಾಗವಾಗಿಯೇ ಜಾರಿಯಾಗಬೇಕಾದುದರಿಂದ ಅದು ಆಧುನಿಕತೆಯ ಎಲ್ಲ ದುಷ್ಟ ಲಕ್ಷಣಗಳನ್ನೂ ಮೈಗೂಡಿಸಿಕೊಂಡೇ ಜಾರಿಯಾಯಿತು: ಜಾರಿ ಮಾಡಿದ

ಸರ್ಕಾರಗಳಿಗೆ ಅದೊಂದು ಮತ ಬ್ಯಾಂಕ್ ಅಸ್ತ್ರವಾದರೆ, ಅದರ ಪ್ರಯೋಜನ ಪಡೆದವರು ಅದರ ಉದ್ದೇಶವನ್ನೇ ಮರೆತು ಅದು ಕೊಟ್ಟ 'ಸುಖ'ದಲ್ಲಿ ಮೈಮರೆತರು! ಇನ್ನಷ್ಟು ಸುಖಕ್ಕಾಗಿ ಹಂಬಲಿಸಿದರು. ಹೀಗೆ ಮೀಸಲಾತಿ ನೀತಿ ಒಂದು ಪಟ್ಟಭದ್ರ ಹಿತಾಸಕ್ತಿಯಾಗಿ ಬೆಳೆದು ಅದರ ಅಂತಿಮ ಗಮ್ಯವೇ ಮರೆಯಾಯಿತು! ಇಂದು ಜಾತಿ ವಿನಾಶದ ಮಾತನಾಡುವವರು ಕೆಲವರಿಗೆ ಮೀಸಲಾತಿ ವಿರೋಧಿಗಳಂತೆ ಕಾಣುತ್ತಿರುವುದು ಇದೇ ಕಾರಣಕ್ಕೆ. ಎಲ್ಲ ಮೀಸಲಾತಿಗಳನ್ನೂ ಇನ್ನಾದರೂ ಒಂದು ತಲೆಮಾರಿಗೆ(ಈಗಾಗಲೇ ಎರಡು ತಲೆಮಾರುಗಳು ಅದನ್ನು ಅನುಭವಿಸಿವೆ) ಸೀಮಿತಗೊಳಿಸುವ ನಿಷ್ಠುರ ನಿರ್ಧಾರ ಕೈಗೊಳ್ಳುವ ಕಾಲವೀಗ ಬಂದಿದೆ ಎನಿಸುತ್ತದೆ. ಮೀಸಲಾತಿ ನೀತಿಯ ಜನಕರಾದ ಅಂಬೇಡ್ಕರ್ ಕೂಡ ಅದರ ಕಾರ್ಯಶೀಲತೆಯ ಅವಧಿ ಹತ್ತು ವರ್ಷ ಎಂದು ನಂಬಿದ್ದರಲ್ಲವೇ? ಅರ್ಹ ಸಮುದಾಯಗಳ ಬಹು ಭಾಗಗಳಿಗೆ ಇದಿನ್ನೂ ತಲುಪಿಯೇ ಇಲ್ಲ ಎಂದು ವಾದಿಸುವ ನಾಯಕರು ಆ ಸಮುದಾಯ ಭಾಗಗಳಿಗೆ ಇದರ ಸಂದೇಶವನ್ನು ತಲುಪಿಸುವ ಕೆಲಸವನ್ನೂ ಈಗಲಾದರೂ ಕೈಗೆತ್ತಿಕೊಳ್ಳಲಿ.

೫. ಜಾತಿ ಕೆಟ್ಟದೆಂದು ಜಾತಿ(ಅದು ಯಾವುದೇ ಆಗಿರಲಿ) ಬಿಟ್ಟು ಅಂತರ್ಜಾತಿ ವಿವಾಹವಾದವರು, ಮತ್ತೆ ಜಾತಿಸಮಾಜದಿಂದ ಮಾನ್ಯತೆ-ಮರ್ಯಾದೆ-ಗೌರವಗಳನ್ನು ನಿರೀಕ್ಷಿಸುವುದು, ಅದು ಸಿಗುತ್ತಿಲ್ಲ ಎಂದು ಸ್ವಯಂ-ಮರುಕಕ್ಕೆ ಈಡಾಗುವುದು, ಅವರಿಗೆ ಜಾತಿ ವಿನಾಶದ ಹಿಂದಿನ ತತ್ವದಲ್ಲಿ ನಂಬಿಕೆ ಕಳೆದುಹೋಗಿದೆ ಎಂಬುದನ್ನು ಸೂಚಿಸುತ್ತದಷ್ಟೆ. ಈ ಕಾರ್ಯಕ್ರಮ ಒಂದು ದೀರ್ಘ ರೋಚಕ ಪಯಣ ಎಂಬುದನ್ನೂ ಅವರು ಮರೆತಂತಿದೆ.

ಇದಕ್ಕೆ ಕಾರಣವೂ ಇದೆ. ನಮ್ಮ ಜಾತಿ ವಿನಾಶ ಆಂದೋಲನವು ಎಲ್ಲ ಸಮಾಜವಾದಿ ಕಾರ್ಯಕ್ರಮಗಳಂತೆಯೇ ಆರಂಭಶೂರತ್ವವನ್ನು ತೋರಿ ತನ್ನ ಹುರುಪನ್ನು ಕಳೆದುಕೊಂಡಿತು. ಅದು ಮೀಸಲಾತಿ ನೀತಿಯ ರಾಜಕೀಯ ಬಳಕೆಯ ಜೊತೆ ಸೇರಿ ತನ್ನ ಏಕಾಗ್ರತೆ ಕಳೆದುಕೊಂಡು ಮೇಲ್ಜಾತಿ ವಿರೋಧದ ರೂಪವನ್ನು ಪಡೆಯಿತು. ಹಾಗಾಗಿಯೇ ಸಾಮಾಜಿಕ ನ್ಯಾಯ ಎಂಬುದು ಜಾತಿ ನ್ಯಾಯವಾಗಿ ಪರಿವರ್ತಿತವಾಗಿ ಅದರ ಉದ್ದೇಶ ವ್ಯವಸ್ಥೆಯನ್ನು ಬದಲಾಯಿಸುವುದರ ಬದಲು ವ್ಯವಸ್ಥೆಯಲ್ಲಿ ಮೇಲ್ಜಾತಿಗಳ ಜಾಗವನ್ನು ತಾವು ಆಕ್ರಮಿಸಿಕೊಳ್ಳುವುದಾಯಿತು. ಈ ಕಾರಣದಿಂದಾಗಿಯೇ ಸಕಲ ಜಾತಿಗಳೂ ಒಂದಲ್ಲ ಒಂದು ಕಾರಣವನ್ನು ಮುಂದೊಡ್ಡಿ ಸಾಮಾಜಿಕ ನ್ಯಾಯದ ಜಾಲಕ್ಕೆ ಸೇರಿಕೊಳ್ಳಲು ಹಾತೊರೆಯುತ್ತಿರುವುದು. ಈ ಎಲ್ಲ ಕಾರಣದಿಂದಾಗಿ ಜಾತಿ ವಿನಾಶದ ಕಲ್ಪನೆಯೇ ತನ್ನ ವಿಶ್ವಾಸಾರ್ಹತೆಯನ್ನು ಕಳೆದುಕೊಂಡು ಅಪಹಾಸ್ಯಕ್ಕೂ ಈಡಾಗುವಂತಾಗಿದೆ. ಇದಕ್ಕೆ ಯಾರು ಕಾರಣ, ಏನು ಕಾರಣ? ಸಮಾಜವಾದಿಗಳೆನಿಸಿಕೊಂಡವರು ಲೋಹಿಯಾ ಹೆಸರು ಹೇಳಿಕೊಂಡು ರಾಜಕಾರಣ ಮಾಡುವವರು, ಆಳುವ ಅಧಿಕಾರ ವಲಯಗಳಿಗೆ ಸೇರಿಕೊಂಡಿರುವವರು ಯೋಚಿಸಬೇಕು.

೬. ಯಾವ ಯಾವ ಜಾತಿ ಯಾವ ಯಾವ ಸ್ಥಿತಿಯಲ್ಲಿವೆ ಎಂಬುದನ್ನು ತಿಳಿಯುವ ಉಸಾಬರಿ ಸರ್ಕಾರದ್ದು, ಜಾತಿ ಬಿಟ್ಟ ನಮಗೇಕೆ ? ಮುಂದೊಂದು ದಿನ ಬರಬಹುದಾದ ಶೇ. ಒಂದರ ಮೀಸಲಾತಿ ದುರುಪಯೋಗಕ್ಕಾಗಿ ಈಗಲೇ ಜನ ಸಿದ್ಧತೆ ಮಾಡಿಕೊಳ್ಳುವರೆಂಬ ಆತಂಕ, ಸರ್ಕಾರದ ಜಾತಿ ಜನಗಣತಿಯ ವಿಶ್ವಾಸಾರ್ಹತೆಯನ್ನು ಪ್ರಶ್ನಿಸುತ್ತದಷ್ಟೆ. ಇನ್ನು, ಶೇ.೧ ರ ಮೀಸಲಾತಿ ಬರಲಿ; ಆದರೆ ಅದಷ್ಟು ಸುಲಭ ವ್ಯವಹಾರವಲ್ಲ ಎಂಬುದೂ ತಿಳಿದಿರಲಿ. ಹಾಗೆ ಆಗಿದ್ದರೆ ಅದು ಈ ಹೊತ್ತಿಗೆ ಜಾರಿಗೆ ಬರಬೇಕಿತ್ತು. ಮೀಸಲಾತಿಗೆ ಕಾನೂನಿನ ಮಿತಿ ಇರುವುದರಿಂದ ಅದನ್ನು ಯಾವುದೋ ಒಂದು ವರ್ಗದ ಮೀಸಲಾತಿಯನ್ನು ಕಡಿಮೆ ಮಾಡಿ ಕೊಡಲು ಸಾಧ್ಯವಿರುವಂಥಹದ್ದು. ಈ ಶೇ. ಒಂದನ್ನು ಈ ಅಂತರ್ಜಾತಿ ವಿವಾಹಿತರು ದಾಖಲಿಸುವ ಅವರ ಪೂರ್ವ ಜಾತಿಗಳನ್ನು ಗುರುತಿಸಿ ಆ ನೂರಾರು ಜಾತಿಗಳಿಗೆ ಒಳಮೀಸಲಾತಿಯಾಗಿ ಹಂಚುವ ಬಗೆಯಾದರೂ ಹೇಗೆ? ವಾದಕ್ಕಾಗಿ ವಾದ ಮಾಡಬಾರದು.

೭. ಅಸ್ಪೃಶ್ಯತೆಯನ್ನು ಜಾತಿ ವ್ಯವಸ್ಥೆಯ ಹೊರಗಿಟ್ಟು ನೋಡಲಾಗದು. ಅಂಬೇಡ್ಕರ್ ಪ್ರತಿಪಾದಿಸಿದ್ದೂ ಅದನ್ನೇ. ಗಾಂಧಿ ಗುರಿ ಇಟ್ಟದ್ದು ಅದರ ಕಡೆಗೇ. ಏಕೆಂದರೆ ಅದು ಜಾತಿ ವ್ಯವಸ್ಥೆಯ ಅತ್ಯಂತ ಕ್ರೂರ ರೂಪ. ಜಾತಿ ವ್ಯವಸ್ಥೆ ತನ್ನ ಅಮಾನವೀತೆಯ ಅತ್ಯಂತಿಕ ಘಟ್ಟವನ್ನು ತಲುಪಿದ್ದು ಅಲ್ಲೇ. ಆದುದರಿಂದ ಜಾತಿ ವಿನಾಶ ಹೆಚ್ಚು ಮತ್ತು ತುರ್ತು ಅಗತ್ಯವಾಗಬೇಕಾದದ್ದು ಅಸ್ಪೃಶ್ಯರಿಗೇ. ಆದರೆ ಇದಕ್ಕೆ ತುರ್ತು ನಿರ್ಗಮನ ವ್ಯವಸ್ಥೆ ಇಲ್ಲ. ಇರುವ ತತ್ಕಾಲೀನ ರಕ್ಷಣಾ ವ್ಯವಸ್ಥೆಯನ್ನು ಬಳಸಿಕೊಂಡು ಅದನ್ನು ಶಾಶ್ವತ ರಕ್ಷಣಾ ವ್ಯವಸ್ಥೆಯನ್ನಾಗಿ ಮಾಡಿಕೊಳ್ಳುವುದಕ್ಕೆ ನೆಪಗಳನ್ನು ಹುಡುಕಿಕೊಂಡು, ಜಾಣ ವಾದಗಳನ್ನು ಹೂಡಿಕೊಂಡು ಹೋಗುವ ವಾಂಛೆಗೆ ಸಿಗಬಾರದು. ಅದು ಆತ್ಮಾಹುತಿ. ಜಾತಿಯು ದಾಖಲಾತಿಗಳಲ್ಲಿ ಹೆಚ್ಚು ದಾಖಲಾದಷ್ಟೂ ಅದು ಮನಸ್ಸಿನಲ್ಲೂ ದಟ್ಟವಾಗಿ ದಾಖಲಾಗುತ್ತಾ ಹೋಗುತ್ತದೆ ಎಂಬುದು ನೆನಪಿರಲಿ.

೮. ಜಾತಿ ಅನುಭವಕೋಶ ಅಥವಾ ಸ್ಮೃತಿ ಎಲ್ಲ ಜಾತಿಗಳಿಗೂ ಸಾಮಾನ್ಯ. ಅದನ್ನು ಸೃಜನಶೀಲ ಚಟುವಟಿಕೆಗಳಿಗೆ ಬಳಸಿಕೊಳ್ಳಬೇಕೇ ಹೊರತು ವರ್ತಮಾನದ ಗುರುತಿನ ರಾಜಕಾರಣಕ್ಕೆ ಅಲ್ಲ. ಹಾಗೆ ಮಾಡುವುದು ಅದರ ಸತ್ವಕ್ಕೇ ಮಾಡುವ ಅಪಚಾರ.

೯. ಓರ್ವ ಗೆಳೆಯರು ಜಾತಿ ಕೆಟ್ಟದೆಂದು ಅದರ ಜೊತೆಗೆ ಗುರುತಿಸಿಕೊಳ್ಳುವುದು ತಪ್ಪೆಂದು ಭಾವಿಸುವವರು, ಮನುಷ್ಯನೂ ಕೆಟ್ಟಿರುವುದರಿಂದ ತಮ್ಮನ್ನು ಮನುಷ್ಯರೆಂದೂ ಗುರುತಿಸಿಕೊಳ್ಳದೆ ನಾಯಿ, ನರಿ ಮೊಲ ಇತ್ಯಾದಿಗಳೆಂದು ಗುರುತಿಸಿಕೊಳ್ಳಬೇಕೆಂದು ಗುಡುಗಿದ್ದಾರೆ. ಇವರಿಗೆ ಜಾತಿ ಮತ್ತು ಮನುಷ್ಯ ಹೋಲಿಸಲಾಗದ ಸಂಗತಿಗಳು ಎಂಬ ಸಾಮಾನ್ಯ ಪರಿಜ್ಞಾನವೂ ಇಲ್ಲದಿರುವುದು ಆಶ್ಚರ್ಯ. ಜಾತಿ ಬದಲಾಗದ್ದು; ಅದಕ್ಕೆ ಜೀವವಿಲ್ಲ. ಆದರೆ ಮನುಷ್ಯನಿಗೆ ಜೀವವಿದೆ; ಅವನು ಬದಲಾಗುವಂತಹವನು. ಕೆಟ್ಟತನ ಅವನ ಸಂಚಾರಿ ಭಾವ ಮಾತ್ರ. ಅವನು ಅದನ್ನು ಮೀರಬಲ್ಲನು; ಮೀರಿದ್ದಾನೆ ಕೂಡ ಎಂಬುದನ್ನು ಈ ಗೆಳೆಯರು ಅರಿಯಬೇಕು. ಆಲೋಚನೆ ಹಠವಾದಾಗ ಬುದ್ಧಿಯ ಇಂತಹ ಸ್ಥಗಿತತೆ ಉಂಟಾಗುತ್ತದೆ ಎಂದು ಕಾಣುತ್ತದೆ.

**-ಡಿ.ಎಸ್. ನಾಗಭೂಷಣ,** ಶಿವಮೊಗ್ಗ

---

## ಅಪೂರ್ವ ಡಿ'ಸಿಲ್ವರ 'ಮಂತ್ರ ಮಾಂಗಲ್ಯ' ವಿವಾಹ



**'ಹೊಸ** ಮನುಷ್ಯ' ತಂಡದ ಸಕ್ರಿಯ ಸದಸ್ಯರೂ ಮತ್ತು ಚಾಮರಾಜನಗರದ ಸಮಾಜವಾದಿ ಅಧ್ಯಯನ ಕೇಂದ್ರದ ಸ್ಥಾಪಕ ಸದಸ್ಯರೂ ಆದ ಅಪೂರ್ವ ಡಿ'ಸಿಲ್ವ ಅವರ ವಿವಾಹ ಆರ್ ಮಂಜುಳಾ ಅವರೊಂದಿಗೆ ಕಳೆದ ಮೇ ೩ರಂದು ಬುದ್ಧ ಪೂರ್ಣಿಮೆಯ ಸಂದರ್ಭದಲ್ಲಿ ಕುವೆಂಪು ಪ್ರಣೀತ 'ಮಂತ್ರ ಮಾಂಗಲ್ಯ' ವಿಧಾನದಲ್ಲಿ ನೆರವೇರಿತು.

ಮೈಸೂರಿನ ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆ ಅವರಣದಲ್ಲಿನ ಬುದ್ಧ ಧ್ಯಾನ ಮಂದಿರದಲ್ಲಿ ಹಲವು ಹಿರಿಯ ಸಮಾಜವಾದಿಗಳು, ಸಾಮಾಜಿಕ ಚಳುವಳಿಗಾರರು ಮತ್ತು ಬಂಧು ಮಿತ್ರರ ಸಮ್ಮುಖದಲ್ಲಿ ಮೈಸೂರಿನ 'ಮಾನವ ಮಂಟಪ'ದ ಕೆ. ಮುದ್ದುಕೃಷ್ಣ ಅವರು ಮಂತ್ರ ಮಾಂಗಲ್ಯದ ಪ್ರತಿಜ್ಞೆ ಬೋಧಿಸಿದರು. ಧನಂಜಯ ಎಲಿಯೂರು ವಿವಾಹ ಸಂಹಿತೆಯನ್ನು ಓದಿ ಹೇಳಿದರು.

ಈ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಹಿರಿಯ ಸಮಾಜವಾದಿ ಚಿಂತಕ ಡಿ.ಎಸ್. ನಾಗಭೂಷಣ ಅವರು ನವ ವಧೂ ವರರನ್ನು ಆಶೀರ್ವದಿಸುತ್ತಾ ಈ ವಿವಾಹವನ್ನು ಈ ಸಂದರ್ಭದಲ್ಲಿ ಅಂತರ್ಜಾತಿ ಅಥವಾ ಅಂತರ್‌ಧರ್ಮೀಯ ವಿವಾಹವೆಂದು ಕರೆದು ಅದರ ಘನತೆಯನ್ನು ಕುಂದಿಸಲಾರೆ; ಇದೊಂದು ಜಾತಿ-ಧರ್ಮಗಳನ್ನು ಮೀರಿದ ಸಹಜ ವಿವಾಹ ಎಂದರು. ಒಂದು ಕಾಲದಲ್ಲಿ ಕರ್ನಾಟಕದಲ್ಲಿ ಜಾತಿ ವಿನಾಶದ ಸಮಾಜವಾದಿ ಆಂದೋಲನದ ಭಾಗವಾಗಿ ಆರಂಭವಾದ ಅಂತರ್ಜಾತಿ ಮತ್ತು ಅಂತಧರ್ಮೀಯ ವಿವಾಹ ಪರಂಪರೆಯನ್ನು ಇಂದು ಕೆಲವರು ಲೌಕಿಕ ಲಾಭ-ನಷ್ಟಗಳ ಲೆಕ್ಕಾಚಾರಕ್ಕೆ ದೂಡಿ ಇಡೀ ಆಂದೋಲನವನ್ನು ಅಸಂಗತವೆನ್ನುವಂತೆ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ವಿಷಾದಿಸಿದರು.

ಪ್ರಾಧ್ಯಾಪಕ ಡಾ. ಕಾಳಚನ್ನೇಗೌಡರು ಮಾತನಾಡಿ, ಇಂತಹ ಸಾಮಾಜಿಕ ಬದಲಾವಣೆಯ ವಿವಾಹಗಳು ಹೆಚ್ಚು ವಿಶ್ವಾಸಾರ್ಹವಾಗಲು ಹುಡುಗ ಹುಡುಗಿಯರು ತಮ್ಮ ಭವಿಷ್ಯದ ಸಂಸಾರದ ಆರ್ಥಿಕ ಭದ್ರತೆಯನ್ನು ಖಚಿತಪಡಿಸಿಕೊಂಡು ವಿವಾಹದ ನಿರ್ಧಾರ ಕೈಗೊಳ್ಳಬೇಕೆಂದು ಕಿವಿ ಮಾತು ಹೇಳಿದರು.

ಬರ್ಟ್ ಆಲಿವೀರಾ ಮತ್ತು ಸುಗುಣ ಪ್ರೇಮ ಗೀತೆಗಳನ್ನು ಹಾಡಿದರು. ಸ್ನೇಹಾ ಓಂಕಾರ್ ಸಮಾರಂಭವನ್ನು ನಿರ್ವಹಿಸಿದರು. ರವಿಚಂದ್ರ ಚಿಕ್ಕೆಂಪಿಹುಂಡಿ ಕಾರ್ಯಕ್ರಮವನ್ನು ನಿರೂಪಿಸಿದರು.

(ವರದಿ ಮತ್ತು ಚಿತ್ರ: **ಸವಿತಾ ನಾಗಭೂಷಣ**)

ಯುವ ಸಮಾಜವಾದಿ ಚಿಂತನ ವೇದಿಕೆ

# ಕಲಿಕಾ ಮಾಧ್ಯಮದ ಪ್ರಶ್ನೆ : ಚರ್ಚೆಗೆ ಬರದ ಕೆಲ ಸಂಗತಿಗಳು

–ಕೆ. ಅರವಿಂದ ಮಿತ್ರ

**ಕ**ರ್ನಾಟಕದಲ್ಲಿ ಕಲಿಕಾ ಭಾಷಾ ಮಾಧ್ಯಮದ ಚರ್ಚೆ ಹೊಸತಲ್ಲವಾದರೂ, ಸರ್ಕಾರದ ನಿರ್ಧಾರಗಳಲ್ಲಿ ಖಾಸಗಿ ಶಾಲಾ ಸಂಸ್ಥೆಗಳ ಪ್ರಭಾವ ಹೆಚ್ಚಾಗಿರುವುದರಿಂದ, ಕೆಲವು ವರ್ಷಗಳಿಂದೀಚೆಗೆ ಈ ವಿಷಯ ಸಂವಿಧಾನ ಹಾಗೂ ಕಾನೂನಿನ ಚೌಕಟ್ಟಿನಡಿಯಲ್ಲೂ ಚರ್ಚಿಸಲ್ಪಟ್ಟಿದೆ. ಸಂವಿಧಾನದಲ್ಲಿ ಮಾತೃಭಾಷೆಯು ಕಡ್ಡಾಯವಾಗಿ ಕಲಿಕಾ ಮಾಧ್ಯಮವಾಗಬೇಕೆಂಬ ನಿಯಮ ಇಲ್ಲದೆ ಇರುವುದರಿಂದ ಹಾಗೂ ಅಭಿವೃದ್ಧಿ ಪಥದಲ್ಲಿ ಚಲಿಸಲು (ಎಡವಲು?) ಆಂಗ್ಲ ಭಾಷೆಯು ಸೂಕ್ತ ಎಂದು ಅನೇಕ ಪೋಷಕರು ಹಾಗೂ ಖಾಸಗಿ ಶಾಲೆಯವರು ಭಾವಿಸಿರುವಾಗ, ಕಳೆದ ಹತ್ತು ವರ್ಷಗಳಲ್ಲಿ ಅಸ್ತಿತ್ವಕ್ಕೆ ಬಂದ ಸರ್ಕಾರಗಳು ಕನ್ನಡವನ್ನು ಕಡ್ಡಾಯವಾಗಿ ಕಲಿಕಾ ಮಾಧ್ಯಮವನ್ನಾಗಿಸುವ ನಿಟ್ಟಿನಲ್ಲಿ ಪ್ರಯತ್ನಿಸಿದ್ದರೂ ಯಶಸ್ಸು ದಕ್ಕಿಲ್ಲ.

ಕಲಿಕಾ ಮಾಧ್ಯಮಕ್ಕೆ ಸಂಬಂಧಿಸಿದಂತೆ ಕರ್ನಾಟಕದ ಸಂದರ್ಭದಲ್ಲಿ ಎರಡು ಪ್ರಮುಖ ವಾದಗಳಿದ್ದು, ಅವುಗಳು ಇಂತಿವೆ,

೧) ಅಮೆರಿಕಾ ಹಾಗು ಐರೋಪ್ಯ ದೇಶಗಳು ಆರ್ಥಿಕ ಪ್ರಗತಿ ಸಾಧಿಸಿದ್ದು, ಪ್ರಗತಿಗೆ ಮುಖ್ಯ ಕಾರಣ ಆಂಗ್ಲ ಭಾಷೆಯಾಗಿರುವುದರಿಂದ, ಕರ್ನಾಟಕವು ಅದೇ ಮಾದರಿಯನ್ನು ಅನುಸರಿಸಬೇಕು. ಅಭಿವೃದ್ಧಿಯ ಪಥದಲ್ಲಿ ಸಾಗಬೇಕಾದರೆ ವಿಜ್ಞಾನದ ಅಗತ್ಯವಿದ್ದು, ವೈಜ್ಞಾನಿಕ ಪುಸ್ತಕಗಳೆಲ್ಲಾ ಆಂಗ್ಲ ಭಾಷೆಯಲ್ಲಿ ರಚನೆಯಾಗುವುದರಿಂದ, ಪ್ರಾಥಮಿಕ ಹಂತದಲ್ಲೇ ಕಲಿಕಾ ಮಾಧ್ಯಮವು ಆಂಗ್ಲ ಭಾಷೆಯಲ್ಲಿರಬೇಕು. ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಕೀಳರಿಮೆ ಬೆಳೆಯಬಹುದು ಹಾಗೂ ವಿದೇಶದಲ್ಲಿ ನೆಲೆಸುವ ಭಾಗ್ಯ ಒದಗಿ ಬರುವುದಿಲ್ಲವಾದುದರಿಂದ, ಇಂಗ್ಲಿಷ್ ಅತ್ಯಗತ್ಯ.

೨) ಕರ್ನಾಟಕದ ಜನರ ಭಾಷೆ ಕನ್ನಡವಾಗಿದ್ದು, ಇಂಗ್ಲಿಷ್ ಭಾಷೆಯು ಕೆಲವು ಪ್ರದೇಶಗಳಿಗೆ ಸೀಮಿತವಾಗಿರುವುದರಿಂದ, ಪ್ರಾಥಮಿಕ ಶಿಕ್ಷಣದ ಮಾಧ್ಯಮವು ಮಾತೃಭಾಷೆಯಾಗಿರಬೇಕು. ಅನೇಕ ಭಾಷಾ ತಜ್ಞರು (ನೋಮ್ ಚಾಂಸ್ಕಿ) ಕೂಡ ವೈಜ್ಞಾನಿಕವಾಗಿ ಮಾತೃಭಾಷೆಯಲ್ಲಿನ ಶಿಕ್ಷಣದ ಉಪಯೋಗಗಳನ್ನು ತಮ್ಮ ಕೃತಿಗಳಲ್ಲಿ ವಿವರಿಸಿರುವುದರಿಂದ, ಕರ್ನಾಟಕದಲ್ಲಿ ಕನ್ನಡ ಭಾಷೆ ಮಾಧ್ಯಮವಾಗಬೇಕು. ಇದರೊಂದಿಗೆ ನಗರ ಪ್ರದೇಶಗಳಲ್ಲಿ ಕನ್ನಡ ಬಳಕೆ ಕಡಿಮೆಯಾಗಿರುವುದರಿಂದ ಭಾಷೆಯ ಉಳಿವಿಗಾಗಿಯಾದರೂ ಕನ್ನಡದಲ್ಲಿ ಕಲಿಸಬೇಕು. ಈ ವಾದವನ್ನು, ಪ್ರಸ್ತುತ ಸರ್ಕಾರ, ಕನ್ನಡ ಪರ ಸಂಘಟನೆಗಳು ಹಾಗು ಸಾಹಿತಿಗಳು ಬೆಂಬಲಿಸುತ್ತಿದ್ದಾರೆ.

೨೦೧೧ರ ಸುಮಾರಿಗೆ ನಾನು ದೂರದ ಹೈದ್ರಾಬಾದ್‌ನಲ್ಲಿ ಪದವಿ ಓದುತ್ತಿದ್ದಾಗ, ಮಾತೃಭಾಷಾ ಮಾಧ್ಯಮದ ಬಗ್ಗೆ ಮೇಲ್ಕಂಡ ಎರಡು ವಾದಗಳಿಗಿಂತಲೂ ಭಿನ್ನವಾಗಿ ಚಿಂತಿಸುವ ಅಗತ್ಯವಿದೆ ಎಂದು ಅರಿವಾಯಿತು. ಅನೌಪಚಾರಿಕವಾಗಿ ಸ್ನೇಹಿತರೊಂದಿಗೆ ಭಾಷಾ ಮಾಧ್ಯಮದ ಬಗ್ಗೆ ಚರ್ಚಿಸುತ್ತಿದ್ದಾಗ ಹೈದ್ರಾಬಾದ್ ಕರ್ನಾಟಕ ಭಾಗದ ಸಹಪಾಠಿಯೊಬ್ಬ ತನ್ನ ಅನುಭವವನ್ನು ಹೀಗೆ ಹಂಚಿಕೊಂಡ–"ಯಾವ ಭಾಷೆ ಆದ್ರೂ ಅಷ್ಟೆ. ನಮ್ಮ ಸ್ಕೂಲಿನಲ್ಲಿ ಮೇಷ್ಟ್ರುಬ್ರು ಕುವೆಂಪು ಅವರ ಪದ್ಯದ ಬಗ್ಗೆ ಹೇಳುತ್ತಾ ಅಯ್ಯೋ ಪಿಕ್ಕೆ ಹಾಕೊ ಪಕ್ಷಿಗಳ ಸಾಲುಗಳನ್ನು ರುಜು ಗಿಜು ಅಂತಾರಲ್ಲಾ" ಎಂದ. ಅವನ ಧಾಟಿ ಲಘುವಾಗಿದ್ದರೂ, ಒಳ್ಳೆಯ ಶಿಕ್ಷಕರು ಇಲ್ಲವಲ್ಲ ಎಂಬ ಕೊರಗಿತ್ತು. ಈ ಮಾತುಗಳು ನನ್ನನ್ನು ಕಲಿಕಾ ಮಾಧ್ಯಮದಾಚೆಯೂ ಯೋಚಿಸಲು ಪ್ರೇರೇಪಿಸಿತು.

ಭಾರತೀಯ ಶಿಕ್ಷಣವನ್ನು ಆಮೂಲಾಗ್ರ ಬದಲಾವಣೆಗೆ ಒಳಪಡಿಸದೆ ಯಾವುದೇ ಮಾಧ್ಯಮದಲ್ಲಿ ಬೋಧಿಸಿದರೂ ಪ್ರಯೋಜನವಾಗುವುದಿಲ್ಲ. ಕನ್ನಡ ಮಾಧ್ಯಮದಲ್ಲಿ ಓದಿರುವ ನನಗೆ ಕನ್ನಡದ ಅನೇಕ ಪಠ್ಯಗಳು [ವಿಶೇಷವಾಗಿ ರಾಜಕೀಯಶಾಸ್ತ್ರ ಹಾಗೂ ಇತಿಹಾಸ] ಆಂಗ್ಲ ಪಠ್ಯಗಳ ಪೇಲವ ಅನುವಾದದಂತೆ ಕಂಡರೆ, ಭಾಷಾಪಠ್ಯಗಳು ಗೈಡ್‌ಗಳಾಗಿದ್ದವು. ಇನ್ನು ವಿಜ್ಞಾನದ ಪುಸ್ತಕಗಳಲ್ಲಿ ಆಂಗ್ಲ ಭಾಷೆಯ ಪದಗಳನ್ನು ಕನ್ನಡದಲ್ಲಿ ಬರೆಯಲಾಗಿದೆಯಷ್ಟೆ. ಐರೋಪ್ಯ ರಾಷ್ಟ್ರಗಳು ತಮ್ಮ ಸ್ಥಳೀಯ ಭಾಷೆಗಳಲ್ಲಿ ಶಿಕ್ಷಣ ನೀಡಿದರೂ ಕೂಡ, ಅವರ ಬಹುತೇಕ ಪಠ್ಯಗಳು ಸಾಂಸ್ಕೃತಿಕ ಮಾದರಿಗಳಂತಿವೆ. ಕನ್ನಡದ ಪಠ್ಯಗಳು ಭಾರತೀಯ ಇತಿಹಾಸದ ನಾಯಕರನ್ನು ಉತ್ಪ್ರೇಕ್ಷೆಯಿಂದ ವರ್ಣಿಸುವುದಕ್ಕಷ್ಟೇ ಸೀಮಿತವಾಗಿವೆ. ಆಂಗ್ಲ ಪಠ್ಯಗಳೂ ಕೂಡ ಈ ಅಪವಾದಗಳಿಗೆ ಹೊರತಲ್ಲ. ಈ ಪಠ್ಯಗಳಲ್ಲಿ ವಾಕ್ಯ ರಚನೆ ದೋಷಗಳು ಹೇರಳವಾಗಿ ಇರುವುದಲ್ಲದೇ, ಕನ್ನಡ ನಾಡಿನ ಸಂಸ್ಕೃತಿಯನ್ನು ವಿವರಿಸಲು ಸೋತಿವೆ. ಗಮನಿಸಬೇಕಾದ ಅಂಶವೆಂದರೆ, ಆಂಗ್ಲ ಮಾಧ್ಯಮದಲ್ಲೇ ಮುಳುಗಿ ಎದ್ದಿರುವ ಅನೇಕರು ಇತ್ತ ಕನ್ನಡವನ್ನು ಪೂರ್ಣವಾಗಿ ತಿಳಿಯದೇ, ಅತ್ತ ಆಂಗ್ಲ ಭಾಷೆಯನ್ನು ಜೀರ್ಣಿಸಿಕೊಳ್ಳಲಾಗದೆ ತ್ರಿಶಂಕು ಸ್ಥಿತಿಯಲ್ಲಿದ್ದಾರೆ.

ಕರ್ನಾಟಕದ ವಿಶ್ವವಿದ್ಯಾನಿಲಯಗಳ ಸ್ಥಿತಿ ಶಾಲೆಗಳಿಗಿಂತ ಭಿನ್ನವಾಗಿಲ್ಲ. ಅನೇಕ ವಿಷಯಗಳಿಗೆ ಬೋಧಿಸಲು ನುರಿತ ಅಧ್ಯಾಪಕರಿಲ್ಲದೆ, ವರ್ಷದಿಂದೀಚೆಗೆ (ನ)ಪಾಸಾದವರನ್ನು ಅತಿಥಿ ಉಪನ್ಯಾಸಕರಾಗಿ ನೇಮಿಸಿರುತ್ತಾರೆ. ಖಾಯಂ ಅಧ್ಯಾಪಕರು ಹೆಚ್ಚು ವೇತನ ಸಿಗುವುದರಿಂದ ಪಾಠದ ಕಡೆಗೆ ಗಮನ ಹರಿಸುವುದಿಲ್ಲವಾದರೆ ಅತಿಥಿ ಉಪನ್ಯಾಸಕರು ಸರಿಯಾದ ಸಮಯದಲ್ಲಿ, ಜೀವನ ನಿರ್ವಹಣೆಗೆ ಬೇಕಾಗುವಷ್ಟು ವೇತನ ಸಿಗುವುದಿಲ್ಲವೆಂದು ಪಾಠ ಮಾಡುವ ಉತ್ಸಾಹದಲ್ಲಿ ಇರುವುದಿಲ್ಲ. ಇದರಿಂದ ವರ್ಷಾನುವರ್ಷ ವಿದ್ಯಾರ್ಥಿಗಳು 'ಮಾರ್ಕ್ಸ್'ವಾದಿಗಳಾಗಷ್ಟೇ ತೇರ್ಗಡೆ ಹೊಂದುತ್ತಿದ್ದಾರೆ.

ಕರ್ನಾಟಕದ ಶಿಕ್ಷಣ ಪದ್ಧತಿಯ ಸಮಸ್ಯೆ ಸಂಕೀರ್ಣವಾಗಿರುವುದರಿಂದ ಕನ್ನಡ ಮಾಧ್ಯಮದಲ್ಲಿ ಬೋಧಿಸುವುದರಿಂದ ಪರಿಹಾರ ದೊರಕುವುದಿಲ್ಲ. ಕನ್ನಡವನ್ನು ಕಡ್ಡಾಯವಾಗಿ ಶಿಕ್ಷಣದ ಮಾಧ್ಯಮವಾಗಿ ಆದೇಶ ಹೊರಡಿಸುವ ಮೊದಲು ತಜ್ಞರು ಕನ್ನಡದ ಪಠ್ಯಗಳಲ್ಲಿ ಕರ್ನಾಟಕ ಹಾಗೂ ಭಾರತೀಯ ಸಾಹಿತ್ಯ ಮತ್ತು ಇತಿಹಾಸವನ್ನು ವಿವರಿಸಲು ಹೊಸ ಪರಿಭಾಷೆಯನ್ನು ಅಭಿವೃದ್ಧಿ ಪಡಿಸಬೇಕು. ಹಾಗೆಯೇ ಆಂಗ್ಲ ಭಾಷೆಯಿಂದಲೇ ಮುಕ್ತಿ ಎಂದು ಭಾವಿಸಿರುವವರು, ಜಗತ್ತಿನ ಪ್ರಸಿದ್ಧ ಸಾಹಿತ್ಯವು ಯುರೋಪ್ ಖಂಡದ ಬೇರೆ ಬೇರೆ ಭಾಷೆಗಳಲ್ಲಿ ಪ್ರಕಟವಾಗಿರುವಷ್ಟು ಆಂಗ್ಲ ಭಾಷೆಯಲ್ಲಾಗಿಲ್ಲ ಎಂಬ ಸತ್ಯವನ್ನು ಅರಿತು, ಮಕ್ಕಳಿಗೆ (ಅದಕ್ಕಿಂತ ಮೊದಲು ಶಿಕ್ಷಕರಿಗೆ) ಹೇರಿಕೆಯಾಗದಂತೆ ಇಂಗ್ಲಿಷ್ ಒಳಗೊಂಡಂತೆ ಇತರ ಭಾಷೆಗಳನ್ನು ಕಲಿಯಲು ಅವಕಾಶ ಒದಗಿಸಬೇಕು. ಜೊತೆಗೆ ಕನ್ನಡದಲ್ಲಿ ಕಲಿತರೆ ಮಕ್ಕಳು ಕೀಳು ಪ್ರಜ್ಞೆಯಿಂದ ನರಳುತ್ತಾರೆ ಎಂಬ ವಾದದಲ್ಲೂ ಅರ್ಥವಿಲ್ಲವೆಂಬುದನ್ನು ಅರಿಯಬೇಕು. ಕೀಳರಿಮೆ–ಮೇಲರಿಮೆ ಮನುಷ್ಯನ ಸ್ವಾಭಾವಿಕ ಗುಣಗಳಾಗಿರುವುದರಿಂದ ಕಲಿಕಾ ಮಾಧ್ಯಮಕ್ಕೂ ಈ ಗುಣಗಳಿಗೂ ನೇರ ಸಂಬಂಧವಿರುವುದಿಲ್ಲ.

ರಾಜಕೀಯ ಪಕ್ಷಗಳೂ ಕೂಡ ಭಾಷಾ ಮಾಧ್ಯಮದ ಬಗ್ಗೆ ಪ್ರಬುದ್ಧವಾಗಿ ಚಿಂತಿಸಬೇಕು. ಅನೇಕ ರಾಜಕೀಯ ನಾಯಕರು ನೇರವಾಗಿ ಅಥವಾ ಪರೋಕ್ಷವಾಗಿ ಖಾಸಗಿ ಶಾಲೆಯ ಒಡೆತನದಲ್ಲಿ ಪಾಲು ಹೊಂದಿರುವುದರಿಂದ ಭಾಷೆಯ ಬಗ್ಗೆ ರಾಜಕೀಯಾತ್ಮಕವಾಗಿ ಯಾವುದೇ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗದಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಆದುದರಿಂದ ರಾಜಕಾರಣಿಗಳು ಖಾಸಗಿ ಸಹಭಾಗಿತ್ವದಲ್ಲಿ ಶಾಲಾಕಾಲೇಜು ಸ್ಥಾಪಿಸುವುದನ್ನು ಸಂವಿಧಾನಾತ್ಮಕವಾಗಿ ತಡೆಯಬೇಕು. ಈ ಮಾರ್ಗಗಳು ಶಿಕ್ಷಣದ ಗುಣಮಟ್ಟವನ್ನು ಅಭಿವೃದ್ಧಿ ಪಡಿಸುತ್ತವೆ ಎಂದು ನಾನು ಭಾವಿಸಿರುತ್ತೇನೆ.

ಆಂಗ್ಲ ಸಾಹಿತ್ಯದ ವಿದ್ಯಾರ್ಥಿಯಾದ ನಾನು ಪ್ರಪಂಚದ ಅನೇಕ ಕೃತಿಗಳನ್ನು ಗಮನಿಸಿದಾಗ ಆ ಕೃತಿಗಳು ತಾವು ರೂಪಗೊಂಡಂತಹ ನೆಲದ ಬಗ್ಗೆ ಹೇಳುವ ಪರಿ ಆಶ್ಚರ್ಯವನ್ನುಂಟು ಮಾಡುತ್ತವೆ. ಒಂದಕ್ಷರ ಇಂಗ್ಲಿಷ್ ಬಾರದ ಅನೇಕರು ಇಂದು ಪಾಶ್ಚಿಮಾತ್ಯ ತತ್ವಶಾಸ್ತ್ರದ ಪ್ರಮುಖ ಚಿಂತಕರಾಗಿದ್ದಾರೆ. ನಾವು ಎಂದೂ ಊಹಿಸಿರದ ಹೊಸ ಮಾದರಿಯ ಐರೋಪ್ಯ ಸಾಹಿತ್ಯವು ಊರ್ಧ್ವಮುಖಿ ಸ್ಥಿತಿಯಲ್ಲಿ ಇರುತ್ತದೆ. ಇವೆಲ್ಲವೂ ಮಾತೃಭಾಷೆಯ ಶಿಕ್ಷಣದ ಪರಿಣಾಮವಲ್ಲದೆ ಬೇರೆಯಲ್ಲ.



**(ಹೈದರಾಬಾದ್‌ನ ಕೇಂದ್ರೀಯ ಇಂಗ್ಲಿಷ್ ಮತ್ತು ವಿದೇಶಿ ಭಾಷಾ ಸಂಸ್ಥೆಯಲ್ಲಿ ಆಂಗ್ಲ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದು ಅಲ್ಲಿನ ಕೇಂದ್ರೀಯ ವಿಶ್ವವಿದ್ಯಾಲಯದಿಂದ ಎಂ.ಫಿಲ್ ಮಾಡಿ ಈಗ ಮೈಸೂರು ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಸಾಹಿತ್ಯ ಬೋಧಿಸುತ್ತಿರುವ ಲೇಖಕ ಅರವಿಂದ ಮಿತ್ರ ಕನ್ನಡದ ಭರವಸೆಯ ಕಥೆಗಾರ ಮತ್ತು ಚಿಂತಕರೂ ಹೌದು)**

# ಸಮಕಾಲೀನ

## ಅಭಿವೃದ್ಧಿಯ ನೆಪದಲ್ಲಿ ಆತ್ಮಹತ್ಯೆ



ಆಧುನಿಕತೆ ನಮಗೆಲ್ಲ ಒಂದು ಕಾಲದಲ್ಲಿ ಬಹು ಪ್ರಿಯವಾದ ಶಬ್ದವಾಗಿತ್ತು. ಏಕೆಂದರೆ ಆಗ ಆಧುನಿಕರಾಗುವುದೆಂದರೆ, ನಮ್ಮನ್ನು ಕಾಲಕ್ಕೆ ಬಂಧಿಸಿ ಸ್ಥಗಿತಗೊಳಿಸಿದ್ದ ಹಲವು ವಿಚಾರಶೂನ್ಯವೆಂದು ಹೇಳಲಾಗುತ್ತಿದ್ದ ಪರಂಪರಾಗತ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ–ನಂಬಿಕೆ–ನಿಷ್ಠೆಗಳಿಂದ ಮುಕ್ತರಾಗುವುದೆಂದೇ ನಂಬಲಾಗಿತ್ತು. ವಿಚಾರಶೀಲತೆ ಅಂದರೆ ಯಾವುದನ್ನಾದರೂ ಪ್ರಶ್ನಿಸುವ ಗುಣ, ಯಾವುದನ್ನಾದರೂ ಒಡೆದು ನೋಡುವ ಬುದ್ಧಿ ಮತ್ತು ಕೌಶಲಗಳೇ–ಇದನ್ನು ಆಧುನಿಕ ವಿಜ್ಞಾನವೆಂದು ಕರೆಯಲಾಯಿತು–ಅದರ ಮುಖ್ಯ ಲಕ್ಷಣಗಳು. ಇದರಿಂದ ಅನೇಕ ಪ್ರಯೋಜನಗಳೂ ಆದವು. ಸುಖವೂ ದೊರೆಯಿತು. ಆದರೆ ಇಂದು ಈ ಆಧುನಿಕತೆಯೇ ಒಂದು ಸ್ಥಗಿತತೆಗೆ ಬಂದಿದ್ದು, ಅದೂ ಒಂದು ನಂಬಿಕೆ ಮಾತ್ರವೆಂಬ ಹೊಸ ಅರಿವು ಜಗತ್ತಿನಾದ್ಯಂತ ಉಂಟಾಗುತ್ತಿದೆ. ಇದನ್ನು ಗಾಂಧಿವಾದಿ ಜರ್ಮನ್ ಅರ್ಥಶಾಸ್ತ್ರಜ್ಞ ಶೂಮೇಕರ್ ಈ ಒಂದು ಪ್ರಶ್ನೆಯ ಮೂಲಕ ನಮಗೆ ಬಹು ಸ್ಫುಟವಾಗಿ ಮಂಡಿಸುತ್ತಾರೆ: 'ನಮ್ಮ ಪುರಾತನರು ಇಂದು ಇಲ್ಲಿಗೆ ಬಂದು ನಮ್ಮ ದಂತ ವೈದ್ಯಕೀಯ ಆಸ್ಪತ್ರೆಗೆ ಭೇಟಿ ನೀಡಿದರೆ ಅವರು ಆಶ್ಚರ್ಯಗೊಳ್ಳುವುದು, ಆಹಾ ನಮ್ಮ ಮಕ್ಕಳು–ಮೊಮ್ಮಕ್ಕಳು ಹಲ್ಲು ಸರಿಮಾಡುವ ಎಂತೆಂತಹ ಆಧುನಿಕ ಉಪಕರಣಗಳನ್ನು ಕಂಡುಹಿಡಿದಿದ್ದಾರೆ ಎಂದೋ ಅಥವಾ ನಮ್ಮ ಮಕ್ಕಳು–ಮೊಮ್ಮಕ್ಕಳ ಹಲ್ಲುಗಳು ಇಷ್ಟೊಂದು ಏಕೆ ಕೆಟ್ಟು ನಾರುತ್ತಿವೆ ಎಂದೋ?'

ಈ ಪ್ರಶ್ನೆ ಆಧುನಿಕತೆ ನಮ್ಮ ಬದುಕಿಗೆ ಕವಿಸಿರುವ ಮಾಯೆ ಎಂತಹುದು ಎಂಬುದನ್ನು ಬಹು ಸ್ಫುಟವಾಗಿ ಹೇಳುತ್ತದೆನಿಸುತ್ತದೆ. ಅದು ವಿಜ್ಞಾನಮೂಲದ(ಅಂದರೆ ತಂತ್ರಜ್ಞಾನವಾಗಿ ಒಡೆದುಕೊಂಡ), ಈ ಭೂಮಿ ಇರುವುದು ಅದನ್ನು ತಿಳಿದು ಅಂದರೆ ಬಗೆದು, ದೇಹಸುಖಕ್ಕಾಗಿ ಗರಿಷ್ಠವಾಗಿ ಅದನ್ನು ಬಳಸಿಕೊಳ್ಳಲು ಎಂಬ ಅದರ ಆಧಾರ ಗ್ರಹಿಕೆ. ಅದಕ್ಕೆ ಭೂಮಿ ಮತ್ತು ಅದನ್ನು ಸುತ್ತುವರೆದಿರುವ ವಾತಾವರಣ ನಿರ್ಜೀವವಾದ ಒಂದು ಗ್ರಾಹಕ ವಸ್ತು. ಹಾಗಾಗಿಯೇ ಗಾಂಧಿ ಇದನ್ನು ದೇಹ ಪ್ರಾಧಾನ್ಯತೆಯ ಸೈತಾನಿ ನಾಗರೀಕತೆ ಎಂದು ಕರೆದಿದ್ದರು. ಇನ್ನೂ ಪರಿಸರ ಶಾಸ್ತ್ರ ಅಥವಾ ವಿಜ್ಞಾನವೆಂಬುದರ ಅರಿವೇ ಇಲ್ಲದಾಗ ಅವರು ಈ ಭೂಮಿ ಎಲ್ಲರ ಅಗತ್ಯಗಳನ್ನು ಪೂರೈಸಬಲ್ಲುದೇ ಹೊರತು ಆಶೆಗಳನ್ನಲ್ಲ ಎಂಬ ಹೊಸ ಯುಗ ಸತ್ಯವನ್ನೆ ಹೇಳಿದ್ದರು. ಇದು ಯುಗಪುರುಷನೊಬ್ಬ ತನ್ನ ಕಾಲದ ನಾಗರೀಕತೆಯ ಬಗ್ಗೆ ಮತ್ತು ಆ ಮೂಲಕ ಅದರ ಸತ್ವವೆನಿಸಿದ ಆಧುನಿಕ ವಿಜ್ಞಾನ–ತಂತ್ರಜ್ಞಾನಗಳ ಬಗ್ಗೆ ಮಾಡಿದ ಒಂದು ಬುಡಮಟ್ಟದ ವ್ಯಾಖ್ಯಾನ ಹಾಗೂ ಹಾಕಿದ ಸೀಮಾರೇಖೆ. ಇಂದು ಪರಿಸರ ತಜ್ಞರ ಅಧ್ಯಯನಗಳು ಮಾತ್ರವಲ್ಲ, ನಮ್ಮ ಕಣ್ಣೆದುರಿಗೇ ಎಡಬಿಡದೇ ನಡೆಯುತ್ತಿರುವ ಮಾನವ ಮತ್ತು ನೈಸರ್ಗಿಕ ಅನಾಹುತಗಳೂ ಹೇಳುತ್ತಿರುವುದೂ ಇದನ್ನೇ.

ಆದರೆ ಜಗತ್ತಿರಲಿ, ಈ ದೇಶಕ್ಕೇ ಈಗ ಗಾಂಧಿ ಮರೆತುಹೋಗಿದ್ದಾರೆ. ಆ ಮರೆವಿನ ಆತ್ಯಂತಿಕ ಪರಿಣಾಮವೆಂಬಂತೆ ನಮ್ಮ ದೇಶಕ್ಕೆ ಈಗ ನರೇಂದ್ರ ಮೋದಿ ರಾಷ್ಟ್ರ ನಾಯಕರಾಗಿ ಮೂಡಿದ್ದಾರೆ. ವಿಪರ್ಯಾಸವೆಂದರೆ, ಭಾರತೀಯ ಪ್ರಾಚೀನ ಪರಂಪರೆಯ ಮೂಲ ಸತ್ವವನ್ನು ಪ್ರತಿನಿಧಿಸುವುದಾಗಿ ಹೇಳಿಕೊಳ್ಳುವ ಪರಿವಾರದಲ್ಲಿ ಬೆಳೆದ ಮೋದಿ, ಬಲಿಷ್ಠ ಭಾರತ ಎಂಬ ವಿಕ್ಷಿಪ್ತ ದೇಶಭಕ್ತಿಯ ಹುಚ್ಚುಹೊಳೆಗೆ ಸಿಕ್ಕು (ಮಾತೃ)ಭೂಮಿಯನ್ನು ಎಗ್ಗಿಲ್ಲದೆ ಬಾಚಿಕೊಳ್ಳುವ, ಬಗೆಯುವ, ಸೂರೆ ಮಾಡುವ ಅಭಿವೃದ್ಧಿ ರಾಜಕಾರಣದ ಘೋಷಣೆಗಳನ್ನು ಕೂಗುತ್ತಾ, ಕಾರ್ಯಕ್ರಮಗಳನ್ನು ರೂಪಿಸುತ್ತಾ, ಗುರಿಗಳನ್ನು ನಿಗದಿ ಮಾಡುತ್ತಾ ಜನರನ್ನೂ ಹುಚ್ಚೆಬ್ಬಿಸುತ್ತಿದ್ದಾರೆ.

ನಿಜ, ಇದು ಮೋದಿಯವರಿಂದ ಆರಂಭವಾದ ರಾಜಕಾರಣವೇನಲ್ಲ. ನೆಹ್ರೂ ಕಾಲದಲ್ಲೇ ಇದರ ಅಡಿಪಾಯ ಹಾಕಲಾಗಿತ್ತು. ಆದರೆ ಆಗ ಇದರ ಅನಾಹುತಗಳ ಪರಿವೆ ಯಾರಿಗೂ ಇರಲಿಲ್ಲ. ಆದರೆ ಅದು ಒಂದು ರಾಜಕಾರಣವಾಗಿ–ಜಾಗತಿಕ ಪಿತೂರಿಯಾಗಿ–ನಮ್ಮ ದೇಶಕ್ಕೆ ಬಂದದ್ದು ನರಸಿಂಹರಾವ್ ಮತ್ತು ಮನಮೋಹನಸಿಂಗ್‌ರ ಕಾಲದಲ್ಲಿ. ಆದರೆ ಅವರ ಪಕ್ಷಕ್ಕೆ ಒಂದು ರಾಷ್ಟ್ರೀಯ ಹೋರಾಟದ, ಅದರ ಗಾಂಧಿವಾದಿ ಮೌಲ್ಯಗಳ ನೆನಪು ಮಸುಕಾಗಿಯಾದರೂ ಇದ್ದು, ಅದು ಆಳದ ಆತ್ಮಸಾಕ್ಷಿಯಾಗಿ ಕೆಲಸ ಮಾಡುತ್ತಾ ಇಂತಹ ಅಭಿವೃದ್ಧಿ ಮಾದರಿಗೆ ಪರಿಸರ ರಕ್ಷಣೆಯ ಕಾನೂನುಗಳ ಮೂಲಕ ಕಡಿವಾಣ ಹಾಕುವ ಕೆಲಸವೂ ನಡೆಯಿತು. ಆದರೆ ಮೋದಿಯವರ ಪಕ್ಷಕ್ಕೆ ಆ ಹಿನ್ನೆಲೆಯೇ ಇಲ್ಲವಾದ್ದರಿಂದಲೋ ಏನೋ ಈಗ ಆ ಕಾನೂನುಗಳ ಪ್ರಾಣವನ್ನೇ ತೆಗೆಯುವ ದುಸ್ಸಾಹಸಕ್ಕೆ ಕೈಹಾಕಿದೆ : ಯಾರ ಸುಖ–ಸಂಪತ್ತು ಸಂತೋಷಗಳಿಗಾಗಿ ಈ ಅಭಿವೃದ್ಧಿಯ ಹಪಾಹಪಿಯನ್ನು ಸೃಷ್ಟಿಸಲಾಗಿದೆಯೋ ಆ ಮನುಷ್ಯ ಜೀವಿಯು, ಯಾವ ಪ್ರಕೃತಿಯ ಮೇಲೆ ಈಗ ಎಗ್ಗಿಲ್ಲದೆ ಪ್ರಹಾರ ಮಾಡಲು ಹೊರಡಲಾಗಿದೆಯೋ ಅದರ ವಿಕಾಸದಲ್ಲಿ ಮೂಡಿದ ಅತ್ಯಂತ ಶ್ರೇಷ್ಠ ತಳಿ; ಹಾಗಾಗಿ ಇದು ತಾನು ಕೂತಿರುವ ಮರದ ಬುಡವನ್ನೇ ಕಡಿಯ ಹೊರಡುವ ಮೂರ್ಖತನ ಎಂಬ ಅರಿವೇ ಕಾಣದ ರಾಜಕಾರಣವಿದು. ದುರಂತವೆಂದರೆ–ಇದನ್ನು ದುಷ್ಟತನವೆಂದೇ ಕರೆಯಬೇಕು–ಈ ಅರಿವನ್ನು ಮೂಡಿಸಲು ಯತ್ನಿಸುತ್ತಿರುವ ಸ್ವಯಂಸೇವಾ ಸಂಸ್ಥೆಗಳ ಮೇಲೂ ಈ ಸರ್ಕಾರ ಗಧಾಪ್ರಹಾರ ಮಾಡಹೊರಟಿದೆ.

ಇನ್ನು ಮೋದಿ ರಾಜಕಾರಣಕ್ಕೆ ಪ್ರತಿ ರಾಜಕಾರಣ ಮಾಡಹೊರಟಂತಿರುವ ರಾಜ್ಯದ ಕಾಂಗ್ರೆಸ್ ಸರ್ಕಾರ ಭಾರತದ ಬಹುಭಾಗದ ಪರಿಸರ ಸಮತೋಲನವನ್ನು ಕಾಯುವ ಪಶ್ಚಿಮ ಘಟ್ಟಗಳ ಸಂರಕ್ಷಣೆಯ ಜಾಗತಿಕ ಪ್ರಯತ್ನವನ್ನು ನಿಷ್ಫಲಗೊಳಿಸ ಹೊರಟಿರುವ ದುರಂತವನ್ನೂ ನಾವು ಇಂದು ನೋಡುತ್ತಿದ್ದೇವೆ. ಮೊದಲು ಮಾಧವ ಗಾಡ್ಗೀಳ್ ವರದಿಯನ್ನು, ಈಗ ಕಸ್ತೂರಿ ರಂಗನ್ ವರದಿಯನ್ನೂ ತಿರಸ್ಕರಿಸ ಹೊರಟಿರುವ ಸಿದ್ಧರಾಮಯ್ಯನವರ ಕಾಂಗ್ರೆಸ್ ಸರ್ಕಾರಕ್ಕೆ ತನ್ನ ಪರಂಪರೆಯ ಕಿಂಚಿತ್ತೂ ಪ್ರಜ್ಞೆ ಇಲ್ಲವೆಂದು ತೋರುತ್ತದೆ. ಸಿದ್ಧರಾಮಯ್ಯ ಆಗೀಗಲಾದರೂ ಗಾಂಧಿ ಟೋಪಿ ಹಾಕುತ್ತಾರೆ. ಅದನ್ನು ಈಗ ನಿಲ್ಲಿಸುವುದು ಒಳ್ಳೆಯದು.



ಕೊನೆಯದಾಗಿ, ಈ ಹೊಸ ಅಭಿವೃದ್ಧಿ ಹಪಾಹಪಿಯ ಆದಿರೂಪಕದಂತಿರುವ ಪೋಖ್ರಾನ್ ಅಣುಸ್ಫೋಟಗಳ ಪರಿಣಾಮಗಳನ್ನು ಅರಿಯಲು ಅಲ್ಲಿಗೇ ಹೋಗಬೇಕು. ಮನೆಮನೆಯಲ್ಲೂ ಕ್ಯಾನ್ಸರ್ ಭೀತಿ ಉಂಟಾಗಿರುವ ಆ ಜಾಗ ಈ ಅಭಿವೃದ್ಧಿಯ ಪಥ ಎತ್ತ ಸಾಗುತ್ತಿದೆ ಎಂಬುದರ ಕಣಿ ಹೇಳುತ್ತಿರುವಂತಿದೆ.

ನಮ್ಮ ಈ ಆಧುನಿಕ ಅಭಿವೃದ್ಧಿ ಸಂಕಥನದ ಈ ಮೂರೂ ದುರಂತಕಥೆಗಳ ಜೊತೆಗೇ ಬದನವಾಳು ಸತ್ಯಾಗ್ರಹವನ್ನೂ ಚರ್ಚಿಸಿದ್ದೇವೆ. ಬರೆಯಿರಿ–ಸಂ.

## ಬಂತೋ ಬಂತು ಅಭಿವೃದ್ಧಿಯ ಬುಲೆಟ್ ಟ್ರೈನ್! ದಾರಿ ಬಿಡಿ!!

–ನಾಗೇಶ ಹೆಗಡೆ

**ಈ** ಅಂತೆಕಂತೆಯನ್ನು ನಾವು ಹಿಂದೆಲ್ಲೋ ಕೇಳಿದ್ದೇವೆ ಅಥವಾ ಓದಿದ್ದೇವೆ:

ಯಾವುದೋ ಮಂತ್ರವಾದಿಯೊಬ್ಬ ಎಂಥದೋ ವಾಮಾಚಾರಕ್ಕೆ ಕೂತು ತನ್ನ ಕೈಯಲ್ಲಿ ಮಂತ್ರಿಸಿದ ನಿಂಬೆ ಹಣ್ಣು ಹಿಡಿದು ಅದಕ್ಕೆ ಕಾರೆಮುಳ್ಳಿನಿಂದ ಚುಚ್ಚಿಬಿಟ್ಟರೆ ಸಾಕು: ದೂರದಲ್ಲೆಲ್ಲೋ ಇದ್ದ ವ್ಯಕ್ತಿಯ ಕಾಲೋ ಕೈಯೋ ಠಕ್ಕೆಂತು ಮುರಿದು ಹೋಗುತ್ತದೆ.

'ಅದು ಕಟ್ಟುಕತೆ ಅಲ್ರೀ! ನಿಜಕ್ಕೂ ಅಂಥದ್ದು ನಡೆಯುತ್ತದೆ ಗೊತ್ತಾ?' ಎಂದು ಕನ್ನಡದ ಹೆಸರಾಂತ ಕವಿ ಡಾ. ಪುತಿನ ಅವರು ಹೀಗೇ ಹರಟೆ ಕಟ್ಟೆಯಲ್ಲಿ ಹೇಳಿದರಂತೆ. ಸುತ್ತ ಕೂತವರಿಗೆ ಅಚ್ಚರಿ. 'ಈ ಕಾಲದಲ್ಲಿ ಇಂಥದ್ದು ನಡೆಯುವುದುಂಟೆ, ಎಲ್ಲಾ ಬರುಡೆ ಬಿಡ್ರಿ' ಎಂದು ಕೆಲವರು ಸ್ವರ ಎತ್ತಿದಾಗ ಪುತಿನ, 'ಹೌದ್ರೀ, ಹಿಂದಿನ ಕಾಲದ್ದು ಹೇಳ್ತಾ ಇಲ್ಲ; ಈ ಕಾಲದಲ್ಲೇ ಇಂಥವು ನಡಿಯೋದು! ತಾಲ್ಲೂಕು ಕಚೇರಿಯಲ್ಲೋ ವಿಧಾನ ಸೌಧದಲ್ಲೋ ಕೂತ ದೊಡ್ಡ ಅಧಿಕಾರಿಯೊಬ್ಬ ತನ್ನ ಚೂಪು ಲೇಖನಿ ಎತ್ತಿ ಒಂದು ಚಿಕ್ಕ ಸಹಿ ಹಾಕಿದರೂ ಸಾಕು– ಎಷ್ಟೋ ಕುಟುಂಬಗಳು ಬಿದ್ ಹೋಗೋದಿಲ್ಲವಾ? ಊರಿಗೆ ಊರೇ ಎತ್ತಂಗಡಿ ಆಗಿ ಹೋಗೋದಿಲ್ಲವಾ?'

ಹೌದೆಂದು ನಾವೆಲ್ಲ ತಲೆದೂಗಲೇಬೇಕಾದ ಇಂಥ ಮಾಡರ್ನ್ ವಾಮಾಚಾರಗಳು ಈಗೀಗಂತೂ ಜಾಸ್ತಿಯೇ ಆಗುತ್ತಿವೆ. ಅದು ನಮ್ಮ ಲಿಂಗನಮಕ್ಕಿ ಜಲಾಶಯ ನಿರ್ಮಾಣದ ಸಂದರ್ಭದಲ್ಲೂ ಆಗಿತ್ತು, ನರ್ಮದಾ ನದಿಗೆ ಸರ್ದಾರ್ ಸರೋವರ ನಿರ್ಮಿಸಿದಾಗಲೂ ಆಗಿದೆ, ಒಡಿಶಾದ ನಿಯಾಮಗಿರಿ ಪರ್ವತದಲ್ಲಿ,




ಮಂಗಳೂರಿನ ಬಳಿಯ ಎಸ್‌ಇಝಡ್ ಪ್ರದೇಶದಲ್ಲಿ ಆಗುತ್ತಿದೆ... ಉದಾಹರಣೆಗಳು ಒಂದೆ, ಎರಡೆ? ಈಗಂತೂ ಅಭಿವೃದ್ಧಿಯ ಮಹಾ ಬುಲ್ಡೋಜರೇ ಹೊರಟಿದೆ. ಅದಕ್ಕಂತೂ ಕೃಷಿ ಭೂಮಿ, ಅದುರಿನ ಬೆಟ್ಟ, ಹುಲ್ಲುಗಾವಲು, ಗೊಂಡಾರಣ್ಯ, ಕರಾವಳಿ ಅಷ್ಟೇ ಅಲ್ಲ, ಸಮುದ್ರದ ಆಳ ತಳದಲ್ಲೂ ಸಮೃದ್ಧಿಯ ಖಜಾನೆಯೇ ಕಾಣುತ್ತಿದೆ. ಅವನ್ನೆಲ್ಲ ಗುಡ್ಡೆಹಾಕಿ, ಇಲ್ಲವೆ ಸಮತಟ್ಟು ಮಾಡಿ ಆಧುನಿಕತೆಯ ಬಹುಮಹಡಿಗಳನ್ನು ಬುಲೆಟ್ ವೇಗದಲ್ಲಿ ನಿರ್ಮಿಸುವ ಧಾವಂತದ ಯೋಜನೆಗಳಿಗೆ ಸಹಿ ಹಾಕಲು ವಿಶ್ವದ ಮಹಾನ್ ನಾಯಕರನ್ನೆಲ್ಲ ಸಾಲುಗಟ್ಟಿ ನಿಲ್ಲಿಸಲಾಗುತ್ತಿದೆ.

ಆದರೆ ಹಾಗೆಲ್ಲ ಸಿಕ್ಕಸಿಕ್ಕಲ್ಲಿ ಅಭಿವೃದ್ಧಿ ಯೋಜನೆಗಳನ್ನು ತೂರಿಸಲು ಹೋದರೆ ದೇಶದ ಅಮಾಯಕ ಜೀವಿಗಳ ಬದುಕು ದಾರುಣವಾದೀತು. ನೈಸರ್ಗಿಕ ಸಮತೋಲ ಬಿಗಡಾಯಿಸೀತು. ಸಾಮಾಜಿಕ ನ್ಯಾಯ ಮೂಲೆಗುಂಪಾದೀತು. ಅಂಥವೆಲ್ಲ ಆಗದ ಹಾಗೆ ನಮ್ಮ ಸಂವಿಧಾನದಲ್ಲಿ ಅನೇಕ ಬಗೆಯ ರಕ್ಷಣಾ ಬೇಲಿಗಳನ್ನು ನಿರ್ಮಿಸಲಾಗಿದೆ. ಅವು ಸಡಿಲವಾಗದ ಹಾಗೆ ಕಾಲಕಾಲಕ್ಕೆ ವಿವಿಧ ಕಾನೂನು ಕಟ್ಟಳೆಗಳನ್ನು ಹಿಂದಿನ ಸರಕಾರಗಳು ರೂಪಿಸಿದ್ದವು. ಇಂತಿಂಥ ತಾಣಗಳಲ್ಲಿ ಯಾರೂ ಕಾಲಿಡಕೂಡದು, ಇಂತಿಂಥ ಜೀವಿಗಳ ಬದುಕಿನ ಹಕ್ಕುಗಳನ್ನು ಹೊಸಕಿ ಹಾಕಬಾರದು ಎಂಬ ಕಟ್ಟುಪಾಡುಗಳಿದ್ದವು. ಅವುಗಳನ್ನೆಲ್ಲ ಉಲ್ಲಂಘಿಸಿ ದೋಚುವವರು ದೋಚುತ್ತಲೇ ಇದ್ದು, ತಪ್ಪಿತಸ್ಥರು ಪಾರಾಗುತ್ತಲೇ ಇದ್ದಾರೆಂಬುದು ನಿಜವಾದರೂ, ಜಗತ್ತಿನ ಅತ್ಯುತ್ತಮ ಬೇಲಿಗಳು ನಮ್ಮಲ್ಲಿವೆಯೆಂಬುದನ್ನಂತೂ ಹೆಮ್ಮೆಯಿಂದ ಹೇಳಬಹುದಿತ್ತು.

ಈಗ ಬೇಲಿಗಳನ್ನೇ ಕಿತ್ತೊಗೆಯುವ ಹುನ್ನಾರ ನಡೆಯುತ್ತಿದೆ. ಈಗಿನ ನಿಸರ್ಗ ರಕ್ಷಣಾ ಕಾನೂನುಗಳೆಲ್ಲ ದೇಶದ ಅಭಿವೃದ್ಧಿಗೆ ತೊಡಕಾಗುತ್ತಿವೆ ಎಂದು ಪರಿಗಣಿಸಲಾಗುತ್ತಿದೆ. ಅದಕ್ಕೇ ಅಂಥ ತೊಡಕುಗಳ ನಿವಾರಣೆಗೆ ಪೂರ್ವಭಾವಿ ಸಿದ್ಧತೆಗಳು ನಡೆದಿವೆ. ಪರಿಸರ ರಕ್ಷಣೆಗೆ ಸಂಬಂಧಿಸಿದ ಇದುವರೆಗಿನ ಕಾನೂನುಗಳ ಮರುಪರಿಶೀಲನೆ ಮಾಡಲೆಂದೇ ಕಳೆದ ವರ್ಷ ಒಂದು 'ಉನ್ನತ ಮಟ್ಟದ ಸಮಿತಿ' (ಉಮಸ) ನೇಮಕಗೊಂಡಿತ್ತು. ಕೇಂದ್ರದ ಪರಿಸರ, ಅರಣ್ಯ ಮತ್ತು ಹವಾಗುಣ ಬದಲಾವಣೆ ಇಲಾಖೆಯ ವತಿಯಿಂದ ರಚಿತವಾದ ಈ ಸಮಿತಿಗೆ ಕೇಂದ್ರದ ಸಚಿವ ಸಂಪುಟದ ಮಾಜಿ ಕಾರ್ಯದರ್ಶಿ ಟಿಎಸ್‌ಆರ್ ಸುಬ್ರಹ್ಮಣ್ಯನ್ ಎಂಬವರನ್ನು ಅಧ್ಯಕ್ಷರೆಂದು ನೇಮಕ ಮಾಡಲಾಗಿತ್ತು. 'ಸುಬ್ರಹ್ಮಣ್ಯನ್ ಸಮಿತಿ' ಎಂತಲೇ ಪರಿಚಿತವಾಗಿರುವ ಈ *ಉಮಸ* ಅದೇನೇನೆಲ್ಲ ಬದಲಾವಣೆಗಳನ್ನು ಸೂಚಿಸಿದೆ ಎಂದರೆ, ಅದರ ಶಿಫಾರಸುಗಳು ಜಾರಿಗೆ ಬಂದಿದ್ದೇ ಆದರೆ ನಮ್ಮ ದೇಶದ ನೈಸರ್ಗಿಕ ಸಂಪತ್ತನ್ನೆಲ್ಲ ವಾಣಿಜ್ಯ ಕಂಪನಿಗಳಿಗೆ ಮತ್ತು ಉದ್ಯಮಗಳಿಗೆ ಹರಿವಾಣದಲ್ಲಿಟ್ಟು ಕೊಟ್ಟಂತಾಗುತ್ತದೆ. ನಾವೆಲ್ಲ ಬಾಯಿಮುಚ್ಚಿ, ಕೈಕಟ್ಟಿ ನಿಲ್ಲಬೇಕಾಗುತ್ತದೆ ವಿನಾ ಅದನ್ನು ಪ್ರತಿಭಟಿಸುವ ಅಥವಾ ಪ್ರಶ್ನಿಸುವ ಹಕ್ಕು ಕೂಡ ಪ್ರಜೆಗಳಿಗೆ ಇರುವುದಿಲ್ಲ. ಪ್ರಜೆಗಳು ಹಾಗಿರಲಿ, ರಾಜ್ಯ ಸರಕಾರಗಳು ಕೂಡ ಏನೂ ಮಾಡಲು ಸಾಧ್ಯವಾಗುವುದಿಲ್ಲ.

ನಿಸರ್ಗ ಸಂಪನ್ಮೂಲ ಮತ್ತು ಪರಿಸರ ರಕ್ಷಣೆಗೆಂದು ಇದುವರೆಗೆ ಪ್ರಮುಖವಾಗಿ ಐದು ಕಾಯಿದೆಗಳಿದ್ದವು. ಪರಿಸರ ಸಂರಕ್ಷಣಾ ಕಾಯಿದೆ ೧೯೮೬, ಅರಣ್ಯ ಸಂರಕ್ಷಣಾ ಕಾಯಿದೆ ೧೯೮೦, ವನ್ಯಜೀವ ಸಂರಕ್ಷಣಾ ಕಾಯಿದೆ ೧೯೭೨, ಜಲಸಂರಕ್ಷಣಾ ಕಾಯಿದೆ ೧೯೭೪ ಮತ್ತು ವಾಯುಗುಣ ಸಂರಕ್ಷಣಾ ಕಾಯಿದೆ ೧೯೮೧. ಗಣಿಗಾರಿಕೆ, ಜಲಾಶಯ ನಿರ್ಮಾಣ, ಕಾರ್ಖಾನೆ ಸ್ಥಾಪನೆ ಮುಂತಾದವುಗಳನ್ನು ಪ್ರಾರಂಭಿಸುವ ಮುನ್ನ ಯಾವುದೇ ಉದ್ಯಮ ಅಥವಾ ವಾಣಿಜ್ಯ ಸಂಸ್ಥೆ, ಅಥವಾ ಸರಕಾರಿ ಇಲಾಖೆ ಈ ಐದೂ ಕಾಯಿದೆಗಳಲ್ಲಿ ಯಾವುದೂ ಉಲ್ಲಂಘನೆಯಾಗದಂತೆ ನೋಡಿಕೊಳ್ಳಬೇಕಿತ್ತು. ಉಲ್ಲಂಘಿಸಿದವರ ವಿರುದ್ಧ ಯಾರು ಬೇಕಾದರೂ ನ್ಯಾಯಾಲಯದಲ್ಲಿ ಖಟ್ಲೆ ಹಾಕಬಹುದಿತ್ತು. ಈ ಐದನ್ನೂ ಮರುಪರಿಶೀಲನೆ ಮಾಡಿ ಯಾವು ಯಾವುದರ ನಿರ್ಬಂಧಗಳನ್ನು ಸಡಿಲಿಸಬಹುದು ಎಂಬುದನ್ನು ಶಿಫಾರಸು ಮಾಡುವಂತೆ ಸುಬ್ರಹ್ಮಣ್ಯನ್ ಸಮಿತಿಯನ್ನು ಕೋರಲಾಗಿತ್ತು. ಅಷ್ಟೇ ಅಲ್ಲ, ಕೇವಲ ಒಂದೇ ತಿಂಗಳೊಳಗೆ ಈ ಎಲ್ಲ ಕಾನೂನುಗಳನ್ನು ಓದಿ ಅರಗಿಸಿಕೊಂಡು, ಅದರ ಹಿಂದಿರುವ ವೈಜ್ಞಾನಿಕ ಪರಿಕಲ್ಪನೆಗಳನ್ನು ಅರ್ಥ ಮಾಡಿಕೊಂಡು, ಅತಿವೇಗದ ಅಭಿವೃದ್ಧಿಗೆ ಅಡ್ಡಿಯಾಗಬಲ್ಲ ಬಿಗಿತಗಳು ಯಾವುಯಾವುದೆಂದು ಪಟ್ಟಿ ಮಾಡಿ, ಅವುಗಳನ್ನು ಸಡಿಲಿಸುವಂತೆ ಮಾರ್ಗಸೂಚಿಗಳನ್ನು ನೀಡಿ ೨೦೧೪ರ ಆಗಸ್ಟ್ ೨೯ರಂದು ಸಮಿತಿಯನ್ನು ರಚಿಸಲಾಗಿತ್ತು. ಅಷ್ಟು ತ್ವರಿತವಾಗಿಯಲ್ಲದಿದ್ದರೂ ಮೂರೇ ತಿಂಗಳಲ್ಲಿ ಆ ಕೆಲಸವನ್ನು ಅತ್ಯಂತ ಚುರುಕಾಗಿ, ಬಿಡುಬೀಸಾಗಿ ಮಾಡಿ ಮುಗಿಸಿ ನವೆಂಬರ್ ೨೦ರಂದು ಕೇಂದ್ರ ಸರಕಾರಕ್ಕೆ ವರದಿಯನ್ನು ಸಲ್ಲಿಸಲಾಗಿದೆ.


**ಟಿಎಸ್ಸಾರ್ ಸುಬ್ರಮಣ್ಯನ್**

ಕೆಲವು ಉದಾಹರಣೆಗಳನ್ನು ನೋಡೋಣ: ಸಮಿತಿಯ ಶಿಫಾರಸಿನ ಪ್ರಕಾರ, ಶೇಕಡಾ ೭೦ ಭಾಗ ದಟ್ಟ ಮರಗಳಿರುವ ಪ್ರದೇಶಗಳನ್ನಷ್ಟೇ 'ಹೋಗಬಾರದ ಪ್ರದೇಶ' ಎಂದು ಘೋಷಣೆ ಮಾಡಬೇಕಂತೆ. ಇನ್ನುಳಿದ ಪ್ರದೇಶಗಳನ್ನೆಲ್ಲ ಯಾವ ಬಿಸಿನೆಸ್ ಕಂಪನಿಗೆ ಬೇಕಾದರೂ ಕೊಡಬಹುದು. ಭಾರತದ ಬಹಳಷ್ಟು ವನ್ಯಜೀವಿಗಳು, ಅಪರೂಪದ ಮೃಗಪಕ್ಷಿಗಳು ತೆರೆದ ಅರಣ್ಯಗಳಲ್ಲಿ, ಹುಲ್ಲುಗಾವಲಿನಲ್ಲಿ ವಾಸಿಸುತ್ತವೆ. ಅವಕ್ಕೆ ಇನ್ನುಮೇಲೆ ಯಾವ ರಕ್ಷಣೆಯೂ ಇರುವುದಿಲ್ಲ. ಅಷ್ಟೇ ಅಲ್ಲ, ಈ ೭೦% ದಟ್ಟ ಅರಣ್ಯವಿರುವ 'ಹೋಗಬಾರದ ಪ್ರದೇಶ'ಗಳನ್ನೂ ವಿಶೇಷ ಪ್ರಸಂಗಗಳಲ್ಲಿ ಅಭಿವೃದ್ಧಿ ಯೋಜನೆಗಳಿಗೆ ಕೊಡಬಹುದಂತೆ. ಅಂಥ 'ವಿಶೇಷ ಪ್ರಸಂಗ' ಯಾವುದೆಂಬ ವ್ಯಾಖ್ಯೆಯನ್ನು ಕೂಡ ಸಮಿತಿ ಕೊಟ್ಟಿಲ್ಲವಾದ್ದರಿಂದ ತಮಗೆ ತೋಚಿದಂತೆ ಯಾರು ಬೇಕಾದರೂ ಅಂಥ ಪ್ರಸಂಗಗಳನ್ನು ಸೃಷ್ಟಿಸಿಕೊಂಡು ತಮಗೆ ಬೇಕಿದ್ದನ್ನು ಬಾಚಿಕೊಳ್ಳಬಹುದು. ರಾಷ್ಟ್ರೀಯ ಮಹತ್ವದ ಯೋಜನೆಗಳಾಗಿದ್ದರೆ ಗ್ರಾಮಸಭೆಯ ಅನುಮತಿಯೂ ಇನ್ನು ಅಗತ್ಯವಿರುವುದಿಲ್ಲ.

ಈಗಿರುವ ವ್ಯವಸ್ಥೆಯ ಪ್ರಕಾರ, ಪರಿಸರ ರಕ್ಷಣೆಗೆ ಭಂಗ ಬರಬಹುದಾದ ಯೋಜನೆಗೆ ಅನುಮತಿ ನೀಡಿದ ಇಲಾಖೆಯ ವಿರುದ್ಧ ೯೦ ದಿನಗಳ ಒಳಗೆ 'ರಾಷ್ಟ್ರೀಯ ಹಸುರು ನ್ಯಾಯಪೀಠ'ಕ್ಕೆ ಮೊರೆ ಹೋಗಬಹುದು. ನ್ಯಾಯಪೀಠದಲ್ಲಿ ಕಾನೂನು ತಜ್ಞರಷ್ಟೇ ಅಲ್ಲ, ಪರಿಸರ ತಜ್ಞರೂ ಇರುತ್ತಾರೆ. *ಉಮಸ* ಶಿಫಾರಸಿನ ಪ್ರಕಾರ ಇನ್ನು ಮೇಲೆ ಹಾಗಾಗುವುದಿಲ್ಲ. ಹಸುರು ನ್ಯಾಯಪೀಠ ಇನ್ನುಮೇಲೆ ಪರಿಸರ ಸಂಬಂಧಿ ವೈಜ್ಞಾನಿಕ ಸತ್ಯಾಸತ್ಯದ ಕುರಿತು ತಲೆಹಾಕುವಂತಿಲ್ಲ. ಅದೇನಿದ್ದರೂ ಕಾನೂನಿಗೆ ಸಂಬಂಧಿಸಿದ ವಿಷಯಗಳ ಮರುಪರಿಶೀಲನೆ ಮಾಡಬಹುದು. ಹಸುರು ನ್ಯಾಯಪೀಠದ ಬದಲು 'ಮನವಿ ಮಂಡಲಿ' (ಅಪೆಲ್ಲೇಟ್ ಬೋರ್ಡ್) ಇರುತ್ತದೆ. ಅದಕ್ಕೆ ೪೫ ದಿನಗಳ ಒಳಗೆ ಆಕ್ಷೇಪಣೆ ಸಲ್ಲಿಸಬೇಕು. ಅಲ್ಲಿ ಕಾನೂನು ಮತ್ತು ಆಡಳಿತ ತಜ್ಞರು ಮಾತ್ರ ಇರುತ್ತಾರೆ. ಪರಿಸರ ತಜ್ಞರು ಇರುವುದಿಲ್ಲ.

ಜಿಲ್ಲಾ ಮಟ್ಟದಲ್ಲಿ 'ವಿಶೇಷ ಪರಿಸರ ನ್ಯಾಯಾಲಯ'ಗಳನ್ನು ಸ್ಥಾಪಿಸಬೇಕೆಂದೇನೂ ಸಮಿತಿ ಶಿಫಾರಸು ಮಾಡಿದೆ. ಜಿಲ್ಲೆಯಲ್ಲಿ ಏನೇ ಪರಿಸರ ನಾಶದ ಯೋಜನೆಗಳು ಬಂದರೂ ದಾವೆ ಹೂಡಬಹುದು. ಆದರೆ ಹಾಗೆ ದಾವೆ ಹೂಡಲು ಯಾರೂ ಬಾರದ ಹಾಗೆ ಸಾಕಷ್ಟು ವ್ಯವಸ್ಥೆಗಳನ್ನು ಸಮಿತಿ ಶಿಫಾರಸು ಮಾಡಿದೆ. ದಾವೆ ಹೂಡುವ ವ್ಯಕ್ತಿ ಸ್ಥಳೀಯನೇ ಆಗಿರಬೇಕು. ಮೇಲಾಗಿ, ತಾನು ದಾವೆ ಹೂಡಲು 'ತಕ್ಕುದಾದ ವ್ಯಕ್ತಿ ಹೌದು' ಎಂಬುದನ್ನು ದಾವೆಗೆ ಮುನ್ನವೇ ನ್ಯಾಯಾಲಯಕ್ಕೆ ಮನದಟ್ಟು ಮಾಡಬೇಕಾಗುತ್ತದೆ. ಹಾಗೆ ಮಾಡಲು ವಿಫಲನಾದರೆ ದಂಡ ಕಟ್ಟಬೇಕಾಗುತ್ತದೆ.

ಅಷ್ಟೇ ಅಲ್ಲ, ಇದುವರೆಗೆ ಜಾರಿಯಲ್ಲಿದ್ದ ಕಾಯಿದೆಗಳ ಹಿಂದೆ 'ಸರಕಾರದ ಮೇಲೆ ವಿಶ್ವಾಸ' (ಪಬ್ಲಿಕ್ ಟ್ರಸ್ಟ್) ಮತ್ತು 'ಗರಿಷ್ಠ ಸಾರ್ವತ್ರಿಕ ಕಲ್ಯಾಣ' ಎಂಬ ಬುನಾದಿ ಸ್ತರದ ಪರಿಕಲ್ಪನೆಗಳಿದ್ದವು. '*ಉಮಸ*'ದಲ್ಲಿ ಅದರ ಬದಲು 'ಖಾಸಗಿಯವರ ಮೇಲೆ ವಿಶ್ವಾಸ' (ಪ್ರೈವೇಟ್ ಟ್ರಸ್ಟ್) ಇರಬೇಕೆಂಬ ಪರಿಕಲ್ಪನೆಯನ್ನು ಮುಂದೊಡ್ಡಲಾಗಿದೆ. ಖಾಸಗಿ ಕಂಪನಿಗಳಿಗೂ ಸಾರ್ವತ್ರಿಕ ಹಿತಾಸಕ್ತಿಗಳು ಇರುತ್ತವೆ ಎಂದು ಅದು ಪರೋಕ್ಷವಾಗಿ ಹೇಳಲಾಗಿದೆ.

ಇರಬಹುದು. ಆದರೆ *ಉಮಸ*ಕ್ಕೆ ಪ್ರಜೆಗಳ ಮೇಲೆಯೇ ವಿಶ್ವಾಸ ಇದ್ದಂತಿಲ್ಲ! ಪರಿಸರಕ್ಕೆ ಅನ್ಯಾಯವಾಗುತ್ತಿದೆಯೆಂದು ಯಾರಾದರೊಬ್ಬ ದಾವೆ ಹೂಡುವ ಮುನ್ನ ತಾನು ಸಾಚಾ ವ್ಯಕ್ತಿ ಹೌದು ಎಂಬುದನ್ನು ಕೋರ್ಟಿಗೆ ಮೊದಲು ಮನದಟ್ಟು ಮಾಡಿಕೊಡಬೇಕಾಗುತ್ತದೆ. ಯೋಜನೆಗಳಿಗೆ ಅರ್ಜಿ ಸಲ್ಲಿಸುವ ಕಂಪನಿಗಳು ಅಥವಾ ವ್ಯಕ್ತಿಗೆ ಅಂಥದ್ದೇನೂ ನಿರ್ಬಂಧ ಇಲ್ಲ. ಅವರೇನಿದ್ದರೂ ತಮಗೆ ಇಂಥ ಸ್ಥಳದಲ್ಲಿ ಇಂತಿಷ್ಟು ಜಾಗ ಬೇಕೆಂದೂ ಅದರ ಪರಿಸರ ಪಾವಿತ್ರ್ಯವನ್ನು ಕಾಪಾಡಿಕೊಳ್ಳುತ್ತೇವೆಂದೂ ಮುಚ್ಚಳಿಕೆ ಬರೆದುಕೊಟ್ಟರೆ ಸಾಕು. ಆಗಲೂ ಸ್ಥಳಕ್ಕೆ ಭೇಟಿ ಕೊಡುವ ಅಗತ್ಯವೇನಿಲ್ಲ. ಅಂತರ್ಜಾಲದಲ್ಲಿ ಲಭ್ಯವಿರುವ ನಕ್ಷೆ ಮತ್ತು ತಾಂತ್ರಿಕ ಸಾಧನಗಳಿಗೆ ಲಭ್ಯವಿರುವ ಮೇಲ್ನೋಟವನ್ನು ಒದಗಿಸಿದರೆ ಸಾಕು. ಅಂಥ ತಾಣಗಳಲ್ಲಿ ವಾಸವಿರುವ ಮುಗ್ಧರಿಗೆ, ಆದಿವಾಸಿಗಳಿಗೆ ತಮ್ಮ ನೆಲೆಗಟ್ಟು ಇದ್ದಕ್ಕಿದ್ದಂತೆ ಪರಭಾರೆಯಾಗುವುದು ಗೊತ್ತೂ ಆಗುವುದಿಲ್ಲ. ಗೊತ್ತಾದರೂ ಆಕ್ಷೇಪಣೆಗೆ ಅವಕಾಶವಿರುವುದಿಲ್ಲ. ಏಕೆಂದರೆ ರಾಜ್ಯ ಸರಕಾರಗಳೂ ಇಂಥ ಯೋಜನೆಗಳನ್ನು ಮುಂದೊಡ್ಡುವ 'ಖಾಸಗಿಯವರ ಮೇಲೆ ವಿಶ್ವಾಸ' ಇಡಬೇಕೆಂದು ಬೇರೆ ತಾಕೀತು ಮಾಡಲಾಗಿದೆ. ಮೇಲಾಗಿ ರಾಜ್ಯಗಳಲ್ಲಿ ಈಗಿರುವ 'ಮಾಲಿನ್ಯ ನಿಯಂತ್ರಣ ಮಂಡಲಿ'ಗಳನ್ನು ತನ್ನೊಳಗೆ ಲೀನ ಮಾಡಿಕೊಳ್ಳುವ 'ರಾಷ್ಟ್ರೀಯ ಪರಿಸರ ನಿರ್ವಹಣಾ ಪ್ರಾಧಿಕಾರ' ಅಸ್ತಿತ್ವಕ್ಕೆ ಬರಲಿದೆ.

ಇದಕ್ಕಿಂತ ಆತಂಕಕಾರಿ ಸಂಗತಿ ಏನೆಂದರೆ, 'ಸಾರ್ವಜನಿಕ ಅಹವಾಲು' ವ್ಯವಸ್ಥೆಯನ್ನೇ ಕಿತ್ತು ಹಾಕುವಂತೆ *ಉಮಸ* ಶಿಫಾರಸು ಮಾಡಿದೆ. ಇದುವರೆಗೆ ಯಾವುದೇ ಭಾರೀ ಯೋಜನೆಗೂ ಮುನ್ನ ಅದರ ಪರಿಸರ ಸಾಧಕ ಬಾಧಕಗಳ ಬಗ್ಗೆ 'ಸಾರ್ವಜನಿಕ ಅಹವಾಲು' ನಡೆಸಬೇಕೆಂಬ ನಿಯಮ ಇತ್ತು. ಜನಸಾಮಾನ್ಯರು ಅಂಥ ಯೋಜನೆಗಳ ಬಗ್ಗೆ ತಮಗಿರುವ ಆಕ್ಷೇಪಣೆಗಳನ್ನು ಅಲ್ಲಿ ಚರ್ಚಿಸಬಹುದಿತ್ತು. ಅಂಥ ಯೋಜನೆಗಳಿಂದಾಗಿ ಮಾನವ ಹಕ್ಕುಗಳ ಉಲ್ಲಂಘನೆಯಾಗುವ ಸಾಧ್ಯತೆಗಳನ್ನೂ ಆತಂಕಗಳನ್ನು ತೋಡಿಕೊಳ್ಳಲು ಅವಕಾಶವಿತ್ತು. ಪೃಥ್ವಿಯ ಒಟ್ಟಾರೆ ಹಿತರಕ್ಷಣೆಯ ದೃಷ್ಟಿಯಿಂದ ಅಂಥ ಅಹವಾಲು ವ್ಯವಸ್ಥೆ ಇರಲೇಬೇಕೆಂದು ಅಂತರರಾಷ್ಟ್ರೀಯ ಘೋಷಣೆಗಳಲ್ಲಿ ಕೂಡ ಉಲ್ಲೇಖಿಸಲಾಗಿದೆ. ಉಮಸ ಅವನ್ನೆಲ್ಲ ಕಿತ್ತೊಗೆಯಬೇಕೆಂದು ಹೇಳಿದೆ.

ಶಕ್ತಿ ಉತ್ಪಾದನೆ ಮತ್ತು ಕಲ್ಲಿದ್ದಲು ಗಣಿಗಾರಿಕೆಯಂಥ ಬಿಸಿನೆಸ್‌ಗೆ ಕಾಲಿಡುವ ಕಂಪನಿಗಳು ಮತ್ತು ಕೈಗಾರಿಕೆಗಳ ಅನುಕೂಲತೆಗಾಗಿ ಇನ್ನು ಮೇಲೆ ಕಡತಗಳ ಶೀಘ್ರ ಚಲನೆಗೆ ಅನುಕೂಲವಾಗುವಂತೆ 'ಏಕಗವಾಕ್ಷಿ' ವ್ಯವಸ್ಥೆ ಬರಬೇಕೆಂದು ಸಮಿತಿ ಶಿಫಾರಸು ಮಾಡಿದೆ. ರಾಷ್ಟ್ರೀಯ ಹಿತಾಸಕ್ತಿ ಇರುವ ಮತ್ತು ಇತರ ಆಯಕಟ್ಟಿನ ಯೋಜನೆಗಳಿಗಾಗಿ ಏಕಗವಾಕ್ಷಿಯೂ ಇರುವುದಿಲ್ಲ. ಅದರ ಬದಲು ಅದಕ್ಕೆಂದೇ 'ವಿಶೇಷ ವ್ಯವಸ್ಥೆ' ಇರಬೇಕೆಂದು ಸೂಚಿಸಲಾಗಿದೆ. ಹಿಂದೆಂದೋ ತೀರ್ಮಾನ ಪಡೆದ ಪ್ರಕರಣಗಳನ್ನೂ ಈಗ ಹೊಸದಾಗಿ ರೂಪಿಸಲಾಗುವ 'ಪರಿಸರ ಕಾನೂನುಗಳ ನಿರ್ವಹಣಾ ಕಾಯಿದೆ' (ಎಲ್ಮಾ) ಅಡಿಯಲ್ಲಿ ಮರುಪರಿಶೀಲನೆಗೆ ಕೈಗೆತ್ತಿಕೊಳ್ಳಬಹುದು.

ಇಷ್ಟೆಲ್ಲ ಬದಲಾವಣೆಯನ್ನು ಸೂಚಿಸಿರುವ ಈ ಉನ್ನತ ಮಟ್ಟದ ಸಮಿತಿಯ ಸದಸ್ಯರು ಯಾರ್‍ಯಾರು ಗೊತ್ತೆ? ಅದರಲ್ಲಿ ಯಾರೊಬ್ಬರೂ ಪರಿಸರ ತಜ್ಞರಿಲ್ಲ. ವಿಶ್ವನಾಥನ್ ಆನಂದ್ ಎಂಬವರೊಬ್ಬರಿದ್ದಾರೆ. ಅವರಂತೂ ಹಿಂದೆ 'ರಾಷ್ಟ್ರೀಯ ಪರಿಸರ ಮೇಲ್ಮನವಿ ಪ್ರಾಧಿಕಾರ'ದ ಉಪಾಧ್ಯಕ್ಷರಾಗಿದ್ದಾಗ ವಿಶಿಷ್ಟ ದಾಖಲೆ ನಿರ್ಮಿಸಿದವರು: ಪರಿಸರಕ್ಕೆ ಅನ್ಯಾಯವಾಗುತ್ತಿದೆಯೆಂಬ ದೂರಿನೊಂದಿಗೆ ಬಂದ ಪ್ರತಿ ಒಂದೊಂದು ಮೇಲ್ಮನವಿಯನ್ನೂ ಅವರು ಸಾರಾ ಸಗಟಾಗಿ ತಿರಸ್ಕರಿಸಿದವರು. ಸಮಿತಿಯ ಇನ್ನೊಬ್ಬ ಸದಸ್ಯ ಎ.ಕೆ. ಶ್ರೀವಾಸ್ತವ ಹಿಂದೆ ಹೈಕೋರ್ಟ್ ನ್ಯಾಯಾಧೀಶರಾಗಿದ್ದವರು. ನಾಲ್ಕನೆಯ ಸದಸ್ಯ ಕೆ.ಎನ್. ಭಟ್ ಕೇಂದ್ರ ಸರಕಾರದ ಹೆಚ್ಚುವರಿ ಸಾಲಿಸಿಟರ್ ಜನರಲ್ ಆಗಿದ್ದವರು. ಈ ಇಬ್ಬರೂ ಪರಿಸರ ತಜ್ಞರಂತೂ ಅಲ್ಲ. ಅದಕ್ಕೇ ಇರಬೇಕು, ಹವಾಮಾನ ಬದಲಾವಣೆ ಕುರಿತು ಅಷ್ಟೊಂದು ಆತಂಕ ಮತ್ತು ತಜ್ಞರ ವಲಯದಲ್ಲಿ ಚರ್ಚೆ ನಡೆಯುತ್ತಿದ್ದರೂ (ಪರಿಸರ ಮತ್ತು ಅರಣ್ಯ ಇಲಾಖೆಯ ಹೆಸರಿನೊಂದಿಗೇ ಇದೀಗ 'ಹವಾಮಾನ ಬದಲಾವಣೆ' ಎಂಬ ಪದಗಳನ್ನು ಸೇರಿಸಲಾಗಿದೆಯಾದರೂ) ಇವರ ಶಿಫಾರಸುಗಳಲ್ಲಿ ಅದರ ಬಗ್ಗೆ ಚಕಾರ ಇಲ್ಲ. ಬರಲಿರುವ ಬಿಸಿ ಪ್ರಳಯದಿಂದಾಗಿ ಪರಿಸರದಲ್ಲಿ ಅದೆಷ್ಟು ಬದಲಾವಣೆಗಳಾಗಲಿವೆ; ತಳಮಟ್ಟದ ಎಷ್ಟೊಂದು ಸಮುದಾಯಗಳು ಏನೆಲ್ಲ ಸಂಕಷ್ಟಗಳಿಗೆ ತುತ್ತಾಗಲಿದ್ದಾರೆ; ಅವರಿಗೆ ಎದುರಾಗುವ ಸಂಕಷ್ಟಗಳಿಗೆ ಎಂತೆಂಥ ಪರಿಹಾರ ನೀಡಲು ಸಜ್ಜಾಗಿರಬೇಕು ಎಂಬೆಲ್ಲ ವಿವರಗಳನ್ನು ೧೨ನೇ ಪಂಚವಾರ್ಷಿಕ ಯೋಜನೆಯಲ್ಲಿ ಚರ್ಚಿಸಲಾಗಿದೆ. ಅದ್ಯಾವುದರ ಗಂಧಗಾಳಿಯೂ *ಉಮಸ* ತಜ್ಞರ ಬಳಿ ಸುಳಿದಂತಿಲ್ಲ.

ಇವರನ್ನೆಲ್ಲ ಸೇರಿಸಿಕೊಂಡು ಈಗಿರುವ ಪರಿಸರ ಸಂರಕ್ಷಣಾ ಕಾನೂನುಗಳಲ್ಲಿ ಇಷ್ಟೆಲ್ಲ ಪರಿವರ್ತನೆ ಮಾಡಲು ಕಾರಣಗಳೇನು ಗೊತ್ತೆ? ಸಮಿತಿಯ ವರದಿಯಲ್ಲೇ ಹೇಳಿದ ಪ್ರಕಾರ, ಈಗಿನ ಪರಿಸ್ಥಿತಿಯಲ್ಲಿ ನಮ್ಮ ದೇಶದಲ್ಲಿ 'ಬಿಸಿನೆಸ್ ಮಾಡಲು' ನಾನಾ ಬಗೆಯ ಅಡೆತಡೆ ಇವೆಯಂತೆ. ಅವನ್ನೆಲ್ಲ ನಿವಾರಿಸಿ ಅಭಿವೃದ್ಧಿ ಯೋಜನೆಗಳು 'ತ್ವರಿತವಾಗಿ' ಜಾರಿಗೆ ಬರುವಂತೆ ಮಾಡುವುದೇ ಇದರ ಉದ್ದೇಶವಂತೆ. *ಉಮಸ* ನೀಡಿದ ೧೧೩ ಪುಟಗಳ ವರದಿಯಲ್ಲಿ 'ತ್ವರಿತ' ಎಂಬ ಪದ ೧೩ ಬಾರಿ ಬಂದಿದೆಯೆಂದು ಈ ವರದಿಯನ್ನು ಕೂಲಂಕಷ ಓದಿದ ಅರಣ್ಯ ಮತ್ತು ಪರಿಸರ ರಕ್ಷಣೆಗಾಗಿ ಕಾನೂನಿನ ಕಾರ್ಯಾಚರಣೆ ನಡೆಸುತ್ತಿರುವ ಋತ್ವಿಕ್ ದತ್ತಾ ಮತ್ತು ಸಂಗಡಿಗರು ಗುರುತಿಸಿದ್ದಾರೆ. ಈ 'ತ್ವರಿತ' ಅದೆಷ್ಟು ಚುರುಕಿನದೆಂದರೆ, ಯೋಜನೆಯ ಪ್ರಸ್ತಾವನೆ ಬಂದ ಹತ್ತೇ ದಿನಗಳಲ್ಲಿ ರಾಷ್ಟ್ರೀಯ ಪರಿಸರ ನಿರ್ವಹಣಾ ಪ್ರಾಧಿಕಾರ ಅದನ್ನು ಪರಿಶೀಲನೆಗೆ ಕೈಗೆತ್ತಿಕೊಂಡು ಎರಡು ತಿಂಗಳೊಳಗೆ ಒಪ್ಪಿಗೆಯನ್ನೊ ನಿರಾಕರಣೆಯನ್ನೊ ಸೂಚಿಸಬೇಕಂತೆ. ಹಿಂದೆಲ್ಲ ಹೀಗೆ ತ್ವರಿತಗತಿಯಲ್ಲಿ ಕಡತ ವಿಲೇವಾರಿ ಮಾಡಿಸಿಕೊಂಡಿದ್ದ ಯೋಜನೆಗಳೇ ದೀರ್ಘಕಾಲ ನನೆಗುದಿಗೆ ಬಿದ್ದಿವೆ ಎಂಬುದನ್ನು ಅದೆಷ್ಟೊ ಉದಾಹರಣೆಗಳೊಂದಿಗೆ ದತ್ತಾ ನಮಗೆ ನೆನಪಿಸುತ್ತಾರೆ.

ಇಂಥ ಸಮೂಲಾಗ್ರ ತಿದ್ದುಪಡಿಗಳಿಗೆ ಬರಬಹುದಾದ ವಿರೋಧಗಳಿಗೆ ಉತ್ತರವೆಂಬಂತೆ ಕೆಲವು ಉತ್ತಮ ಸಲಹೆಗಳನ್ನೂ ಸಮಿತಿ ನೀಡಿದೆ ನಿಜ. ಉದಾಹರಣೆಗೆ: ಪ್ರತಿಯೊಂದು ಸರಕಾರಿ ಇಲಾಖೆಯಲ್ಲೂ (ಈಗ 'ಹಣಕಾಸು ವಿಭಾಗ' ಎಂಬುದು ಇರುವ ಹಾಗೆ) 'ಪರಿಸರ ವಿಭಾಗ' ಎಂಬುದೊಂದು ಇರಬೇಕು. ಸರಕಾರಿ ಯೋಜನೆಗಳಿಂದಾಗಿ ಪರಿಸರದ ಮೇಲಾಗುವ ಪರಿಣಾಮಗಳ ಕಡೆ ಅದು ನಿಗಾ ಇಡಬೇಕು. ಅರಣ್ಯ ಪ್ರದೇಶಗಳನ್ನು ಬಳಸಿಕೊಂಡವರು ಪರಿಹಾರ ಸ್ವರೂಪವಾಗಿ ಗತಿಗೆಟ್ಟ ಭೂಮಿಯಲ್ಲಿ ಮೂರು ಪಟ್ಟು ಹೆಚ್ಚು ವಿಸ್ತೀರ್ಣದ ಬದಲೀ ಅರಣ್ಯಗಳನ್ನು ಬೆಳೆಸಬೇಕು. ಈಗಿನ ಐಎಎಸ್ ಮಾದರಿಯಲ್ಲಿ 'ಭಾರತೀಯ ಪರಿಸರ ಸೇವೆ'ಯನ್ನು ಪ್ರಾರಂಭಿಸಬೇಕು; ರಾಷ್ಟ್ರಮಟ್ಟದಲ್ಲಿ ಪರಿಸರ ಸಂಶೋಧನಾ ಸಂಸ್ಥೆಯನ್ನು ಪ್ರಾರಂಭಿಸಿ ಸಮರ್ಥ ಪರಿಸರ ತಜ್ಞರನ್ನು ರೂಪಿಸಬೇಕು ಇತ್ಯಾದಿ... ಅವೆಲ್ಲ ಸರಿ. ಆದರೆ ಅಭಿವೃದ್ಧಿಯ ಹೆದ್ದಾರಿಗಳ ತ್ವರಿತ ಸೃಷ್ಟಿಗಾಗಿ ಜೀವಿಗಳ ಬದುಕುವ ಹಕ್ಕುಗಳನ್ನು ಹೊಸಕಿ ಹಾಕಿ, ಅದರ ವಿರುದ್ಧ ದನಿಯೆತ್ತಲೂ ಸಾಧ್ಯವಾಗದಂತೆ ಪ್ರಜೆಗಳ ಸಾಂವಿಧಾನಿಕ ಹಕ್ಕುಗಳನ್ನೇ ದಮನ ಮಾಡುವುದು ಎಷ್ಟು ಸರಿ?

ಈ ವಿಪರ್ಯಾಸ ನೋಡಿ: ಯಾವುದೇ ರಾಷ್ಟ್ರದ ಬದುಕಿನ ಗುಣಮಟ್ಟ ಹಾಗೂ ಸಾಮಾಜಿಕ ನ್ಯಾಯವನ್ನು ಸೂಚಿಸಬಲ್ಲ ಎಲ್ಲ ಬಗೆಯ ಅಂತರರಾಷ್ಟ್ರೀಯ ಮಾನದಂಡಗಳಲ್ಲಿ ಭಾರತದ ಸ್ಥಾನಮಾನ ತೀರಾ ಕೆಳಗಿದೆ. ನಾಚಿಕೆಯಾಗುವಷ್ಟು ಕೆಳಮಟ್ಟದಲ್ಲಿದೆ. ಮಾನವ ಅಭಿವೃದ್ಧಿಯ ಸೂಚ್ಯಂಕ ಅನ್ನಿ, ಬಡತನ ಸೂಚ್ಯಂಕ ಅನ್ನಿ, ಹಸಿವೆಯ ಸೂಚ್ಯಂಕ ಅನ್ನಿ ಭಾರತ ತೀರಾ ಕೆಳಗಿನ ಹಂತದಲ್ಲಿದೆ. ಆದರೆ ಈಚೆಗೆ (೨೧ಮೇ ೨೦೧೫) ಪ್ರಕಟವಾದ 'ಪರಿಸರ ಪ್ರಜಾಪ್ರಭುತ್ವ' ಸೂಚ್ಯಂಕದಲ್ಲಿ ಕೊಂಚ ಗೌರವಯುತ ಸ್ಥಾನ ಭಾರತಕ್ಕೆ ಸಿಕ್ಕಿದೆ. ಸಮೀಕ್ಷೆ ನಡೆಸಿದ ೭೦ ರಾಷ್ಟ್ರಗಳ ಪೈಕಿ ನಮ್ಮ ದೇಶ ೨೪ನೇ ಸ್ಥಾನದಲ್ಲಿದೆ. ಏಕೆಂದರೆ ನಮ್ಮ ಪರಿಸರ ಸಂರಕ್ಷಣಾ ಕಾನೂನುಗಳು ಸಾಕಷ್ಟು ಬಲಯುತವಾಗಿವೆ; ಪರಿಸರ ಸಂಬಂಧಿ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಸಾಕಷ್ಟು ಪಾರದರ್ಶಕತೆ ಇದೆ; ಸರಕಾರಿ ನಿರ್ಧಾರಗಳಲ್ಲಿ ನಾಗರಿಕರೂ ಪಾಲ್ಗೊಳ್ಳಲು ಸಾಕಷ್ಟು ಅವಕಾಶಗಳಿವೆ; ಪರಿಸರ ರಕ್ಷಣೆಗೆ ಸರಕಾರಿ ಬದ್ಧತೆ ಇದೆಯೆಂಬುದು ಕಾನೂನುಗಳಲ್ಲಿ ಕಾಣುತ್ತಿದೆ. ಈಗ ಅದನ್ನೂ ಸಡಿಲಗೊಳಿಸಿ, ಭಾರತದ ಇದ್ದಬದ್ದ ಗೌರವ ಇನ್ನಷ್ಟು ತಳಕ್ಕಿಳಿಯುವಂತೆ ಮಾಡಬೇಕೆಂಬ ಹುಮ್ಮಸ್ಸು ಈ ಟಿಎಸ್‌ಆರ್ ಸುಬ್ರಹ್ಮಣ್ಯನ್ ಅವರ '*ಉಮಸ*'ದಲ್ಲಿ ಕಾಣುತ್ತಿದೆ.

ಅಭಿವೃದ್ಧಿಯ ಬುಲೆಟ್ ಟ್ರೇನ್‌ಗೆ ಆದಷ್ಟು ತ್ವರಿತವಾಗಿ ಹಸುರು ಬಾವುಟ ತೋರಿಸಲು ಕೇಂದ್ರ ಸರಕಾರ ಸಜ್ಜಾಗಿ ನಿಂತಿದೆ. ಉಮಸದ ಶಿಫಾರಸುಗಳನ್ನು ಚಿಕ್ಕಪುಟ್ಟ ತಿದ್ದುಪಡಿಗಳೊಂದಿಗೆ ಕೇಂದ್ರ ಸರಕಾರ ಇಡಿಯಾಗಿ ಅಂಗೀಕರಿಸಿದರೆ ಅಚ್ಚರಿಯೇನಿಲ್ಲ. ಹಾಗೇನಾದರೂ ಆದರೆ ಯಾವನೋ ಒಬ್ಬ ಸರಕಾರಿ ಕಾರ್ಯದರ್ಶಿ ತನ್ನ ಮೊನಚು ಲೇಖನಿ ಎತ್ತಿ ಅದಕ್ಕೆ ಸಹಿ ಹಾಕುತ್ತಾನೆ. ಅಲ್ಲಿಗೆ ಪುತಿನ ಹೇಳಿದ 'ಆಧುನಿಕ ವಾಮಾಚಾರ'ದ ವಿರಾಟ್ ಸ್ವರೂಪ ಕಣ್ಣೆದುರು ಕುಣಿಯುತ್ತದೆ.



**(ನಾಗೇಶ ಹೆಗ್ಡೆಯವರು ಖ್ಯಾತ ಪರಿಸರತಜ್ಞರು ಮತ್ತು ಕನ್ನಡದ ಹಿರಿಯ ವಿಜ್ಞಾನ ಬರಹಗಾರರು)**

# ಕಸ್ತೂರಿ ರಂಗನ್ ವರದಿಗೂ ತಿಲಾಂಜಲಿ: ಮುಂದೇನು?

–ಪ್ರೊ. ಬಿ.ಎಂ. ಕುಮಾರಸ್ವಾಮಿ



**ಪಶ್ಚಿಮ ಘಟ್ಟಗಳ ಒಂದು ರುದ್ರ ರಮಣೀಯ ನೋಟ**

ಕಡೆಗೂ ಕರ್ನಾಟಕ ಸರ್ಕಾರ ಕಸ್ತೂರಿ ರಂಗನ್ ವರದಿಯನ್ನು ಅನುಷ್ಠಾನಗೊಳಿಸಲು ತಾನು ಸಿದ್ಧವಿಲ್ಲ ಎಂಬ ಪತ್ರವನ್ನು ಕೇಂದ್ರ ಪರಿಸರ ಅರಣ್ಯ ಹಾಗೂ ಹವಾಮಾನ ಬದಲಾವಣೆ ಸಚಿವಾಲಯಕ್ಕೆಪತ್ರ ಬರೆದು ತಿಳಿಸಿದೆ. ೨೫.೦೫.೨೦೧೫ ರಂದು ಬರೆದ ಪತ್ರದಲ್ಲಿ ಪರಿಸರ ಸೂಕ್ಷ್ಮ ಗ್ರಾಮಗಳ( ಆಯ್ಕೆ ವಸ್ತುನಿಷ್ಠವಾಗಿಲ್ಲ ಹಾಗೂ ಬೇಕಾಬಿಟ್ಟಿಯಾಗಿದೆ ಎಂಬ ಆಪಾದನೆಯನ್ನು ಮಾಡಲಾಗಿದೆ. ಅಲ್ಲಿಗೆ ಕಸ್ತೂರಿ ರಂಗನ್ ವರದಿಗೆ ಅಂತಿಮ ತೆರೆ ಬಿದ್ದಂತೆಯೇ ಆಗಿದೆ. ಕೇರಳ ಈಗಾಗಲೇ ಅದನ್ನು ತಿರಸ್ಕರಿಸಿದೆ.

**ಏನಿದು ಕಸ್ತೂರಿ ರಂಗನ್ ವರದಿ ?**

ಪಶ್ಚಿಮ ಘಟ್ಟಗಳ ಪರಿಸರ ಸಂರಕ್ಷಣೆಗೆ ಸಲಹೆಗಳನ್ನು ನೀಡಲು ಕೇಂದ್ರದ ಯು.ಪಿ.ಎ. ಸರ್ಕಾರ ನೇಮಿಸಿದ ಸಮಿತಿಯೇ ಕಸ್ತೂರಿ ರಂಗನ್ ಸಮಿತಿ.

ಉತ್ತರ ಭಾರತಕ್ಕೆ ಹಿಮಾಲಯ ಪರ್ವತಗಳು ಹೇಗೋ, ದಕ್ಷಿಣ ಭಾರತಕ್ಕೆ ಪಶ್ಚಿಮ ಘಟ್ಟಗಳು ಹಾಗೇ. ಆದ್ದರಿಂದಲೇ ಪಶ್ಚಿಮ ಘಟ್ಟಗಳನ್ನು 'ಹಿಮವಿಲ್ಲದ ಹಿಮಾಲಯ' ಎನ್ನಲಾಗುತ್ತದೆ. ದಕ್ಷಿಣ ಭಾರತದ ಪಶ್ಚಿಮ ಕರಾವಳಿಗೆ ಸಮಾನಾಂತರವಾಗಿ ಗುಜರಾತ್‌ನಿಂದ ಕನ್ಯಾಕುಮಾರಿವರೆಗೆ ಅಖಂಡವಾಗಿ ಹಬ್ಬಿರುವ ಬೆಟ್ಟ ಸಾಲುಗಳೇ ಪಶ್ಚಿಮ ಘಟ್ಟಗಳು. ಸಹ್ಯಾದ್ರಿ ಪರ್ವತಗಳು ಎಂದೂ ಕರೆಯುವುದುಂಟು. ೧೬೦೦ ಕಿ.ಮೀ ಉದ್ದ ಹಾಗೂ ೧೦೦ ಕಿ.ಮೀ. ಅಗಲ ಇರುವ ಪಶ್ಚಿಮ ಘಟ್ಟಗಳ ವ್ಯಾಪ್ತಿ ೧,೬೦,೦೦೦ ಚ.ಕಿ.ಮೀ. ಗುಜರಾತ್, ಮಹಾರಾಷ್ಟ್ರ . . . . . . . . . . . . . . . . . . . . . . . . . . . . . – ಈ ಆರೂ ರಾಜ್ಯಗಳಲ್ಲಿ ಪಶ್ಚಿಮ ಘಟ್ಟಗಳು ಹರಡಿವೆ. ಶೇ. ೬೦ ಭಾಗ ಕರ್ನಾಟಕದಲ್ಲೇ ಇದೆ.

ಪಶ್ಚಿಮ ಘಟ್ಟಗಳು ತಮ್ಮ ದಟ್ಟ ಅರಣ್ಯ ಹಾಗೂ ಸಮೃದ್ಧ ಜೀವ ವೈವಿಧ್ಯತೆಗೆ ಜಗತ್ತಿನಲ್ಲೇ ಹೆಸರುವಾಸಿಯಾಗಿವೆ. ಜೀವ ವೈವಿಧ್ಯತೆ ಸಮೃದ್ಧಿಗೆ ಹೆಸರಾದ ಜಗತ್ತಿನ ೩೫ ತಾಣಗಳಲ್ಲಿ ಪಶ್ಚಿಮ ಘಟ್ಟ ಮೊದಲ ೮ ರಲ್ಲಿ ಬರುತ್ತದೆ.

ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಬೀಸುವ ಮಳೆ ಮಾರುತಗಳನ್ನು ಪಶ್ಚಿಮ ಘಟ್ಟಗಳು ತಡೆದು ಹೇರಳವಾಗಿ ಮಳೆ ಸುರಿಸುತ್ತವೆ. ಇಲ್ಲಿನ ಸರಾಸರಿ ಮಳೆ ಪ್ರಮಾಣ ೫೦೦೦ ಮಿ.ಮೀ. ಕೆಲವು ಪ್ರದೇಶಗಳಲ್ಲಿ ಗರಿಷ್ಠ ೮೦೦೦ ದಿಂದ ೧೦,೦೦೦ ಮಿಲಿ ಮೀಟರ್ ಮಳೆ ಬೀಳುವುದೂ ಉಂಟು.

ಇಲ್ಲಿನ ಅರಣ್ಯಗಳು ಮಳೆ ನೀರನ್ನು ಭೂಮಿಯಲ್ಲಿ ಇಂಗಿಸಿ, ವರ್ಷವಿಡೀ ಹರಿಯುವ ಸಹಸ್ರಾರು ಜಲಮೂಲಗಳಿಗೆ ಕಾರಣವಾಗಿವೆ. ದಕ್ಷಿಣ ಭಾರತದ ಬಹುತೇಕ ಎಲ್ಲಾ ನದಿಗಳೂ ಪಶ್ಚಿಮ ಘಟ್ಟಗಳಲ್ಲಿಯೇ ಹುಟ್ಟುತ್ತವೆ. ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ ಪೂರ್ವಕ್ಕೆ ಹರಿದು ಬಂಗಾಳ ಕೊಲ್ಲಿ ಸೇರುವ ಕೃಷ್ಣಾ ನದಿ ಹಾಗೂ ಅದರ ಉಪನದಿಗಳು, ತುಂಗಭದ್ರಾ ಹಾಗೂ ಅದರ ಉಪನದಿಗಳು ಮತ್ತು ಕಾವೇರಿ ಹಾಗೂ ಅದರ ಉಪನದಿಗಳು ಮಹಾರಾಷ್ಟ್ರ, ಕರ್ನಾಟಕ, ಆಂಧ್ರ ಮತ್ತು ತಮಿಳುನಾಡು ರಾಜ್ಯಗಳ ಜೀವನಾಡಿಗಳಾಗಿವೆ. ಈ ರಾಜ್ಯಗಳ ಕೃಷಿ, ಕೈಗಾರಿಕೆ, ಜನಜೀವನ, ಸಂಸ್ಕೃತಿ ಎಲ್ಲವೂ ಈ ನದಿ ಸಮೂಹಗಳ ಮೇಲೆಯೇ ಅವಲಂಬಿತವಾಗಿವೆ. ಹಾಗೆಯೇ ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ ಪಶ್ಚಿಮಕ್ಕೆ ಹರಿದು ಅರಬ್ಬಿ ಸಮುದ್ರ ಸೇರುವ ಶರಾವತಿ, ಕಾಳಿ, ಅಘನಾಶಿನಿ, ಬೇಡ್ತಿ, ನೇತ್ರಾವತಿ ಮುಂತಾದವು ಜಲವಿದ್ಯುತ್ತಿನ ಮೂಲಗಳಾಗಿವೆ. ಪಶ್ಚಿಮ ಘಟ್ಟಗಳನ್ನು ದಕ್ಷಿಣ ಭಾರತದ ನೀರಿನ ತೊಟ್ಟಿ ಎಂದು ಕರೆಯುವುದರಲ್ಲಿ ಏನೂ ಅತಿಶಯೋಕ್ತಿ ಇಲ್ಲ. ಪಶ್ಚಿಮ ಘಟ್ಟಗಳು ಅಮೂಲ್ಯ ಔಷಧ ಸಸ್ಯಗಳ ಅಗರವೂ ಹೌದು.





**ಮಾಧವ ಗಾಡ್ಗೀಳ್ ಕಸ್ತೂರಿ ರಂಗನ್ ಜಯಂತಿ ನಟರಾಜನ್**

**ಪಶ್ಚಿಮ ಘಟ್ಟಗಳ ಅವನತಿ**

ಸ್ವಾತಂತ್ರ್ಯ ಬಂದ ಈ ೬೮ ಚಿಲ್ಲರೆ ವರ್ಷಗಳಲ್ಲಿ ಪಶ್ಚಿಮ ಘಟ್ಟಗಳ ಪರಿಸರ ಸಾಕಷ್ಟು ಅವನತಿ ಹೊಂದಿದೆ. ಜನಸಂಖ್ಯೆಯ ಏರಿಕೆ, ಗಣಿಗಾರಿಕೆ, ಜಲ ವಿದ್ಯುತ್ ಯೋಜನೆಗಳು, ಕೃಷಿ ಹಾಗೂ ತೋಟಗಾರಿಕೆಯ ವಿಸ್ತರಣೆ, ಕೈಗಾರಿಕೆಗಳು, ಅರಣ್ಯ ಆಧಾರಿತ ಕೈಗಾರಿಕೆಗಳು, ನಗರೀಕರಣ, ಪ್ರವಾಸೋದ್ಯಮ – ಹೀಗೆ ಹಲವು ಹನ್ನೆರಡು ಕಾರಣಗಳು.. ಜಾಗತಿಕ ತಾಪಮಾನದ ಏರಿಕೆ ಹಾಗೂ ಹವಾಮಾನ ಬದಲಾವಣೆಯೂ ಸಹ ಶೇ.೩೦ ರಷ್ಟು ಪಶ್ಚಿಮ ಘಟ್ಟಗಳ ಮೇಲೆ ದುಷ್ಪರಿಣಾಮ ಬೀರುತ್ತವೆ ಎಂದು ಹೇಳಲಾಗುತ್ತಿದೆ.

ಅಳಿದುಳಿದ ಪಶ್ಚಿಮ ಘಟ್ಟಗಳನ್ನು ಸಂರಕ್ಷಿಸುವ ದೃಷ್ಟಿಯಿಂದ ಯು.ಪಿ.ಎ. ಸರ್ಕಾರದ ಪರಿಸರ ಖಾತೆ ಸಚಿವರಾಗಿದ್ದ ಜೈರಾಂ ರಮೇಶ್ ಅವರು ೦೪.೦೩.೨೦೧೦ ರಂದು ಪಶ್ಚಿಮ ಘಟ್ಟ ಪರಿಸರ ಪರಿಣಿತ ಸಮಿತಿಯನ್ನು ನೇಮಿಸಿದರು. ಅದರ ಅಧ್ಯಕ್ಷರು – ಡಾ. ಮಾಧವ ಗಾಡ್ಗೀಳ್. ಅವರು ಒಬ್ಬ ಜಾಗತಿಕ ಮಾನ್ಯತೆ ಪಡೆದ ಪರಿಸರ ವಿಜ್ಞಾನಿ. ತಮ್ಮ ಜೀವನದ ಬಹುಪಾಲನ್ನು ಪಶ್ಚಿಮ ಘಟ್ಟಗಳ ಪರಿಸರದ ಅಧ್ಯಯನ, ಸಂರಕ್ಷಣಾ ಕಾರ್ಯಗಳು ಹಾಗೂ ಸಂಶೋಧನೆಯಲ್ಲಿ ಕಳೆದವರು. ಆಗಸ್ಟ್ ೨೦೧೧ ರಲ್ಲಿ ಗಾಡ್ಗೀಳ್ ಸಮಿತಿ ತನ್ನ ವರದಿ ನೀಡಿತು.

**ಗಾಡ್ಗೀಳ್ ಸಮಿತಿ ವರದಿ**

ಗಾಡ್ಗೀಳ್ ಸಮಿತಿಯು ಇಡೀ ಪಶ್ಚಿಮ ಘಟ್ಟ ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸಬೇಕೆಂದು ಸಲಹೆ ಮಾಡಿತು. ಆದರೆ, ಪರಿಸರ ಸೂಕ್ಷ್ಮತೆ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸ ಹೊಂದುತ್ತದೆ. ಎಂಬುದನ್ನು ಗಮನಿಸಿ ಇಡೀ ಪ.ಘಟ್ಟ ಪ್ರದೇಶವನ್ನು ಅವುಗಳ ಪರಿಸರ ಸೂಕ್ಷತೆಯ ಆಧಾರದ ಮೇಲೆ ಮೂರು ವಲಯುಗಳನ್ನಾಗಿ ವಿಂಗಡಿಸಿ ಅಲ್ಲಿ ನಡೆಯಬಹುದಾದ ಅಭಿವೃದ್ಧಿ ಚಟುವಟಿಕೆಗಳಿಗೆ ಮಿತಿಗಳನ್ನು ಸೂಚಿಸಿತು. ಅತಿ ಕಡಿಮೆ ಸೂಕ್ಷ್ಮ ಪರಿಸರದ ವಲಯದಲ್ಲಿ ಅಭಿವೃದ್ಧಿ ಯೋಜನೆಗಳು ಹೇಗಿರಬೇಕು ಎಂಬುದನ್ನು ನಿರ್ಧರಿಸುವವರು ಗ್ರಾಮ ಪಂಚಾಯತಿಗಳು ಹಾಗೂ ಗ್ರಾಮಸಭೆಗಳು ಎಂದು ಗಾಡ್ಗೀಳ್ ಸಮಿತಿ ಸಲಹೆ ಮಾಡುತ್ತದೆ.

ಆದರೆ, ಅತ್ಯಂತ ವೈಜ್ಞಾನಿಕ ಹಾಗೂ ಜನಪರವಾಗಿದ್ದ ಈ ಗಾಡ್ಗೀಳ್ ಸಮಿತಿ ವರದಿಯನ್ನು ಅಂದಿನ ಕೇಂದ್ರ ಸರ್ಕಾರ ಯಾವ ಕಾರಣವನ್ನು ನೀಡದೆ ಮೊದಲು ಪ್ರಕಟಣೆಯನ್ನು ತಡೆಹಿಡಿಯಿತು. ನಂತರ ನ್ಯಾಯಾಲಯದ ಮಧ್ಯಪ್ರವೇಶದ ನಂತರ ಸಾರ್ವಜನಿಕಗೊಳಿಸಿತಾದರೂ, ಅಂತಿಮವಾಗಿ ತಿರಸ್ಕರಿಸಿತು. ಇವತ್ತಿನವರೆಗೆ ಕಾರಣ ತಿಳಿದು ಬಂದಿಲ್ಲ. (ಈ ವೇಳೆಗೆ ಜೈರಾಂ ರಮೇಶ್ ಜಾಗಕ್ಕೆ ಜಯಂತಿ ನಟರಾಜನ್ ಅರಣ್ಯ ಮತ್ತು ಪರಿಸರ ಸಚಿವ ಸ್ಥಾನಕ್ಕೆ ಬಂದಿದ್ದರು.) ಅಭಿವೃದ್ಧಿ ಲಾಬಿಗಳು ಗಾಡ್ಗೀಳ್ ಸಮಿತಿ ವರದಿಯ ಕುತ್ತಿಗೆ ಹಿಸುಕಿ ಕೊಂದವು ಎಂದು ಊಹಿಸಲಾಗುತ್ತಿದೆ. ಮಾಧವ ಗಾಡ್ಗೀಳ್‌ರಂಥ ಒಬ್ಬ ವಿಶ್ವಮಾನ್ಯ ಪರಿಸರ ವಿಜ್ಞಾನಿಯನ್ನು ಸರ್ಕಾರ ನಡೆಸಿಕೊಂಡ ರೀತಿಯಂತೂ ಭಾರತಕ್ಕೆ ಗೌರವ ತರುವಂತಿರಲಿಲ್ಲ ಎಂದು ಇಲ್ಲಿ ಹೇಳಲೇಬೇಕಿದೆ.

## ಕಸ್ತೂರಿ ರಂಗನ್ ವರದಿ ಮತ್ತು ಅದರ ಮುಖ್ಯಾಂಶಗಳು

ಮಾಧವ ಗಾಡ್ಗೀಳ್ ವರದಿಯನ್ನು ಪರಿಷ್ಕರಿಸಿ ವರದಿ ನೀಡುವುದಕ್ಕಾಗಿ ಕೇಂದ್ರ ಸರ್ಕಾರವು ಖ್ಯಾತ ಬಾಹ್ಯಾಕಾಶ ವಿಜ್ಞಾನಿ(ಪರಿಸರ ವಿಜ್ಞಾನಿಯಲ್ಲ) ಡಾ. ಕೆ. ಕಸ್ತೂರಿ ರಂಗನ್‌ರ ಅಧ್ಯಕ್ಷತೆಯಲ್ಲಿ ಪಶ್ಚಿಮ ಘಟ್ಟಗಳ ಉನ್ನತ ಸ್ತರದ ಕಾರ್ಯಪಡೆಯನ್ನು ರಚಿಸಿತು. ಕಸ್ತೂರಿ ರಂಗನ್ ಸಮಿತಿಯು ೧೭.೧೨.೨೦೧೨ ರಲ್ಲಿ ನೇಮಕವಾಯ್ತು ಹಾಗೂ ೧೫.೦೪.೨೦೧೩ ರಲ್ಲಿ ವರದಿ ನೀಡಿತು. ಈ ವರದಿಯು ಪಶ್ಚಿಮ ಘಟ್ಟವನ್ನು ಎರಡು ಭಾಗವಾಗಿ ವಿಂಗಡಿಸುತ್ತದೆ.

೧) ಜನವಸತಿ ಪ್ರದೇಶ (Cultural Land Scape)

೨) ನೈಸರ್ಗಿಕ ಪ್ರದೇಶ (Natural Land Scape)

ಜನದಟ್ಟಣೆ ಹೆಚ್ಚಾಗಿದ್ದು ನಗರಗಳು, ಕೃಷಿ ಪ್ರದೇಶಗಳು ಹಾಗೂ ಕೈಗಾರಿಕೆಗಳು ಹೆಚ್ಚಾಗಿರುವ ಮತ್ತು ಅರಣ್ಯಗಳು ಛಿದ್ರಗೊಂಡಿರುವ ಪ್ರದೇಶಗಳು – ಜನವಸತಿ ಪ್ರದೇಶಗಳು. ಪಶ್ಚಿಮ ಘಟ್ಟ ವ್ಯಾಪ್ತಿಯ ಶೇ.೬೩ ಭಾಗ ಜನವಸತಿ ಪ್ರದೇಶ. ಇಲ್ಲಿ ಸಂರಕ್ಷಿಸುವಂಥಾ ಪರಿಸರ ಏನೂ ಉಳಿದಿಲ್ಲ.

ಜನದಟ್ಟಣೆ ಕಡಿಮೆ ಇದ್ದು, ಅರಣ್ಯಗಳು ಹೆಚ್ಚು ವ್ಯಾಪಕವಾಗಿರುವ ಪ್ರದೇಶಗಳನ್ನು ನೈಸರ್ಗಿಕ ಪ್ರದೇಶಗಳು ಎಂದು ಕರೆಯಲಾಗಿದೆ. ಪಶ್ಚಿಮ ಘಟ್ಟಗಳ ವ್ಯಾಪ್ತಿಯಲ್ಲಿ ಶೇ ೩೭ ಭಾಗ ಮಾತ್ರ ಸಂರಕ್ಷಣೆಗೆ ಯೋಗ್ಯ ನೈಸರ್ಗಿಕ ಪ್ರದೇಶಗಳು.

ಗಾಡ್ಗೀಳ್ ಸಮಿತಿಗೆ ಹೋಲಿಸಿದರೆ ಕಸ್ತೂರಿ ರಂಗನ್ ವರದಿಯಲ್ಲಿ ಸಂರಕ್ಷಣಾ ಪ್ರದೇಶದ ವ್ಯಾಪ್ತಿ ಗಣನೀಯವಾಗಿ ಕಡಿತಗೊಂಡಿರುವುದನ್ನು ಗಮನಿಸಬಹುದು. ಶೇ ೩೭ ರಷ್ಟು ಸಂರಕ್ಷಣಾ ಯೋಗ್ಯ ಪ್ರದೇಶದಲ್ಲಿ ರಾಷ್ಟ್ರೀಯ ಉದ್ಯಾನಗಳು, ವನ್ಯಜೀವಿ ಧಾಮಗಳು ಮುಂತಾದ ಯೋಜನೆಗಳಲ್ಲಿ ಈಗಾಗಲೇ ಸಂರಕ್ಷಿತ ಪ್ರದೇಶಗಳೂ ಸೇರುತ್ತವೆ. ಇವುಗಳ ವ್ಯಾಪ್ತಿ ಶೇ. ೧೦ ಎಂದು ವರದಿ ಹೇಳುತ್ತದೆ. ಅಂದರೆ ಕಸ್ತೂರಿ ರಂಗನ್ ವರದಿಯು ಹೆಚ್ಚುವರಿಯಾಗಿ ಶೇ.೨೭ ರಷ್ಟು ಪ್ರದೇಶಕ್ಕೆ ಮಾತ್ರ ರಕ್ಷಣೆ ಒದಗಿಸುತ್ತದೆ.

ಕಸ್ತೂರಿ ರಂಗನ್ ವರದಿಯ ಪ್ರಕಾರ, ಸಂರಕ್ಷಣೆಯ ಘಟಕ ಹಳ್ಳಿ ಇವುಗಳನ್ನು ಪರಿಸರ ಸೂಕ್ಷ್ಮ ಗ್ರಾಮಗಳು (Ecologically Sensitive Area - ESA) ಎಂದು ಕರೆಯಲಾಗಿದೆ. ಪಶ್ಚಿಮ ಘಟ್ಟದ ೬ ರಾಜ್ಯಗಳಲ್ಲಿ ೪೧೫೬ ಗ್ರಾಮಗಳನ್ನು ESA ಗ್ರಾಮಗಳೆಂದು ಗುರುತಿಸಲಾಗಿದೆ. ಅವುಗಳಲ್ಲಿ ಮಹಾರಾಷ್ಟ್ರದ ೨೧೫೯ ಗ್ರಾಮಗಳು ಹಾಗೂ ಕರ್ನಾಟಕದ ೧೫೭೬ ಗ್ರಾಮಗಳು. ಕರ್ನಾಟಕದ ೧೫೭೬ ESA ಗ್ರಾಮಗಳಲ್ಲಿ ಅಂಗ್ರಪಂಕ್ತಿಯಲ್ಲಿರುವುದು ಉತ್ತರ ಕನ್ನಡ ಜಿಲ್ಲೆ – ೬೫೦, ಶಿವಮೊಗ್ಗ – ೪೬೫ ಹಾಗೂ ಚಿಕ್ಕಮಗಳೂರು ಜಿಲ್ಲೆ – ೧೫೬ ಗ್ರಾಮಗಳು.

### ಸಂರಕ್ಷಣಾ ಕ್ರಮ - ಸಲಹೆಗಳು:

ವರದಿಯು ಈ ಕೆಳಗಿನ ಸಂರಕ್ಷಣಾ ಸಲಹೆಗಳನ್ನು ಒಳಗೊಂಡಿದೆ–

. ೧) ESA ಗ್ರಾಮಗಳಲ್ಲಿ ಮರಳು, ಕಲ್ಲು ಕ್ವಾರಿ ಸೇರಿದಂತೆ ಎಲ್ಲಾ ಗಣಿಗಾರಿಕೆಗೆ ನಿಶೇಧ, ಮುಂದಿನ ೫ ವರ್ಷದೊಳಗೆ ಎಲ್ಲಾ ಗಣಿಗಳನ್ನು ಮುಚ್ಚಿಸಬೇಕು.

೨) ಅತಿ ಹೆಚ್ಚು ಪರಿಸರ ಮಾಲಿನ್ಯ ಉಂಟು ಮಾಡುವ ೪೫ ಕೆಂಪು ಪಟ್ಟಿ ಕೈಗಾರಿಕೆಗಳಿಗೆ ನಿಷೇಧ. ಕಿತ್ತಳೆ ಬಣ್ಣದ ಪಟ್ಟಿಯಲ್ಲಿ ಬರುವ ಕೃಷಿ ಸಂಸ್ಕರಣಾ ಉದ್ದಿಮೆಗಳಿಗೆ ಶರತ್ತುಬದ್ಧ ಅನುಮತಿ.

೩) ೫೦ ಹೆಕ್ಟೇರ್‌ಗೆ ಮಿಗಿಲಾದ ವಿಸ್ತೀರ್ಣದ ವಸತಿ ಪ್ರದೇಶಗಳ ನಿರ್ಮಾಣಕ್ಕೆ ನಿಷೇಧ.

೪) ಗಾಳಿ ಯಂತ್ರಗಳ ಸ್ಥಾಪನೆಗೆ ಷರತ್ತುಬದ್ಧ ಅನುಮತಿ.

### ಪ್ರೋತ್ಸಾಹ - ಧನ - ಸಲಹೆಗಳು:

ESA ಗ್ರಾಮಗಳಿಗೆ ಪ್ರೋತ್ಸಾಹ ನೀಡುವುದಕ್ಕಾಗಿ ಹಲವಾರು ಧನಾತ್ಮಕ ಸಲಹೆಗಳನ್ನು ವರದಿ ನೀಡಿದೆ. (ಪುಟ xvi)

೧) ಪರಿಸರ ಸಂರಕ್ಷಣಾ ಕಾರ್ಯಗಳಿಗೆ ಪ್ರತಿಯಾಗಿ ಪಶ್ಚಿಮ ಘಟ್ಟ ರಾಜ್ಯಗಳು ಒಂದು ಸಂಘಟನೆ ಮಾಡಿಕೊಂಡು, ಕೇಂದ್ರದಿಂದ ಹೆಚ್ಚುವರಿ ಸಹಾಯ ಧನಕ್ಕಾಗಿ ಒತ್ತಾಯ ಮಾಡಬೇಕು.

೨) ೧೪ ನೇ ಹಣಕಾಸು ಆಯೋಗವು, ಅರಣ್ಯ ಹಾಗೂ ಪರಿಸರ ಸಂರಕ್ಷಣೆಗೆ ನೀಡುವ ನೆರವಿನ ಪ್ರಮಾಣವನ್ನು ಹೆಚ್ಚಿಸಬೇಕು.

೩) ಪಶ್ಚಿಮ ಘಟ್ಟಗಳು ನೀಡುವ ಪರಿಸರ ಸೇವೆಗಳಿಗೆ ಪ್ರತಿಯಾಗಿ ಆ ಪ್ರದೇಶಗಳಿಗೆ ಹಣ ನೀಡುವ ಬಗ್ಗೆ ಚಿಂತಿಸಬೇಕು. ರಾಜ್ಯ ಸರ್ಕಾರಗಳು ಪಶ್ಚಿಮ ಘಟ್ಟ ಪ್ರದೇಶಗಳಲ್ಲಿರುವ ನಗರಸಭೆಗಳು ಹಾಗೂ ಗ್ರಾಮ ಪಂಚಾಯತಿಗಳೊಂದಿಗೆ ಈ ಬಗ್ಗೆ ಸಂವಾದ ಪ್ರಾರಂಭಿಸಬೇಕು.

೪) ಯೋಜನಾ ಆಯೋಗವು ಒಂದು 'ವಿಶೇಷ ಪಶ್ಚಿಮ ಘಟ್ಟ ಸುಸ್ಥಿರ [illegible] ESA ಗ್ರಾಮಗಳಲ್ಲಿ ಸುಸ್ಥಿರ ಹಾಗೂ ಪರಿಸರ ಸ್ನೇಹಿ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸಬೇಕು ಹಾಗೂ ಅಲ್ಲಿನ ಜನಗಳಿಗೆ ಪ್ರೋತ್ಸಾಹ ನಿಧಿಯನ್ನು ಕೊಡಬೇಕು.

೫) ೧೪ ನೇ ಹಣಕಾಸು ಆಯೋಗವು ಪಶ್ಚಿಮ ಘಟ್ಟ ಪ್ರದೇಶಗಳಿಗೆ ಪರಿಸರ ಸೇವೆಗಳಿಗಾಗಿ ವಿಶೇಷ ಅನುದಾನ ನೀಡುವ ಬಗ್ಗೆ ಹಾಗೂ ಈ ಹಣ ನೇರವಾಗಿ ESA ಗ್ರಾಮಗಳಿಗೇ ಸಿಗುವಂತೆ ಮಾರ್ಗೋಪಾಯಗಳನ್ನು ಕಂಡು ಹಿಡಿಯಬೇಕು.

೬) ಕೇಂದ್ರವು ಪಶ್ಚಿಮ ಘಟ್ಟ ಅಭಿವೃದ್ಧಿ ಕ್ರಮಕ್ಕೆ ಹೆಚ್ಚುವರಿಯಾಗಿ ೧೦೦೦ ಕೋಟಿ ರೂ. ಹಣವನ್ನು ಒದಗಿಸಬೇಕು.

೭) ಸರ್ಕಾರವು ಪಶ್ಚಿಮ ಘಟ್ಟ ಪ್ರದೇಶದಲ್ಲಿ ಸಾವಯವ ಕೃಷಿಯ ಉತ್ತೇಜನಕ್ಕೆ ಕ್ರಮ ಕೈಗೊಳ್ಳಬೇಕು ಹಾಗೂ ಅಂಥ ಸಾವಯವ ಕೃಷಿ ಉತ್ಪನ್ನಗಳಿಗೆ ವಿಶೇಷ ಬ್ರ್ಯಾಂಡ್ ಮೂಲಕ ಜಾಗತಿಕ ಮಾರುಕಟ್ಟೆಗೆ ಪ್ರವೇಶ ದೊರಕಿಸಬೇಕು.

### ಕಸ್ತೂರಿ ರಂಗನ್ ವರದಿಗೂ ಪ್ರತಿರೋಧ

ಮಾಧವ ಗಾಡ್ಗೀಳ್ ವರದಿಗೆ ಹೋಲಿಸಿದರೆ, ಕಸ್ತೂರಿ ರಂಗನ್ ವರದಿ ತುಂಬಾ ಜಾಳು ಜಾಳಾಗಿದೆ. ಅದು ಪಶ್ಚಿಮ ಘಟ್ಟದ ಶೇ. ೬೩ ಪ್ರದೇಶವನ್ನು ಸಂರಕ್ಷಣೆಯ ವ್ಯಾಪ್ತಿಯಿಂದ ಹೊರಗಿಟ್ಟು ಶೇ. ೩೭ ಪ್ರದೇಶದ ಮೇಲೆ ಮಾತ್ರ ಗಮನ ಹರಿಸಿದೆ. ಅಭಿವೃದ್ಧಿ ಲಾಬಿಗಳೊಂದಿಗೆ ರಾಜಿ ಮಾಡಿಕೊಂಡಿದೆ ಎನ್ನಬಹುದು. ಆದರೆ ಅದನ್ನು ಒಪ್ಪಿಕೊಂಡಿದ್ದರೆ ಶೇ. ೩೭ ಭಾಗಕ್ಕಾದರೂ ಒಂದಿಷ್ಟು ರಕ್ಷಣೆ ಸಿಗುತ್ತಿತ್ತು. ಆದರೆ ಕಸ್ತೂರಿ ರಂಗನ್ ವರದಿಗೂ ವ್ಯಾಪಕ ವಿರೋಧ ವ್ಯಕ್ತವಾದದ್ದು ಮಾತ್ರ ದುರಂತ. ಕರ್ನಾಟಕ ಸರ್ಕಾರವಂತೂ ಕಸ್ತೂರಿ ರಂಗನ್ ವರದಿ ಏನು ಹೇಳುತ್ತದೆ ಎಂಬುದನ್ನು ಸರಳ ಕನ್ನಡದಲ್ಲಿ ಕರಪತ್ರಗಳ ಮೂಲಕ ಹಾಗೂ ವಿದ್ಯುನ್ಮಾನ ಮಾಧ್ಯಮದ ಮೂಲಕ ESA ಗ್ರಾಮಗಳ ಜನಗಳಿಗೆ ಹಾಗು ಗ್ರಾಮ ಪಂಚಾಯತಿಗಳಿಗೆ ತಿಳಿಸಿ ಅರಿವು ಮೂಡಿಸುವ ಯಾವ ಪ್ರಯತ್ನವನ್ನು ಮಾಡಲಿಲ್ಲ. ಗ್ರಾಮಗಳು ಹಾಗಿರಲಿ ಜಿಲ್ಲಾ ಪಂಚಾಯತಿ ಸದಸ್ಯರಿಗೂ ವರದಿಯ ಬಗ್ಗೆ ಅರಿವು ಮೂಡಿಸಲಿಲ್ಲ.

ಎಲ್ಲಾ ರಾಜಕೀಯ ಪಕ್ಷಗಳೂ ಒಮ್ಮತದಿಂದ ಜನಗಳ ದಾರಿ ತಪ್ಪಿಸಿದವು. ವರದಿ ಜಾರಿಗೆ ಬಂದರೆ ಮಲೆನಾಡಿನಲ್ಲಿ ಜನರ ವ್ಯಾಪಕ ಗುಳೆ ಎಬ್ಬಿಸಲಾಗುತ್ತದೆ (ಅಂಥಾ ಯಾವ ಪ್ರಸ್ತಾಪವೂ ವರದಿಯಲ್ಲಿಲ್ಲ) ಜನ ಬದುಕುವುದೇ ಕಷ್ಟವಾಗುತ್ತದೆ. ಇತ್ಯಾದಿ ಅಪ್ಪಟ ಸುಳ್ಳುಗಳನ್ನು ಹೇಳುವುದರ ಮೂಲಕ ಗ್ರಾಮಸ್ಥರನ್ನು ವ್ಯವಸ್ಥಿತವಾಗಿ ದಾರಿ ತಪ್ಪಿಸುವುದರಲ್ಲಿ ಯಶಸ್ವಿಯಾದರು. ಬಹುಶ: ESA ಗ್ರಾಮಗಳಲ್ಲಿ ಕಲ್ಲು ಹಾಗೂ ಮರಳು ಗಣಿಗಾರಿಕೆ ನಡೆಸಬಾರದು ಎಂಬ ಸಲಹೆ ರಾಜಕಾರಣಿ ಉದ್ಯಮಿಗಳ ನಿದ್ದೆಗೆಡಿಸಿರಬೇಕು. ESA ಗ್ರಾಮಗಳಿಗೆ ವಿಶೇಷ ಅನುದಾನ ನೀಡುವ ಸಲಹೆಗಳನ್ನು ರಾಜಕಾರಣಿಗಳು ಮರೆ ಮಾಚಿದರು.

೨೪.೦೪.೨೦೧೫ರಂದು ಕಸ್ತೂರಿ ರಂಗನ್ ವರದಿ ಒಪ್ಪಲಾಗದು ಎಂದು ತಿಳಿಸುವ ಕರ್ನಾಟಕ ಸರ್ಕಾರದ ಪತ್ರ ರಾಜಕಾರಣಿಗಳ ಧೋರಣೆಗಳನ್ನೇ ಪ್ರತಿಬಿಂಬಿಸುತ್ತದೆ. ಪಶ್ಚಿಮ ಘಟ್ಟದ ಅವನತಿ, ಇಡೀ ದಕ್ಷಿಣ ಭಾರತದ ಅವನತಿ ಎಂಬುದನ್ನು ನಾವು ಅರಿಯುವುದು ಯಾವಾಗ ?

### ಮುಂದೇನು ?

ನಮಗೆ ಗಾಡ್ಗೀಳ್ ವರದಿಯೂ ಬೇಡ ಕಸ್ತೂರಿ ರಂಗನ್ ವರದಿಯೂ ಬೇಡ ಎಂಬ ಪಶ್ಚಿಮ ಘಟ್ಟದ ರಾಜ್ಯಗಳ ಧೋರಣೆ ನಿಜವಾಗಿಯೂ ಆಘಾತಕಾರಿಯಾಗಿದೆ. ಈಗ ಚೆಂಡು ಕೇಂದ್ರ ಸರ್ಕಾರದ ಅಂಗಳಕ್ಕೆ ಬಂದು ಬಿದ್ದಿದೆ. ಆದರೆ, ಪರಿಸರ ವಿರೋಧಿ ಹಾಗೂ ಕಾರ್ಪೋರೇಟ್ ಪರವಾದ ಕೇಂದ್ರ ಸರ್ಕಾರದ ಧೋರಣೆಯನ್ನು ನೋಡಿದರೆ ಅಲ್ಲಿಂದಲೂ ಒಳ್ಳೆಯದೇನನ್ನೂ ನಿರೀಕ್ಷಿಸುವಂತಿಲ್ಲ. ಜನ ಜಾಗೃತಿ, ಜನ ಸಂಘಟನೆಯೊಂದೇ ಮಾರ್ಗ ಅಥವಾ ಪ್ರಕೃತಿಯೇ ಪಾಠ ಕಲಿಸಬಹುದೆ ?



**ವೃತ್ತಿಯಿಂದ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿ ಶಿವಮೊಗ್ಗದ ಡಿ.ವಿ.ಎಸ್. ಪ್ರ.ದ.ಕಾಲೇಜಿನ ಪ್ರಾಂಶುಪಾಲರಾಗಿ ಈಗ ನಿವೃತ್ತರಾಗಿರುವ ಬಿ.ಎಂ. ಕುಮಾರಸ್ವಾಮಿಯವರು ಅರ್ಥಶಾಸ್ತ್ರ ಮತ್ತು ಪರಿಸರ ವಿಷಯಗಳ ಬಗ್ಗೆ ಅನೇಕ ಲೇಖನಗಳನ್ನು ಬರೆದಿದ್ದಾರೆ. ಈ ಹಿಂದಿನ ರಾಜ್ಯ ಸರ್ಕಾರ ನೇಮಿಸಿದ್ದ ಪಶ್ಚಿಮ ಘಟ್ಟ ಕಾರ್ಯಪಡೆಯ ಸದಸ್ಯರೂ ಆಗಿದ್ದವರು)**

# ಪೋಖ್ರಾನ್: ಬಲಿಷ್ಠ ಭಾರತಕ್ಕಾಗಿ ಬಡಜನರ ಬಲಿ

–ನೇಹಾ ದೀಕ್ಷಿತ್



ಪೋಖ್ರಾನ್‌ನಲ್ಲಿ ಕ್ಯಾನ್ಸರ್ ಸಂತ್ರಸ್ತರು



ಅಣ್ವಸ್ತ್ರ ಸ್ಫೋಟದ ಸಂಭ್ರಮದಲ್ಲಿ ಪ್ರಧಾನಿ ವಾಜಪೇಯಿ ಹಾಗೂ ಇತರರು

ಅಂತಿಮವಾಗಿ ಮನುಷ್ಯಕುಲದ ಅಸ್ತಿತ್ವಕ್ಕೇ ಮಾರಕವಾಗುವ ವಿಕ್ಷಿಪ್ತ ಸಾಧನೆಗಳನ್ನೇ ಅಭಿವೃದ್ಧಿ ಎಂದು ಭಾವಿಸಿ ವಿನಾಶದತ್ತ ಸಾಗುತ್ತಿರುವ ಆಧುನಿಕ ಮಾನವ ನೂರಾರು ಜ್ಯೋತಿರ್ವರ್ಷಗಳ ಆಚೆಗಿನ ಜಗತ್ತನ್ನು ಅನ್ವೇಷಿಸುವ ಉಮೇದಿನಲ್ಲಿ ತನ್ನ ಅಸ್ತಿತ್ವದ ಏಕೈಕ ನೆಲೆಯಾದ ಈ ಭೂಮಿಯನ್ನೇ ನರಕವಾಗಿಸುತ್ತಿರುವುದು ವಿಪರ್ಯಾಸ. ಕ್ಷಣಮಾತ್ರದಲ್ಲಿ ಇಡೀ ಭೂಮಂಡಲದ ಮೇಲಿನ ಸಮಸ್ತ ಜೀವರಾಶಿಯನ್ನು ನಿರ್ನಾಮಗೊಳಿಸಬಲ್ಲ ಅಣುಬಾಂಬುಗಳ ನಿರ್ಮಾಣ ಪ್ರಕ್ರಿಯೆಯ ಹಿಂದಿರುವ ಅಸಂಖ್ಯ ಘೋರ ಕಥಾನಕಗಳಲ್ಲಿ ರಾಜಾಸ್ತಾನದ ಪೋಖ್ರಾನ್‌ನದ್ದು ಸಹ ಒಂದು. ೧೯೭೪ರಲ್ಲಿ ಪ್ರಥಮ ಬಾರಿಗೆ ಇಲ್ಲಿನ ಭೂಗರ್ಭದೊಳಗೆ ನಡೆಸಲಾದ ಅಣುಸ್ಫೋಟ ಅಲ್ಲೊಂದು ನರಕವನ್ನೇ ಸೃಷ್ಟಿಸಿತ್ತು ಎಂಬುದು ಬೆಳಕಿಗೆ ಬರಲು ದಶಕಗಳೇ ಬೇಕಾಯಿತು.

ಖೇತೋಲಾಯ್ ಎಂಬುದು ಪೋಖ್ರಾನ್‌ನ ಸಮೀಪವಿರುವ ಮೂರು ಸಾವಿರ ಜನಸಂಖ್ಯೆಯ ಒಂದು ಹಳ್ಳಿ. ಪ್ರತೀ ವರ್ಷ ಕನಿಷ್ಠ ಐದಾರು ಮಂದಿ ಕ್ಯಾನ್ಸರ್‌ಗೆ ಬಲಿಯಾಗುವುದು ಈ ಹಳ್ಳಿಯಲ್ಲಿ ಮಾಮೂಲೀ ಸಂಗತಿ. ಕಳೆದ ಫೆಬ್ರವರಿ ೧೫ರಂದು ಮೆದುಳಿನ ಕ್ಯಾನ್ಸರ್ ಗೆಡ್ಡೆಗೆ ಬಲಿಯಾದ ಅಶೋಕ ವಿಷ್ಣೋ ಎಂಬ ಹನ್ನೊಂದು ವರ್ಷದ ಬಾಲಕ ೨೦೦೨ರಿಂದ ಈಚೆಗೆ ಆ ಕುಟುಂಬದ ಮೂರನೆಯ ಬಲಿ. ಅವನ ಮೆದುಳಿನಲ್ಲಿದ್ದ ಗೆಡ್ಡೆಯನ್ನು ಪತ್ತೆ ಹಚ್ಚಿದ್ದು ದೂರದ ಅಹ್ಮದಾಬಾದ್‌ನ ಆಸ್ಪತ್ರೆಯಲ್ಲಿ. ಏಕೆಂದರೆ, ಪೋಖ್ರಾನ್‌ನ ಹತ್ತಿರದಲ್ಲೆಲ್ಲೂ ಅಂತಹ ಆಸ್ಪತ್ರೆಗಳೇ ಇಲ್ಲ.

೧೯೭೪ರ ಅಣುಸ್ಫೋಟ, ೧೯೯೮ರ 'ಬುದ್ಧ ನಕ್ಕ' ಎಂಬ ಅಣ್ವಸ್ತ್ರ ಪರೀಕ್ಷೆ ಮತ್ತು ನಂತರದ ಹಲವು ಪ್ರಯೋಗ ಸ್ಫೋಟಗಳ ಪರಿಣಾಮವಾಗಿ ಇಲ್ಲಿನ ಮನೆಗಳ ಗೋಡೆಗಳಲ್ಲಿ ಮೂಡಿದ ಬಿರುಕುಗಳು ಹಾಗೇ ಉಳಿದಿವೆ. ಅವರ ಸಂಕಷ್ಟಗಳ ಪರಂಪರೆ ಮುಂದುವರೆಯುತ್ತಲೇ ಇದೆ. ಕಳೆದ ಹಲವು ವರ್ಷಗಳಲ್ಲಿ ಎಷ್ಟೋ ಮಂದಿ ಹೆಣ್ಣು ಮಕ್ಕಳು ಸ್ತನಗಳ ಕ್ಯಾನ್ಸರ್‌ಗೆ ಬಲಿಯಾಗಿದ್ದಾರೆ. ಗ್ರಾಮಸಹಜ ಸಂಕೋಚದಿಂದ ಪ್ರಾರಂಭದ ಹಂತಗಳಲ್ಲಿ ಹೆಣ್ಣು ಮಕ್ಕಳು ರೋಗಲಕ್ಷಣಗಳನ್ನು ಯಾರಲ್ಲೂ ಹೇಳಿಕೊಳ್ಳುವುದಿಲ್ಲ. ಹಾಗೆ ಹೇಳಿಕೊಂಡರೂ ಇಂದಿನ ಹೈಟೆಕ್ ಯುಗದಲ್ಲಿ ಅವರಿಗೆ ಚಿಕಿತ್ಸೆ ನಿಲುಕುವುದೂ ಇಲ್ಲ. ಕ್ಯಾನ್ಸರ್ ಮಾತ್ರವಲ್ಲದೆ ಇತರೆ ಹಲವಾರು ಸಮಸ್ಯೆಗಳೂ ಈ ಹಳ್ಳಿಗರನ್ನು ಕಾಡುತ್ತಿವೆ. ಗರ್ಭಪಾತ, ಗರ್ಭದಲ್ಲೇ ಸತ್ತು ಹುಟ್ಟುವ ಮಕ್ಕಳು ಬುದ್ಧಿಮಾಂದ್ಯತೆ, ಮಾತು ಬಾರದಿರುವುದು ಹೀಗೆ ಹಲವು ಆರೋಗ್ಯ ಸಮಸ್ಯೆಗಳೂ ಅವರ ಬದುಕನ್ನು ನರಕವಾಗಿಸುತ್ತಿವೆ. ಈ ಹಳ್ಳಿಗರು ಸಾಕುವ ಹಸುಗಳೂ ಸಹ ಸಮಸ್ಯೆಗಳಿಂದ ಮುಕ್ತವಾಗಿಲ್ಲ. ಎಷ್ಟೋ ಹಸುಗಳು ಕುರುಡಾಗಿವೆ. ವಿಚಿತ್ರ ಕ್ಯಾನ್ಸರ್‌ನಿಂದ ಸಾಯುತ್ತಿವೆ.

ಜೋಧಪುರದ ವೈದ್ಯಕೀಯ ವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದ ಡಾ. ಆರ್.ಜಿ. ಶರ್ಮ ತಮ್ಮ ತಂಡದೊಂದಿಗೆ ಈ ಪ್ರದೇಶದಲ್ಲಿ ೧೯೮೪ರಿಂದ ೧೯೮೮ರ ವರೆಗೆ ಅಧ್ಯಯನ ನಡೆಸಿ ತಮ್ಮ ಸಂಶೋಧನೆಯನ್ನು *Indian Journal of Cancer*ನಲ್ಲಿ ಪ್ರಕಟಿಸಿದ್ದಾರೆ. ೧೯೭೪ ರ ಅಣುಸ್ಫೋಟದ ಹತ್ತು ವರ್ಷಗಳ ನಂತರ ನಡೆದ ಈ ಸಂಶೋಧನೆಯ ಸಮಯಕ್ಕೆ ಡಾ. ಶರ್ಮ ಅವರ ತಂಡವು ೨೬೭೦ರಷ್ಟು ಹೊಸ ಕ್ಯಾನ್ಸರ್ ಪ್ರಕರಣಗಳನ್ನು ಪತ್ತೆ ಮಾಡಿತ್ತು. ಸರಾಸರಿ ಜಾಗತಿಕ ಲ್ಯುಕೇಮಿಯಾ ಪ್ರಮಾಣ ಪುರುಷರಲ್ಲಿ ಶೇ.೩.೩ ಮತ್ತು ಸ್ತ್ರೀಯರಲ್ಲಿ ಶೇ.೬% ಇದ್ದರೆ, ಖೇತೋಲಾಯ್‌ನ ಸುತ್ತಮುತ್ತ ಅದು ಪುರುಷರಲ್ಲಿ ಶೇ.೫.೨ ಮತ್ತು ಸ್ತ್ರೀಯರಲ್ಲಿ ಶೇ.೪.೭ರಷ್ಟಿತ್ತು ಎಂಬುದು ಈ ತಂಡದ ಅಧ್ಯಯನದಿಂದ ತಿಳಿದು ಬಂದಿತ್ತು. ಮೂಳೆಯ ಕ್ಯಾನ್ಸರ್‌ಗೆ ಮುಖ್ಯ ಕಾರಣ ಅಣುವಿಕಿರಣ ಎಂಬುದನ್ನು ಡಾ. ಶರ್ಮ ಅವರು ಖಚಿತ ಪಡಿಸುತ್ತಾರೆ. ಆದರೆ ಇನ್ನೂ ಹೆಚ್ಚು ವಿಸ್ತೃತವಾದ ಅಧ್ಯಯನ ನಡೆಸದೆ ಪೋಖ್ರಾನ್‌ನ ಸುತ್ತ ಮುತ್ತಲ ಜನರಲ್ಲಿ ಕಂಡುಬರುವ ಕ್ಯಾನ್ಸರ್‌ಗೂ ಅಣುಸ್ಫೋಟಕ್ಕೂ ಸಂಬಂಧ ಕಲ್ಪಿಸಲಾಗದು ಎಂದೂ ಸಹ ಅವರು ಸೂಚಿಸುತ್ತಾರೆ.

ವಿಶ್ವ ಆರೋಗ್ಯ ಸಂಸ್ಥೆ *Globocan* ಪ್ರಕಟಿಸಿದ ವರದಿಯಂತೆ ಭಾರತದಲ್ಲಿ ಪ್ರತಿವರ್ಷ ಕ್ಯಾನ್ಸರ್‌ನಿಂದ ಐದು ಲಕ್ಷ ಸಾವುಗಳು ಸಂಭವಿಸುತ್ತವೆ. ಅಂದರೆ ಭಾರತದಲ್ಲಿ ಸುಮಾರು ೨೫೦೦ ಜನರಿಗೆ ಒಬ್ಬರಂತೆ ಕ್ಯಾನ್ಸರ್ ರೋಗಕ್ಕೆ ಬಲಿಯಾಗುತ್ತಾರೆ. ಆದರೆ ಖೇತೋಲಾಯ್‌ನಲ್ಲಿ ಅದು ಐದು ಪಟ್ಟು ಹೆಚ್ಚು ಅಂದರೆ ಅಲ್ಲಿ ಸುಮಾರು ೫೦೦ ಜನರಿಗೆ ಒಬ್ಬರು ಕ್ಯಾನ್ಸರ್‌ನಿಂದ ಸಾಯುತ್ತಾರೆ. ಕಳೆದ ವರ್ಷ ಚೇತನ್ ಕೊಠಾರಿ ಎಂಬುವವರು ಸಲ್ಲಿಸಿದ ಮಾಹಿತಿ ಹಕ್ಕು ಅರ್ಜಿಗೆ ಉತ್ತರವಾಗಿ ಭಾಭಾ ಅಣುಶಕ್ತಿ ಸಂಶೋಧನಾ ಕೇಂದ್ರದಿಂದ ದೊರೆತ ಮಾಹಿತಿಯ ಪ್ರಕಾರ ಕಳೆದ ಇಪ್ಪತ್ತು ವರ್ಷಗಳಲ್ಲಿ ದೇಶದೆಲ್ಲೆಡೆ ಇರುವ ಅಣುಶಕ್ತಿ ಸಂಬಂಧಿತ ಕೇಂದ್ರಗಳಲ್ಲಿ ಸಂಭವಿಸಿರುವ ಆರೋಗ್ಯ ಸಂಬಂಧೀ ಸಾವುಗಳಲ್ಲಿ ಶೇ.೭೦ ಸಾವುಗಳು ಕ್ಯಾನ್ಸರ್‌ನಿಂದ ಉಂಟಾಗಿವೆ ಎಂಬ ಭಯಾನಕ ಸತ್ಯವು ಬಯಲಾಗಿದೆ. ಆದರೆ ಈ ಕುರಿತು ಯಾವ ಹೆಚ್ಚಿನ ಅಧ್ಯಯನಗಳೂ ನಡೆದಿಲ್ಲ.

PUCL ಕಾರ್ಯಕರ್ತೆ ಕವಿತಾ ಶ್ರೀವಾಸ್ತವ್ ಅವರು ಪೋಖ್ರಾನ್‌ನ ಸುತ್ತಮುತ್ತಲ ತಮ್ಮ ಕಳೆದ ಮುವ್ವತ್ತು ವರ್ಷಗಳ ಚಟುವಟಿಕೆಗಳ ಅನುಭವದ ಪ್ರಕಾರ ಹೇಳುವಂತೆ ಯಾವ ಸರ್ಕಾರವೂ ಈ ಪ್ರದೇಶದ ಜನರ ಸಂಕಷ್ಟಗಳ ಬಗ್ಗೆ ಗಮನ ಹರಿಸಿಲ್ಲ. ಅವರ ಆರೋಗ್ಯದ ಬಗ್ಗೆ ಕಾಳಜಿ ತೋರಿಲ್ಲ. ೧೯೭೪ ರಲ್ಲಿ ತಮ್ಮ ಜಮೀನನ್ನು ಕಳೆದುಕೊಂಡ ರೈತರಿಗೆ ಸಿಕ್ಕಿರುವ ಪರಿಹಾರ ಒಂದು ಭಿಗಾ(ಎರಡೂವರೆ ಗುಂಟೆ) ಜಮೀನಿಗೆ ೩ ರಿಂದ ೪ ರೂಪಾಯಿ. ೫೦೦ ಭಿಗಾ ಜಮೀನು ಕಳೆದುಕೊಂಡವರಿಗೆ ದೊರೆತಿರುವುದು ೨೦೦೦ ಸಾವಿರ ರೂಪಾಯಿ.

ತಮ್ಮ ಜೀವನೋಪಾಯಕ್ಕಾಗಿ ಪಶುಸಂಗೋಪನೆಯನ್ನು ಆಶ್ರಯಿಸಿರುವ ಇಲ್ಲಿನ ಹಳ್ಳಿಗರಿಗೆ ಗೋಮಾಳಗಳೆಲ್ಲವೂ ಸೇನೆಯ ವಶವಾಗಿದ್ದರಿಂದ ಉಂಟಾಗಿರುವ ಸಂಕಷ್ಟಗಳು ಎಂದೂ ಪರಿಹಾರವಾಗುವಂತೆ ಕಾಣುತ್ತಿಲ್ಲ. ಗೋಮಾಳ ಕಳೆದುಕೊಂಡ ಜನಕ್ಕೆ ಇಂದು ತಮ್ಮ ಜಮೀನುಗಳನ್ನೂ ಕಳೆದುಕೊಳ್ಳುವ ಪರಿಸ್ಥಿತಿ ಎದುರಾಗುತ್ತಿದೆ. ಹಸುಗಳು ರೋಗಪೀಡಿತವಾಗಿ ಸಾಯುತ್ತಿವೆ. ಹಾಲಿನ ಉತ್ಪಾದನೆ ಕುಂಠಿತಗೊಳ್ಳುತ್ತಿದೆ.

ಭಾರತ ಇಂದು ಅಣುಶಕ್ತಿಸಮರ್ಥ ರಾಷ್ಟ್ರ. ಆದರೆ ಈ ಶಕ್ತಿ ಬಡ ರೈತರ ಬಲಿಯಿಂದಲೇ ಬರಬೇಕೇ ಎಂಬುದು ಹಳ್ಳಿಗರ ಪ್ರಶ್ನೆ. ಅವರು ಏಕೆ ಪುನಃ ಪುನಃ ನಮ್ಮ ಹಳ್ಳಿಗೇ ಬರುತ್ತಾರೆ? ನಮ್ಮ ಭೂಮಿಯನ್ನು ಕಿತ್ತುಕೊಂಡು ನಮ್ಮ ಬದುಕನ್ನು ನರಕ ಮಾಡುತ್ತಾರೆ? ಅವರಿಗೆ ಬೇರೆಲ್ಲೂ ಸ್ಥಳವಿಲ್ಲವೇ? ಎಂಬ ರೈತರ ಪ್ರಶ್ನೆಗಳಿಗೆ ಯಾರು ಉತ್ತರಿಸಬೇಕು?

(ಕನ್ನಡದಲ್ಲಿ ಸಂಗ್ರಹ: **ಎಂ.ರಾಜು**

ಕೃಪೆ: ***ಔಟ್‌ಲುಕ್,*** ೨೭, ಏಪ್ರಿಲ್, ೨೦೧೫)

**ಪ್ರಿಯ ಓದುಗರೇ, ನೀವು ಚಂದಾ ಮೊತ್ತವನ್ನು ನಮ್ಮ ಬ್ಯಾಂಕ್ ಖಾತೆಗೆ ಹಾಕಿದ ಕೂಡಲೇ ಅದನ್ನು ನಮಗೆ ತಿಳಿಸಲು ಮರೆಯದಿರಿ. ತಡ ಮಾಡಿದರೆ ನಮ್ಮ ಚಂದಾಪಟ್ಟಿಯಲ್ಲಿ ಪರಿಷ್ಕರಣೆ ಕಷ್ಟವಾಗುವುದು**–ಸಂ.

# ಬದನವಾಳು ಸತ್ಯಾಗ್ರಹ; ಮುಂದೇನು?

–ಡಾ. ಸಂಜೀವ ಕುಲಕರ್ಣಿ




ಬದನವಾಳುನಲ್ಲಿ ಸುಸ್ಥಿರ ಬದುಕು ರಾಷ್ಟ್ರೀಯ ಸಮಾವೇಶ ಮುಕ್ತಾಯಗೊಂಡಿತು. ಮುಂದೇನು? ಈ ಪ್ರಶ್ನೆ ಇಂದು ನಾಡಿನಾದ್ಯಂತ ಅನೇಕ ಪ್ರಜ್ಞಾವಂತರ ಮನಸ್ಸಿನಲ್ಲಿ ಒಂದು ಕುತೂಹಲದ ಮತ್ತು ಒಂದು ಕಾಳಜಿಯ ಎರಡು ಎಲೆಯ ಪುಟ್ಟ ಸಸಿಯಾಗಿ ಮೊಳಕೆಯೊಡೆದು ನಿಂತಿದೆ. ಅದು ಸುತ್ತಲೂ ಕಾತರದಿಂದ ನೋಡುತ್ತಿದೆ.

ಸುಸ್ಥಿರ ಬದುಕು ಅಂದರೇನು? ಇದು ಮೂಲಭೂತ ಪ್ರಶ್ನೆ. ಇದಕ್ಕೆ ಒಂದು ಸಮರ್ಪಕವಾದ ಉತ್ತರ ನಮಗೆ ದೊರೆತರೆ ನಮ್ಮ ಮುಂದಿನ ಹೆಜ್ಜೆ ಸರಿಯಾದ ದಿಕ್ಕಿನಲ್ಲಿ ಸಾಗುತ್ತದೆ. ಒಂದು ಸರಳ ವ್ಯಾಖ್ಯೆಯೆಂದರೆ ನಾವು ಪರಿಸರಸ್ನೇಹಿಯಾಗಿ ಬದುಕುತ್ತ ನಮ್ಮ ಬದುಕಿನಲ್ಲಿ ಸುಖ ಸಮಾಧಾನ ಸಂತೃಪ್ತಿ ಪಡೆಯುತ್ತ ಮುಂದಿನ ತಲೆಮಾರಿಗೆ ಇಂದಿಗಿಂತಲೂ ಹೆಚ್ಚು ಸಮೃದ್ಧವಾದ ಪ್ರಕೃತಿಯನ್ನು ಬಿಟ್ಟು ಹೋಗುವದು. ಯಾಕೆ ಮೂವತ್ತು ವರ್ಷಗಳ ಹಿಂದೆ ಇಲ್ಲದಿದ್ದ ಈ ಪರಿಕಲ್ಪನೆ ಇಂದು ಹೆಚ್ಚು ಹೆಚ್ಚು ಚಲಾವಣೆಗೆ ಬರುತ್ತಿದೆ? ಉತ್ತರ ಸ್ಪಷ್ಟವಾಗಿದೆ: ಮೊದಲಿನಿಂದಲೂ ಬಹುತೇಕ ಎಲ್ಲ ಜನಸಂಸ್ಕೃತಿಗಳಲ್ಲಿ ಒಂದು ವರ್ಗದ ಜನ ಪ್ರಕೃತಿಯನ್ನು ನಾಶ ಮಾಡುತ್ತಲೇ ಬದುಕುತ್ತ ಬಂದರು. ಆದರೆ ಅಂದು ಈ ವಿನಾಶಕ್ಕೆ ಒಂದು ಮಿತಿಯಿತ್ತು. ಕೈಗಾರಿಕಾ ಕ್ರಾಂತಿಯ ನಂತರ ಈ ಪರಿಸರ ನಾಶಕ ಜೀವನಶೈಲಿ ಭೂಮಿಯ ಉದ್ದಗಲಕ್ಕೂ ವ್ಯಾಪಿಸಿ ಇಂದು ಹವಾಮಾನ ಸಂಕಷ್ಟ, ಭೂಮಿತಾಯಿಗೆ ಜ್ವರದಂತಹ ಜಾಗತಿಕ ಮಟ್ಟದ 'ಉಳಿ ಇಲ್ಲವೇ ಅಳಿ' ಅನ್ನುವಂತಹ ಸಮಸ್ಯೆಯನ್ನು ಸೃಷ್ಟಿಸಿದೆ.

ತೀವ್ರ ಕಳವಳದ ಸಂಗತಿಯೆಂದರೆ ಈ ವಿನಾಶದ ಪ್ರಕ್ರಿಯೆಯಲ್ಲಿ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಮೊದಲು ಮತ್ತು ಹೆಚ್ಚು ಬಲಿಯಾಗುವವರು ಈಗಾಗಲೇ ನಮ್ಮ ಅಭಿವೃದ್ಧಿ ವ್ಯವಸ್ಥೆಯಲ್ಲಿ ದಮನಕ್ಕೊಳಗಾದವರು, ಅಂಚಿಗೆ ನೂಕಲ್ಪಟ್ಟವರು ಅರ್ಥಾತ್ ಬಡವರು, ದಲಿತರು, ಮಹಿಳೆಯರು ಇತ್ಯಾದಿ. ಆದುದರಿಂದ ಇಂದು ನಾವೆಲ್ಲರೂ ಅನಿವಾರ್ಯವಾಗಿ ದೇಶ ಭಾಷೆ ಜಾತಿ ಮತ ಚರಿತ್ರೆ ರಾಜಕೀಯ ಸಿದ್ಧಾಂತಗಳು ಮುಂತಾದ ಎಲ್ಲ ವಿಭಜನೆಗಳ ಆಚೆ ಬಂದು ಒಂದು ಹೊಸ ಸಂಕಲ್ಪಶಕ್ತಿಯೊಂದಿಗೆ ಒಂದು ಹೊಸ ಮೌಲ್ಯ ವ್ಯವಸ್ಥೆಯ ಆಧಾರದ ಮೇಲೆ ಒಂದು ಹೊಸ ಹೋರಾಟವನ್ನು ರೂಪಿಸಿಕೊಳ್ಳಬೇಕಾಗಿದೆ. ಈ ಹೋರಾಟ ಎಷ್ಟು ಹೊರಗಿನದೋ ಅದರ ಹತ್ತು ಪಟ್ಟು ಹೆಚ್ಚು ಅದು ಒಳಗಿನದು ಎಂಬ ಸತ್ಯ ನಮಗೆ ಪ್ರಾರಂಭದಿಂದಲೇ ಗೊತ್ತಿರಬೇಕು. ಯಾಕೆಂದರೆ ನೈಸರ್ಗಿಕ ಸಂಪನ್ಮೂಲಗಳ ಮಿತವಾದ ಮತ್ತು ಸರಿಯಾದ ಬಳಕೆ ಎಂಬುದೇ ಸುಸ್ಥಿರ ಬದುಕು ಎನ್ನುವ ಪರಿಕಲ್ಪನೆಯ ಆಧಾರಶಿಲೆ. ಇದನ್ನೇ ಅತ್ಯಂತ ಆಧುನಿಕ ಹಾಗೂ ವೈಜ್ಞಾನಿಕ ಪರಿಭಾಷೆಯಲ್ಲಿ ಶೂನ್ಯ ಇಂಗಾಲ ಜೀವನಶೈಲಿ (ಝೀರೊ ಕಾರ್ಬನ್ ಲೈಫ್ ಸ್ಟೈಲ್) ಎಂದು ಕರೆಯುತ್ತಾರೆ. ಇದನ್ನೇ ಬುದ್ಧ ಅಕ್ಕ, ಅಲ್ಲಮ, ರಾಮಕೃಷ್ಣ, ರಮಣ, ಗಾಂಧಿ, ಸಿದ್ದೇಶ್ವರ ಸ್ವಾಮಿಗಳು ಮುಂತಾದ ಸಂತರು ಸರಳ ಅಪರಿಗ್ರಹದ ಸಮಾಧಾನದ ಬದುಕು ಎಂದು ಹೇಳಿ ಬಾಳಿ ತೋರಿಸಿದ್ದಾರೆ. ಇದರ ಅರ್ಥ ಬಡವರು ದಲಿತರು ಈಗಿರುವಂತೆ ಬಡವರು ದಲಿತರಾಗಿಯೇ ಉಳಿಯಬೇಕೆಂದು ಅಲ್ಲವೇ ಅಲ್ಲ. ಇಲ್ಲಿ ಎರಡು ಮುಖ್ಯ ಮಾತುಗಳನ್ನು ನಾವು ಸರಿಯಾಗಿ ತಿಳಿದುಕೊಳ್ಳಬೇಕು. ಮೊದಲನೆಯದು ಸರಳತೆಯೆಂದರೆ ಕೊರತೆಯ ಬಾಳು ಅಥವಾ ದಾರಿದ್ರ್ಯ ಅಲ್ಲ. ನನ್ನ ಸುಖ ಸಂತೋಷದ ಬದುಕಿಗೆ ಎಷ್ಟು ಬೇಕೋ ಅಷ್ಟು ದುಡಿದು ಗಳಿಸಿ ಬಳಸಿ ಬಾಳುವದು. ಯಾರಿಗೆ ಇಂದು ಎಷ್ಟು ಬೇಕೋ ಅಷ್ಟು ಇಲ್ಲವೋ ಅವರಿಗೆ ಅದು ಸಿಗಲೇಬೇಕು ಹಾಗೂ ಅದಕ್ಕಾಗಿ ನಾವೆಲ್ಲರೂ ಶ್ರಮಿಸಬೇಕು. ಎರಡನೆಯದೆಂದರೆ ಯಾರು ಎಷ್ಟು ಬೇಕೋ ಅಷ್ಟು ಮಿತಿಗಿಂತಲೂ ಹೆಚ್ಚು ಕಬಳಿಸುತ್ತಿದ್ದಾರೆ ಮತ್ತು ಬಳಸುತ್ತಿದ್ದಾರೆಯೋ ಅವರಿಗೂ ಸುಸ್ಥಿರ ಬದುಕಿನ ಪಾಠಗಳನ್ನು ಮನವರಿಕೆ ಮಾಡಿಕೊಡಬೇಕು ಮತ್ತು ಅವರ ಕಬಳಿಸು ಬಳಸು ಬಿಸಾಕು ಪ್ರವೃತ್ತಿಗೆ ನಿಯಂತ್ರಣ ಹಾಕುವಂತಹ ಶೈಕ್ಷಣಿಕ ಸಾಮಾಜಿಕ ರಾಜಕೀಯ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕು. ಸಮಾಜವಾದದ ಆತ್ಯಂತಿಕ ಗುರಿಯೂ ಇದೆ ಅಲ್ಲವೇ?

ಬಹಳ ಮಹತ್ವದ ಪ್ರಶ್ನೆಯೆಂದರೆ ಈ 'ಎಷ್ಟು ಬೇಕೋ ಅಷ್ಟು' ಅನ್ನು ಹೇಗೆ ನಿರ್ಧರಿಸುವದು? ಇಂದು ನಮ್ಮ ಎ – ಬೇ – ಅ ಅನ್ನು ಯಾರು ನಿರ್ಧರಿಸುತ್ತಿದ್ದಾರೆ? ಇಂದಿನ ನಮ್ಮ ಎ – ಬೇ – ಅ ಎಷ್ಟು ಪರಿಸರ ಪೂರಕವಾಗಿದೆ? ನಮ್ಮ ಅಗತ್ಯ ಮತ್ತು ಬೇಕುಗಳನ್ನು ಹೊರಗಿನ ಶಾಸ್ತ್ರ ಸಿದ್ಧಾಂತಗಳನ್ನು ಅವಲಂಬಿಸದೆ ನಾವೇ ವಿಶ್ಲೇಷಿಸಿ ನಿರ್ಣಯಿಸಿಕೊಳ್ಳಬಹುದೇ?

ಸುಸ್ಥಿರ ಬದುಕಿನ ಈ ಹೋರಾಟ ಬಹಳ ಸಂಕೀರ್ಣವಾದುದು ಮತ್ತು ಕಠಿಣವಾದುದು. ಯಾಕೆಂದರೆ ಇದು ಬಹಳ ಮಟ್ಟಿಗೆ ನನ್ನ ಜೊತೆಗಿನ ಮತ್ತು ನನ್ನ ಒಳಗಿನ ಹೋರಾಟವಾಗಿರುತ್ತದೆ. ಆದುದರಿಂದ ಈ ಪರಿಕಲ್ಪನೆಯ ತಾತ್ವಿಕ ಮತ್ತು ಅನುಷ್ಠಾನದ ಆಯಾಮಗಳನ್ನು ಚರ್ಚಿಸಲು ಮನವರಿಕೆ ಮಾಡಿಕೊಳ್ಳಲು ಒಂದೆರಡು ಲೇಖನ ಅಥವಾ ಒಂದೆರಡು ಉಪನ್ಯಾಸ ಸಾಲುವದಿಲ್ಲ. ನಾಲ್ಕು ಅಥವಾ ಐದು ದಿನಗಳ ಕಾರ್ಯಾಗಾರವೇ ಬೇಕಾದೀತು. ಇಂಥ ಒಂದು ಪ್ರಯತ್ನವನ್ನು ನಾವು ಇತ್ತೀಚೆಗೆ ಮಾಡಿದೆವು. ಇದೇ ಮೇ ತಿಂಗಳ ಮೊದಲ ವಾರದಲ್ಲಿ ನಾವು ನಮ್ಮ *ಸುಮನ ಸಂಗಮ* ಕಾಡುತೋಟದಲ್ಲಿ ಸುಸ್ಥಿರ ಬದುಕು ಕುರಿತು ಒಂದು ಶಿಬಿರವನ್ನು ಹಮ್ಮಿಕೊಂಡಿದ್ದೆವು. ವೈಯಕ್ತಿಕ ಕೌಟುಂಬಿಕ ಸಾಮುದಾಯಿಕ ಮತ್ತು ಜಾಗತಿಕ –ಹೀಗೆ ನಾಲ್ಕೂ ನೆಲೆಗಳಲ್ಲಿ ಸುಸ್ಥಿರ ಬದುಕಿನ ವಿವಿಧ ಆಯಾಮಗಳನ್ನು ಆಳಕ್ಕಿಳಿದು ಚರ್ಚಿಸಿ ನಮ್ಮ ತಿಳಿವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡಿದೆವು ಇಂತಹ ಶಿಬಿರಗಳನ್ನು ಹಮ್ಮಿಕೊಳ್ಳುವದರ ಜತೆಗೆ ನಾವು ಮತ್ತೇನು ಮಾಡಬಹುದು ?

1. ಊರೂರಿನಲ್ಲಿ ಸಮಾನ ಮನಸ್ಕರು ಸೇರಿಕೊಂಡು ಸುಸ್ಥಿರ ಬದುಕು ಬಳಗಗಳನ್ನು ರಚಿಸಿಕೊಂಡು ನಿಯಮಿತವಾಗಿ ಸೇರಿ ನಮ್ಮ ನಮ್ಮ ಜೀವನ ಶೈಲಿಗಳನ್ನು ಪರಾಮರ್ಶೆ ಮಾಡುತ್ತ ಬದಲಾವಣೆಯ ಹೆಜ್ಜೆಗಳನ್ನು ಇಡುವದು. ಇಂತಹದ್ದೊಂದು ಪ್ರಯತ್ನವನ್ನು ನಾವು ಧಾರವಾಡದಲ್ಲಿ ಮಾಡುತ್ತಿದ್ದೇವೆ.

2. ಸಮುದಾಯ ಪ್ರೋತ್ಸಾಹಿತ ಕೃಷಿ ಬಳಗಗಳನ್ನು ಮಾಡಿಕೊಳ್ಳುವದು. ಮತ್ತು ಆ ಮೂಲಕ ಸಾವಯವ ಪರಿಸರಸ್ನೇಹಿ ಕೃಷಿಯನ್ನು ಬೆಂಬಲಿಸುತ್ತ ಭೂಮಿಗೆ ಸಮೀಪ ಬರುವದು.

3, ಈ ಹೋರಾಟ ವ್ಯಕ್ತಿ ಕೇಂದ್ರಿತ ಅಥವಾ ಸಂಘ/ಸ್ಥಳ ಕೇಂದ್ರಿತ ಆಗದ ಹಾಗೆ ನೋಡಿಕೊಳ್ಳುವದು. ಈ ದೊಡ್ಡ ಜವಾಬ್ದಾರಿಯೂ ನಮ್ಮ ಮೇಲೆಯೇ ಇದೆ.

4. ಸುಸ್ಥಿರ ಬದುಕಿನ ಆಳ ವಿಸ್ತಾರ ಮತ್ತು ಅನಿವಾರ್ಯತೆ ಕುರಿತು ಕನ್ನಡದಲ್ಲಿ ಹೆಚ್ಚು ಹೆಚ್ಚು ಸಾಹಿತ್ಯ ಹೊರಬರುವಂತೆ ಮಾಡಿ ಅದನ್ನು ನಮ್ಮ ನಾಡಜನರಿಗೆಲ್ಲ ತಲುಪಿಸುವದು.

5. ಹೆಚ್ಚು ಶರೀರ ಶ್ರಮ ಇರುವ ದಿನಚರಿಯನ್ನು ರೂಢಿಸಿಕೊಳ್ಳುವದು , ಬೊಜ್ಜು, ಸಕ್ಕರೆ ಕಾಯಿಲೆ, ಅತಿ ರಕ್ತದೊತ್ತಡ ಮುಂತಾದ ಹಲವಾರು ಜೀವನಶೈಲಿ ಕಾಯಿಲೆಗಳ ಪರಿಹಾರದಲ್ಲಿ ಇದರ ಪಾತ್ರ ಬಲು ದೊಡ್ಡದು.

6. ಪ್ರತಿ ಊರಿನಲ್ಲಿ ಒಂದು ನೆನಪಿನ ಬನ ಅಂತ ಮಾಡಿಕೊಂಡು ಊರಿಗೊಂದು ಹಸಿರು ಕಂಕಣ ಅಥವಾ ಹಸಿರು ಉಡುದಾರ ನಿರ್ಮಿಸಿಕೊಳ್ಳುವದು.

ಈ ಹೋರಾಟದ ಅನಿವಾರ್ಯತೆಯ ಆಳವಾದ ಅರಿವು ಮತ್ತು ಸುದೀರ್ಘ ಕಾಲ ಅದನ್ನು ನಡೆಸಿಕೊಂಡು ಹೋಗುವ ಕೆಚ್ಚು ನಮ್ಮಲ್ಲಿದ್ದರೆ ಮಾತ್ರ ಇದು ಯಶಸ್ವಿಯಾಗಲು ಸಾಧ್ಯ. ಹೀಗಾದಾಗ ಮಾತ್ರ ನಾವು ಮೇಲೆ ಉದ್ಧರಿಸಿದ ಸಂತರ ಫೋಟೋಗಳನ್ನು ಬರಿ ತೂಗು ಹಾಕುವ ಮತ್ತು ಅವರಿಗೆ ಊದಿನ ಕಡ್ಡಿ ಬೆಳಗುವದರ ಬದಲಾಗಿ ಅವರಂತೆಯೇ ದಿವ್ಯ ಬಾಳುಗಳನ್ನು ಬಾಳಲು ಶಕ್ಯವಾಗುತ್ತದೆ.

## ಕಾವ್ಯ, ನಾಟಕ, ಸಂಗೀತ ಇತ್ಯಾದಿ...

# ವಿದ್ಯಾರ್ಥಿಗಳ ಎರಡು ವಿಶಿಷ್ಟ ರಂಗಪ್ರಯೋಗಗಳು



'ಕವಿತೆ ಎಂದರೆ ಏನರಿ?'ಕನ್ನಡ ಕಾವ್ಯಗಳ ರಂಗಪ್ರಸ್ತುತಿಯಯ ಒಂದು ದೃಶ್ಯ

ಹೆಗ್ಗೋಡಿನ ನೀನಾಸಂನ ರಂಗಶಿಕ್ಷಣ ಕೇಂದ್ರದ ೨೦೧೪-೧೫ನೇ ಸಾಲಿನ ವಿದ್ಯಾರ್ಥಿಗಳು ಕಳೆದ ಮೇ ೧೧ರಿಂದ ೧೪ರವರೆಗೆ ತಮ್ಮ ಪಠ್ಯಕ್ರಮದ ಭಾಗವಾಗಿ ಅಭ್ಯಾಸ ಮಾಡಿದ ಐದು ವಿಭಿನ್ನ ರಂಗಪ್ರದರ್ಶನಗಳನ್ನು ಸಾರ್ವಜನಿಕರಿಗೆ ನೀಡಿದರು. ಅವುಗಳಲ್ಲಿ ನಾನು ನೋಡಿದ ಎರಡು ಪ್ರದರ್ಶನಗಳ ಬಗ್ಗೆ ಇಲ್ಲಿ ಬರೆಯುತ್ತಿದ್ದೇನೆ.

ಮೊದಲನೆಯದು, ೧೧ರಂದು ಪ್ರದರ್ಶಿತವಾದ ಹಳೆಗನ್ನಡ ಮತ್ತು ಹೊಸಗನ್ನಡ ಕಾವ್ಯ ಭಾಗಗಳನ್ನು ಸಂಕಲಿಸಿದ ರಂಗಪ್ರಯೋಗ: 'ಕವಿತೆ ಅಂದರೆ ಏನರಿ? ವಿನಯ ವಿಸ್ಮಯ ವೈಖರಿ!' ಈ ವಿನೂತನ ಪ್ರಯೋಗದ ಮೊದಲ ಭಾಗದಲ್ಲಿ ಪಂಪ, ರನ್ನ, ನಾಗಚಂದ್ರ, ರಾಘವಾಂಕ, ಕುಮಾರವ್ಯಾಸ, ಲಕ್ಷೀಶ ಮತ್ತು ನರಹರಿಯ ಕಾವ್ಯದ ಆಯ್ದ ಭಾಗಗಳನ್ನೂ ಹಾಗೂ ಅಕ್ಕನ ಒಂದು ವಚನವನ್ನೂ ವಿವಿಧ ಲಯ ವಿನ್ಯಾಸಗಳಲ್ಲಿ ಅಭಿನಯಿಸಿ ತೋರುವ ಪ್ರಯತ್ನ ಮಾಡಿದರು. ವಿದ್ಯಾರ್ಥಿಗಳ ಬಾಯಿಂದ ಹಳೆಗನ್ನಡ ಅಸ್ಖಲಿತವಾಗಿ ಮೂಡಿಬಂದುದು ನಿರ್ದೇಶಕ ವೆಂಕಟರಮಣ ಐತಾಳರ ಒಂದು ಸಾಧನೆಯೇ ಎನಿಸಿದರೂ, ಆ ಅಸ್ಖಲಿತತೆಯಲ್ಲಿ ಅರ್ಥದೀಪ್ತಿ ಕಾಣದಿದ್ದುದು ನಿರಾಶೆಯನ್ನುಂಟುಮಾಡಿತೆಂದೇ ಹೇಳಬೇಕು. ಜೊತೆಗೆ ಐತಾಳರ ಪ್ರಯೋಗಳಲ್ಲಿ ಯಕ್ಷಗಾನ, ಕಥಕ್ಕಳಿ, ಕಲರಿ ಪಟ್ಟು ಇತ್ಯಾದಿ ಕರಾವಳಿ ಕುಣಿತಗಳ ಲಯಗಾರಿಕೆಯ ಏಕತಾನತೆ ಕಾಣತೊಡಗಿದ್ದು, ಅವರು ಹುಲಿವೇಷ, ತಮ್ಮಟೆ, ಸೋಮನ ಕುಣಿತ, ಕಂಸಾಳೆ ಇತ್ಯಾದಿ ಬಯಲುಸೀಮೆಯ ಲಯಗಳ ಕಡೆ ಗಮನ ಹರಿಸಿದರೆ ಅವರ ಇಂತಹ ಪ್ರಯೋಗಗಳು ಇನ್ನಷ್ಟು ಕಳೆಕಟ್ಟಬಲ್ಲವು.

ಎರಡನೇ ಭಾಗ ಕೆ.ವಿ. ಅಕ್ಷರ ಮತ್ತು ಮಂಜು ಕೊಡಗು ನಿರ್ದೇಶಿಸಿದ ಹೊಸಗನ್ನಡ ಪದ್ಯಗಳನ್ನು ಆಧರಿಸಿದ್ದು, ಇದರಲ್ಲಿ ಬೇಂದ್ರೆ, ಕೆಎಸ್‌ನ, ಪ್ರತಿಭಾ, ರಾಮಾನುಜನ್, ಎಕ್ಕುಂಡಿ, ಶಿವಪ್ರಕಾಶ್, ಸಿದ್ದಲಿಂಗಯ್ಯ, ಅಡಿಗ, ಪಂಜೆಯವರ ಪದ್ಯಗಳನ್ನು ರಂಗರೂಪಗಳಿಗೆ ಅಳವಡಿಸುವ ಪ್ರಯತ್ನ ಮಾಡಲಾಗಿತ್ತು. ಇವುಗಳಲ್ಲಿ ಗಮನಸೆಳೆದವುಗಳೆಂದರೆ ಎಕ್ಕುಂಡಿಯವರ ನಾಗಿಯ ಕಥೆ ಮತ್ತು ಪಂಜೆಯವರ 'ತೆಂಕಣಗಾಳಿಯಾಟ'. 'ನಾಗಿಯ ಕಥೆ'ಯಂತೂ ಪಠ್ಯದ ತನ್ನ ಸರಳ ಲಯಗಾರಿಕೆ ಹಾಗೂ ಚಿತ್ರವತ್ತಾದ ಕಲ್ಪನಾಶೀಲತೆ ಮತ್ತು ಅದಕ್ಕೆ ಹೊಂದುವ ಹದವರಿತ ನಿಧಾನ ಚಲನೆ ಹಾಗೂ ಕರುಣರಸ ಜಿನುಗುವ ನಿವೇದನಾಶೈಲಿಯಿಂದ ಪ್ರೇಕ್ಷಕರ ಎದೆಮುಟ್ಟಿತು. ಇನ್ನು ಪಂಜೆಯವರ ಪದ್ಯ ಇದಕ್ಕೆ ವಿರುದ್ಧವಾಗಿ, ಪದ್ಯದ ವಸ್ತುವಿಗೆ ತಕ್ಕಂತೆ ರಭಸದ ಚಲನಾವಿನ್ಯಾಸಗಳು ಆವೇಗಪೂರ್ಣವಾದ ಗೀತಗಾರಿಕೆಯಿಂದಾಗಿ ಪರಿಣಾಮಕಾರಿ ಎನಿಸಿತು. ಪ್ರತಿಭಾರ ಪದ್ಯ 'ನಾವು ಹುಡುಗಿಯರೇ ಹೀಗೆ' ತನ್ನ ಸರಳ ವಿನ್ಯಾಸ ಮತ್ತು ನಿರೂಪಣೆಯಿಂದಾಗಿಯೇ ಪದ್ಯದಲ್ಲಿನ ವ್ಯಂಗ್ಯವನ್ನು ಹದವಾಗಿ ಹೊರಹೊಮ್ಮಿಸುವಲ್ಲಿ ಯಶಸ್ವಿಯಾಯಿತು. ಶಿವಪ್ರಕಾಶರ 'ಸಿಂಹಾವಲೋಕನ' ಅತಿ ನಾಟಕೀಯತೆಯಿಂದ ಸ್ವಲ್ಪ ಸ್ಥೂಲವೆನಿಸಿದರೆ, ಸಿದ್ಧಲಿಂಗಯ್ಯನವರ 'ಸಾವಿರಾರು ನದಿಗಳು' ಸೇನಾಗೀತೆಯ ಮಟ್ಟಿಗೆ ಬಿದ್ದು ಹಾಡಿನೊಳಗಿನ ಅದ್ಭುತ ಚಲನೆಗಳು ಮತ್ತು ಚಿತ್ರವತ್ತೆಗಳು ಅನ್ಯಾಯಕ್ಕೊಳಗಾದವು ಎನಿಸಿತು. ಅಡಿಗರ ಮತ್ತು ರಾಮಾನುಜನ್‌ರ ಪದ್ಯಗಳು ರಂಗಪ್ರಸ್ತುತಿಗೆ ಹೊಂದಿಲ್ಲದಂತಿದ್ದು, ಅಡಿಗರ 'ಸಾಮಾನ್ಯನಂತೆ ನಾನು' ಪದ್ಯದ ವಾಚನ ನಟರು ವೇದಿಕೆ ಮುಂದೆ ಬಂದು ಬೈದು ಬೈದು ಹೋದಂತಿದ್ದರೆ, ರಾಮಾನುಜನ್‌ರ ಪದ್ಯ 'ಪಿತ್ರಾರ್ಜಿತ'ದ ವ್ಯಂಗ್ಯ ತಿ ನಟನೆಯಲ್ಲಿ ಇ ಕಳೆದೇ ಹೋಯಿತು. ಇನ್ನು ಬೇಂದ್ರೆಯವರ 'ಭಾವಗೀತ' ಮತ್ತು ಕೆಎಸ್‌ನರ 'ಕನಕ' ಅವುಗಳ ಪಠ್ಯಕ್ಕೆ ಸಲ್ಲದ ವಾಚನ ಶೈಲಿಗಳಿಂದಾಗಿ ಅವುಗಳ ಕಾವ್ಯಮಯತೆಗೇ ಘಾಸಿಯಾದೆಂತೆನಿತು.



'ಕುರುಕ್ಷೇತ್ರ' ಪೌರಾಣಿಕ ನಾಟಕದ ಒಂದು ದೃಶ್ಯ

ಅದೇನೇ ಇರಲಿ, ರಂಗಶಿಕ್ಷಣಾರ್ಥಿಗಳಿಗೆ ಕನ್ನಡ ಕಾವ್ಯಪರಂಪರೆಯೊಂದಿಗೆ ಮುಖಾಮುಖಿ ಮಾಡಿ ಅದರ ರುಚಿ ಹತ್ತಿಸಲು ನಡೆಸಿರುವ ಈ ಪ್ರಯೋಗ ನೀನಾಸಂನ ಸಾಂಸ್ಕೃತಿಕ ಸೃಜನಶೀಲತೆ ಮತ್ತು ಸಾಹಸಶೀಲತೆಗೆ ಸಾಕ್ಷಿಯೆನಿಸಿತು. ಸಂಬಂಧಪಟ್ಟ ಕರಪತ್ರದಲ್ಲಿ ಶಿಕ್ಷಣಾರ್ಥಿಗಳು 'ಕಾವ್ಯ ಅಂದರೆ ಏನರಿ?' ಎಂಬ ಪ್ರಶ್ನೆಗೆ ದಾಖಲಿಸಿರುವ ಉತ್ತರಗಳು ಸಾಕಷ್ಟು ಸ್ವಾರಸ್ಯಕರವೂ, ಕುತೂಹಲಕಾರಿಯೂ ಆಗಿದ್ದು ನೀನಾಸಂನ ಈ ಪ್ರಯತ್ನ ಶಿಕ್ಷಣಾರ್ಥಿಗಳ ನೆಲೆಯಿಂದಲೂ ಸಾರ್ಥಕವಾದಂತೆ ಕಾಣುತ್ತದೆ. ಆದರೆ ಈ ಕಾವ್ಯಭಾಗಗಳ ಮತ್ತು ಪದ್ಯಗಳ ಆಯ್ಕೆಯ ಮಾನದಂಡದ ಅಸ್ಪಷ್ಟತೆ ಈ ಪ್ರಯೋಗಕ್ಕೊಂದು ದೃಷ್ಟಿಕೇಂದ್ರವಿಲ್ಲದಂತೆ ಮಾಡಿದೆ. ಇದರಿಂದಾಗಿಯೇ, ಮೊದಲ ಭಾಗದಲ್ಲಿ ರಗಳೆಯ ಒಂದು ತುಣುಕಾದರೂ ಇಲ್ಲದಿದ್ದುದು ಮತ್ತು ಎರಡನೇ ಭಾಗದಲ್ಲಿ ಕುವೆಂಪು ಕಾಣೆಯಾಗಿದ್ದುದು ಏಕೆಂದು ಗೊತ್ತಾಗಲಿಲ್ಲ.

೧೩ರಂದು ಪ್ರದರ್ಶಿತವಾದದ್ದು ಕಂಪನಿ ಶೈಲಿಯ ಪೌರಾಣಿಕ ನಾಟಕ, 'ಕುರುಕ್ಷೇತ್ರ. ಬಿ. ಪುಟ್ಟಸ್ವಾಮಯ್ಯ, ಪಿ. ವಜ್ರಪ್ಪ, ಮತ್ತು ಕಲ್ಲೂರ್ ಶ್ರೀನಿವಾಸರ ಪಠ್ಯಗಳ ಜೊತೆ ಕುವೆಂಪು ಅವರ 'ಸ್ಮಶಾನ ಕುರುಕ್ಷೇತ್ರ'ವನ್ನೂ (ಹಾಗೂ ಕೊಟ್ಟೂರಪ್ಪನವರ 'ದಾನಶೂರ ಕರ್ಣ'ದ ಕೆಲ ಭಾಗಗಳನ್ನೂ ಸಹ) ಸೇರಿಸಿ ಒಂದು ರೀತಿಯ ಚೌಚೌ ಭಾತ್‌ಆಗಿ(ರುಚಿಯಲ್ಲೂ!) ಸಿದ್ಧಪಡಿಸಲ್ಪಟ್ಟಿರುವ ಈ ನಾಟಕದ ನಿರ್ದೇಶನ ಮಾಡಿದವರು ಎಂ. ಗಣೇಶ. ಹಳೆಯ ಕನ್ನಡ ನಾಟಕ ಪರಂಪರೆಯನ್ನು ಪ್ರದರ್ಶನ ಮೌಲ್ಯಗಳ ನೆಲಗಟ್ಟಿನಿಂದ ಶಿಕ್ಷಣಾರ್ಥಿಗಳಿಗೆ ಪರಿಚಯಿಸುವ ಪ್ರಯತ್ನದಂತೆ ತೋರಿದ ಈ ಪ್ರಯೋಗ, ಆಧುನಿಕ ನಾಟಕಗಳ ಬೌದ್ಧಿಕ ಏಕತಾನತೆಯಿಂದ ಬೇಸತ್ತಿರುವ ಪ್ರೇಕ್ಷಕರನ್ನು ತನಗೇ ವಿಶಿಷ್ಟವಾದ ರಂಗ ಸಂಗೀತ, ಪ್ರಸಾಧನ, ಅಭಿನಯ ಶೈಲಿ, ಬಣ್ಣ ಬೆಡಗುಗಳಿಂದ ಕೂಡಿದ ತನ್ನ ಸಗಟು ಮನರಂಜನಾ ಮೌಲ್ಯದಿಂದ ಸೆಳೆಯುವಂತಿತ್ತು. ಆದರೆ ಈ ಸಗಟು ಬೆರಕೆಯಲ್ಲಿ ಕುವೆಂಪು ಅವರ ಸೂಕ್ಷ್ಮ ದರ್ಶನ ಬೆರೆಯದೆ ಮೂಲ ಕಂಪನಿ ನಾಟಕದ ವಿಶಿಷ್ಟ ರಸಾಸ್ವಾದನೆಗೆ ಭಂಗ ಉಂಟಾಯಿತೇನೋ ಎನಿಸಿತು.

ಅಂದು ನಾನು ನೋಡಿದ ಈ ಪ್ರದರ್ಶನ ಬಾಲ್ಯದಲ್ಲಿ ನನ್ನ ಬದುಕಿನ ಭಾಗವೇ ಆಗಿ ಹೋಗಿದ್ದ ಪೌರಾಣಿಕ ರಂಗ ಪ್ರದರ್ಶನಗಳಿಗೆ ಹೋಲಿಸಿದರೆ ಅಭಿನಯ ಮತ್ತು ಹಾಡುಗಾರಿಕೆ ಸರಾಸರಿ ಮಟ್ಟದ್ದೆನಿಸಿ, ಒಟ್ಟು ಪರಿಣಾಮದಲ್ಲಿ ಸಾಧಾರಣವೆನಿಸಿತಾದರೂ, ಇದು ಆಧುನಿಕ ರಂಗಶಿಕ್ಷಣದ ಭಾಗವಾಗಿ ಹೊಸ ತಲೆಮಾರಿನ ಶಿಕ್ಷಣಾರ್ಥಿಗಳಿಂದ ಮೂಡಿದ ಒಂದು ಪ್ರಯೋಗವಾಗಿ ಯಶಸ್ವಿಯೆನಿಸಿತು. ನಿರ್ದೇಶಕ ಗಣೇಶರ ಬಾಲ್ಯದ ಬಯಲುಸೀಮೆಯ ರಂಗ ನೆನಪುಗಳು ಇಲ್ಲಿ ಸಾರ್ಥಕವಾಗಿ ಸಾಕಾರಗೊಂಡಿದ್ದವು. ಆಧುನಿಕ ರಂಗಭೂಮಿ ಮತ್ತು ರಂಗ ಶಿಕ್ಷಣಕ್ಕೆ ಈಗ ಸುದೂರವಾಗಿರುವಂತೆ ತೋರುವ ಇಂತಹ ರಂಗಪ್ರಯೋಗಳು ಒಂದು ಸ್ಥಗಿತತೆಗೆ ಬಂದಂತಿರುವ ಆಧುನಿಕ ರಂಗ ಭೂಮಿಗೆ ಪ್ರೇಕ್ಷಕನೊಡನೆ ಹೊಸ ನೆಲೆಯ ಸಮೀಕರಣವನ್ನು ಸಾಧಿಸಿಕೊಳ್ಳುವ ಸಂಬಂಧವಾಗಿ ಹೊಸ ಹೊಳಹುಗಳನ್ನು ನೀಡಬಲ್ಲವು ಎಂದು ಈ ಪ್ರಯೋಗವನ್ನು ನೋಡುತ್ತಿದ್ದಾಗ ನನಗನ್ನಿಸಿತು. ಉದಾಹರಣೆಗೆ ಇದರ ಶೈಲೀಕೃತ ಸಂಭಾಷಣೆ, ಶೈಲೀಕೃತ ಅಭಿನಯ, ದಟ್ಟ ಸಂಗೀತಮಯತೆಗಳು ಇಂದು ಆಧುನಿಕ ರಂಗಪ್ರಯೋಗಗಳಿಗೆ ಹೊಸ ಹುರುಪು ಮತ್ತು ಉಪಾಯಗಳನ್ನು ಒದಗಿಸಬಹುದೆನ್ನಿಸಿತು. ರಂಗಕರ್ಮಿಗಳು ಯೋಚಿಸಲಿ.

**–ಡಿ.ಎಸ್. ನಾಗಭೂಷಣ**

**ಪುಸ್ತಕಾವಲೋಕನ**

**ಪು: ನೆಲ್ಸನ್ ಮಂಡೇಲಾ ಲೇ: ರಂಜಾನ್ ದರ್ಗಾ ಪ್ರ: ಲೋಹಿಯಾ ಪ್ರಕಾಶನ**, ಬಳ್ಳಾರಿ ಪು: ೧೨೦ ಬೆಲೆ: **ರೂ. ೬೦/-**

# ಅಪ್ರತಿಮ ಹೋರಾಟಗಾರನ ಸ್ಫೂರ್ತಿಯುತ ಬದುಕಿನ ಕಥೆ




**ನೆ**ಲ್ಸನ್ ಮಂಡೇಲಾ ಮಾನವ ಜಗತ್ತಿನ ಅಚ್ಚರಿಗಳಲ್ಲೊಂದು. ಅವರ ಹೋರಾಟದ ಬದುಕು ಎಲ್ಲ ಕಾಲದ ಹೋರಾಟಗಳಿಗೂ ಒಂದು ಸ್ಪಷ್ಟ ದಿಕ್ಸೂಚಿ. ಹಲವು ನೂರು ವರ್ಷಗಳ ಕಾಲ ತನ್ನ ಸಮುದಾಯದ ಚೈತನ್ಯವನ್ನು ಕ್ರೌರ್ಯದ ಪರಮಾವಧಿಯಲ್ಲಿ ಹತ್ತಿಕ್ಕಿದ, ನ್ಯಾಯಬದ್ಧ ಸಮಾನ ಬದುಕಿಗಾಗಿ ಆಗ್ರಹಿಸಿದ ತನ್ನನ್ನು ಇಪ್ಪತ್ತೇಳು ವರ್ಷಗಳ ದೀರ್ಘ ಕಾಲಾವಧಿಯ ಜೈಲುವಾಸಕ್ಕೆ ನೂಕಿದ ಬಿಳಿಯರ ವಿರುದ್ಧ ಒಂದಿನಿತೂ ಕಹಿ ತೋರದ ಮಂಡೇಲಾ ಆತ್ಯಂತಿಕ ಮಾನವತೆಯ ಬಹುದೊಡ್ಡ ಐಕಾನ್.

೧೯೯೦ರ ಫೆಬ್ರವರಿ ೧೧ ರಂದು ನೆಲ್ಸನ್ ಮಂಡೇಲಾ ಅವರನ್ನು ಜೈಲಿನಿಂದ ಬಿಡುಗಡೆಗೊಳಿಸಲಾಯಿತು. ಇದಾಗಿ ಒಂದು ತಿಂಗಳಲ್ಲಿ ರಂಜಾನ್ ದರ್ಗಾ ಅವರು ರಚಿಸಿದ ಈ ಕೃತಿಯ ಮೊದಲ ಆವೃತ್ತಿ ಪ್ರಕಟಗೊಂಡಿತು. ದಲಿತ ಸಂಘರ್ಷ ಸಮಿತಿ ಈ ಕೃತಿಯನ್ನು ಮೊದಲು ಪ್ರಕಟಿಸಿತು. ಈಗ ಈ ಪುಸ್ತಕ ಮರುಮುದ್ರಣಗೊಂಡಿದೆ.

ದಕ್ಷಿಣಾ ಆಫ್ರಿಕಾ, ಆ ವಜ್ರ ಮತ್ತು ಚಿನ್ನದ ನಿಕ್ಷೇಪಗಳಿಂದ ಸಂಪದ್ಭರಿತವಾದ ದೇಶ. ಇಲ್ಲಿ ೭೦ ಪ್ರಕಾರದ ಗಣಿಗಳಿವೆ. ಜಗತ್ತಿನ ಶೇ. ೭೦ರಷ್ಟು ಚಿನ್ನ ಇಲ್ಲಿಯೇ ದೊರೆಯುತ್ತದೆ. ಕಲ್ಲಿದ್ದಲು, ಮ್ಯಾಂಗನೀಸ್, ಕಬ್ಬಿಣ, ರತ್ನ, ವಜ್ರ, ಯುರೇನಿಯಂ, ಪ್ಲಾಟಿನಂ, ತಾಮ್ರ ಮುಂತಾದ ಲೋಹಗಳಿಗೆ ಈ ದೇಶ ಖ್ಯಾತಿ ಪಡೆದಿದೆ. ಇವುಗಳನ್ನೆಲ್ಲ ದೋಚಲು ಇಲ್ಲಿ ೧೨೦೦ ಬ್ರಿಟಿಷ್, ೩೫೦ ಅಮೆರಿಕನ್, ೧೬೫ ಫ್ರೆಂಚ್ ಮತ್ತು ೪೫೦ ಜರ್ಮನಿ ಕಂಪನಿಗಳಿವೆ.

ಇಲ್ಲಿನ ಒಟ್ಟು ಐದು ಕೋಟಿ ಜನಸಂಖ್ಯೆಯಲ್ಲಿ ಮೂರೂವರೆ ಕೋಟಿಯಷ್ಟು ಜನರು ಕರಿಯರು, ೯೦ ಲಕ್ಷ ಜನ ಬಿಳಿಯರು, ೫೦ ಲಕ್ಷ ಜನ ಮಿಶ್ರವರ್ಣೀಯರು ಮತ್ತು ಉಳಿದ ಹತ್ತು ಲಕ್ಷದಷ್ಟು ಜನ ಏಷ್ಯನ್ನರು. ಕ್ರಿ.ಶ ಒಂದು ಸಾವಿರಕ್ಕೂ ಮೊದಲಿಂದಲೂ ಕರಿಯರು ಇಲ್ಲಿ ವಾಸವಾಗಿದ್ದಾರೆ. ಹದಿನೈದನೇ ಶತಮಾನದ ನಂತರ ಇಂಗ್ಲಿಷರು, ಡಚ್ಚರು ಮತ್ತು ಫ್ರೆಂಚರು ಇಲ್ಲಿಗೆ ದಾಳಿ ಮಾಡಿ ಈ ಪ್ರದೇಶವನ್ನು ತಮ್ಮ ನಿಯಂತ್ರಣಕ್ಕೆ ಪಡೆದುಕೊಳ್ಳತೊಡಗಿದರು. ಅಂತಿಮವಾಗಿ ಬ್ರಿಟೀಷರು ಇಲ್ಲಿ ಸಂಪೂರ್ಣ ನಿಯಂತ್ರಣ ಪಡೆದುಕೊಂಡರು.

ಅಪಾರವಾದ ನೈಸರ್ಗಿಕ ಸಂಪತ್ತಿದ್ದರೂ ಇಲ್ಲಿನ ಮೂಲನಿವಾಸಿ ಬಹುಸಂಖ್ಯಾತ ಕರಿಯರೇ ಪರಕೀಯರಾಗಿದ್ದರು. ಅವರನ್ನು ಬಿಳಿಯರು ತಮ್ಮ ಕುತಂತ್ರ ಮತ್ತು ಬಲಾತ್ಕಾರದಿಂದ ಹತ್ತಿಕ್ಕಿದರು. ಭಾರತದಲ್ಲಿ ಹಿಂದೂ ಮುಸ್ಲಿಮರನ್ನು ಒಡೆದಾಳಿದಂತೆ ದಕ್ಷಿಣಾ ಆಫ್ರಿಕಾದಲ್ಲಿ ಕರಿಯರ ಒಂದು ಪಂಗಡವಾದ ಜುಲು ಕರಿಯರನ್ನು ಉಳಿದ ಕರಿಯರ ಮೇಲೆ ಎತ್ತಿಕಟ್ಟಿ ಅಧಿಕಾರ ನಡೆಸಿದರು. ಇದಕ್ಕೆ ಜುಲು ಕರಿಯರ ನಾಯಕ ಬುಥಲೆಜಿ ಮತ್ತು ಆತನ ಪಕ್ಷ ಇಂಕಥಾ ಪಕ್ಷವನ್ನು ಬಿಳಿಯರು ಬಳಸಿಕೊಂಡರು. ಬಿಳಿಯರ ಸರ್ಕಾರದ ಪೋಲಿಸರ ಬಂದೂಕಿಗೆ ಬಲಿಯಾಗುತ್ತಿದ್ದಂತೆಯೇ ಜುಲು ಕರಿಯರಿಂದಲೂ ಇತರ ಕರಿಯರು ಸಾಯುತ್ತಿದ್ದರು.

ವರ್ಣಬೇಧ ನೀತಿಯ ಮೂಲಕ ಕರಿಯರನ್ನು ದಮನಿಸಿದ ಬಿಳಿಯರು ಈ ಅಮಾನುಷ ವ್ಯವಸ್ಥೆಯನ್ನು ಕೊನೆಗೊಳಿಸುವಂತೆ ಇಡೀ ವಿಶ್ವವೇ ಕರೆ ನೀಡಿದರೂ ಓಗೊಡಲಿಲ್ಲ. ಇಂತಹ ವ್ಯವಸ್ಥೆಯನ್ನು ವಿರೋಧಿಸಿದ ಹಲವು ಸಾವಿರ ಕರಿಯರು ಸರ್ಕಾರ ಮತ್ತು ಬಿಳಿಯರೊಂದಿಗಿನ ಸಂಘರ್ಷದಲ್ಲಿ ಜೀವ ಕಳೆದುಕೊಳ್ಳಬೇಕಾಯಿತು. ಭಾರತದ ದಲಿತರು ಊರ ಹೊರಗೆ ಪ್ರತ್ಯೇಕ ಕೇರಿಗಳಲ್ಲಿ ವಾಸಿಸುವಂತೆ ಆಫ್ರಿಕಾದಲ್ಲಿ ಕರಿಯರಿಗೇ ಪ್ರತ್ಯೇಕ ಸ್ಥಳಗಳನ್ನು ನಿಗದಿಗೊಳಿಸಲಾಯಿತು. ತಮ್ಮ ದೇಶದಲ್ಲಿಯೇ ಅವರು ಸ್ವತಂತ್ರವಾಗಿ ತಿರುಗಾಡದಂತಹ ಕಾನೂನುಗಳನ್ನು ಜಾರಿಗೊಳಿಸಲಾಯಿತು. ಕರಿಯರ ಸಂಚಾರವನ್ನು ನಿಯಂತ್ರಿಸಲು ಪಾಸುಗಳನ್ನು ನೀಡುವ ವ್ಯವಸ್ಥೆಯಾಯಿತು.

ಇಂತಹ ಸಂಕೀರ್ಣ ಬಿಕ್ಕಟ್ಟುಗಳ ಪರಿಸ್ಥಿತಿಯಲ್ಲಿ ತನ್ನ ದೇಶದ ಕರಿಯರ ವಿಮೋಚನಾ ಚಳವಳಿ ನೆಲ್ಸನ್ ಮಂಡೇಲಾ ನೇತೃತ್ವದಲ್ಲಿ ನಡೆದ ಹಾದಿ ಜಗತ್ತಿನ ಎಲ್ಲಾ ಹೋರಾಟಗಳಿಗೂ ಮಾದರಿ ಎನಿಸುವಂತಿದೆ. ಸರ್ಕಾರಿ ಕಟ್ಟಡಗಳ ಮೇಲಷ್ಟೇ ಸೀಮಿತವಾಗಿ ಯಾರ ಜೀವಕ್ಕೂ ಹಾನಿ ಮಾಡದ 'ಹಿಂಸಾತ್ಮಕ' ಹೋರಾಟದ ಹಾದಿಯನ್ನು ಅನಿವಾರ್ಯ ಸಂದರ್ಭದಲ್ಲಿ ಬಳಸಿದ್ದನ್ನು ಬಿಟ್ಟರೆ ಮಂಡೇಲಾ ಅವರ ಹೋರಾಟದ ಹಾದಿ ಗಾಂಧಿಮಾರ್ಗದ್ದೇ ಆಗಿದೆ.

"ಆಫ್ರಿಕಾದ ಜನತೆಯು ಹೋರಾಟಕ್ಕೆ ನನ್ನ ಬದುಕನ್ನೇ ಸಮರ್ಪಿಸಿಕೊಂಡಿದ್ದೇನೆ. ಬಿಳಿಯರ ಪ್ರಾಬಲ್ಯದ ವಿರುದ್ಧ ಹೋರಾಡಿದ್ದೇನೆ ಮತ್ತು ಕರಿಯರ ಪ್ರಾಬಲ್ಯದ ವಿರುದ್ಧ ಹೋರಾಡಿದ್ದೇನೆ. ಸರ್ವರೂ ಸಮಾನ ಅವಕಾಶಗಳೊಂದಿಗೆ ಸಾಮರಸ್ಯದಿಂದ ಒಂದುಗೂಡಿ ಬದುಕುವಂಥ ಪ್ರಜಾಪ್ರಭುತ್ವ ಮತ್ತು ಮುಕ್ತ ಸಮಾಜದ ಆದರ್ಶಗಳನ್ನು ಪೋಷಿಸಿದ್ದೇನೆ. ಈ ಆದರ್ಶಗಳ ಸಾಧನೆಗಾಗಿ ನಾನು ಬದುಕಲು ಬಯಸುತ್ತೇನೆ ಮತ್ತು ಈ ಆದರ್ಶಗಳಿಗಾಗಿ ನಾನು ಸಾಯಲು ಸಿದ್ಧನಿದ್ದೇನೆ." ಎಂದು ಮಂಡೇಲಾ ೧೯೬೪ರಲ್ಲಿ ನ್ಯಾಯಾಲಯದಲ್ಲಿ ತಮ್ಮ ವಿಚಾರಣೆಯ ಸಂದರ್ಭದಲ್ಲಿ ಆಡಿದ ಮಾತುಗಳು ಜಗತ್ತಿನ ಎಲ್ಲ ದೇಶಗಳೂ ಅನುಸರಿಸಬೇಕಾದ ನೀತಿಸಂಹಿತೆಯಾಗಿವೆ.

೧೯೭೯ರಲ್ಲಿ ಮಂಡೇಲಾ ಅವರು ಜೈಲಿನಲ್ಲಿದ್ದಾಗ ಅಂತರರಾಷ್ಟ್ರೀಯ ತಿಳಿವಳಿಕೆಗಾಗಿ ಇರುವ ಜವಾಹರಲಾಲ್ ನೆಹರೂ ಪ್ರಶಸ್ತಿಗಾಗಿ ಅವರನ್ನು ಆಯ್ಕೆ ಮಾಡಿದಾಗ ಅವರು ಭಾರತಕ್ಕೆ ಬರೆದ ಒಂದು ಅಪರೂಪದ ಪತ್ರ, ದಕ್ಷಿಣ ಆಫ್ರಿಕಾದ ಹೋರಾಟಗಾರರ ಪ್ರಣಾಳಿಕೆಯಾದ 'ಸ್ವಾತಂತ್ರ್ಯ ಘೋಷಣೆ' ಈ ಕೃತಿಯಲ್ಲಿರುವ ಇನ್ನಿತರ ಪ್ರಮುಖ ಸಂಗತಿಗಳು.

೧೯೯೦ರಲ್ಲಿ ಈ ಪುಸ್ತಕವನ್ನು ರಚಿಸುವಾಗ ಈಗಿನಂತೆ ಮಾಹಿತಿಯನ್ನು ಸುಲಭವಾಗಿ ಪಡೆಯುವ ಇಂಟರ್ನೆಟ್ ಸೌಲಭ್ಯವಿರಲಿಲ್ಲ. ಆಗ ಮಂಡೇಲಾ ಕುರಿತು ಪುಸ್ತಕಗಳೂ ಬಂದಿರಲಿಲ್ಲ. ಆದರೆ ತಮ್ಮ ಸ್ವಂತ ಕಾಳಜಿಯಿಂದಾಗಿ ಲೇಖಕರು ಶ್ರಮಪಟ್ಟು ಹಲವು ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿ ಈ ಕೃತಿಯನ್ನು ರಚಿಸಿದ್ದರು. ಈಗ ಈ ಪುಸ್ತಕ ಇಪ್ಪತ್ತೈದು ವರ್ಷಗಳ ಬಳಿಕ ಮರುಮುದ್ರಣಗೊಂಡಿದೆ. ಈ ಕಾರಣಕ್ಕಾಗಿ ಪರಿಪೂರ್ಣವಾಗಿರಬೇಕಾಗಿದ್ದ ಈ ಪುಸ್ತಕದಲ್ಲಿ ಕಿರಿಕಿರಿ ಎನಿಸುವಷ್ಟು ಮುದ್ರಣದೋಷಗಳಿವೆ. ಹಲವು ಕಡೆಗಳಲ್ಲಿ ಸಂಗತಿಯೊಂದನ್ನು ನಿರೂಪಿಸುವಾಗ ಭೂತ ಮತ್ತು ವರ್ತಮಾನವನ್ನು ಒಮ್ಮೆಲೆ ಬಳಸಿದ್ದು ಗೊಂದಲಕ್ಕೆ ಕಾರಣವಾಗಿವೆ. ಕೆಲವು ಸಂಗತಿಗಳು ಪುನರಾವರ್ತಿತವಾಗಿವೆ. ಇಂತಹ ತಪ್ಪುಗಳನ್ನು ಖಂಡಿತ ಒಪ್ಪಲಾಗದು.

ಭಾರತದಲ್ಲಿ ಹಿಡಿತ ಸಾಧಿಸುತ್ತಿರುವ ಧಾರ್ಮಿಕ ಫ್ಯಾಸಿಜಂ ಅನ್ನು ಹೇಗೆ ತಡೆಗಟ್ಟಬೇಕು? ಉಗ್ರಗಾಮಿಗಳನ್ನು ಮತ್ತು ಕೋಮುವಾದಿಗಳನ್ನು ಹೇಗೆ ಹತೋಟಿಗೆ ತರಬೇಕು? ಸಾಮ್ರಾಜ್ಯಶಾಹಿಗಳನ್ನು ಹೇಗೆ ನಿಯಂತ್ರಿಸಬೇಕು? ಬಂಡವಾಳಶಾಹಿ ವ್ಯವಸ್ಥೆಯನ್ನು ಕೊನೆಗಾಣಿಸಲು ಯಾವ ರೀತಿಯಲ್ಲಿಹೋರಾಡಬೇಕು ಎಂಬುದು ಈ ಕೃತಿಯಲ್ಲಿರುವ ನೆಲ್ಸನ್ ಮಂಡೇಲಾರ ಬದುಕಿನ ಪುಟಗಳಿಂದ ಅರಿತುಕೊಳ್ಳಲು ಸಾಧ್ಯವಿದೆ. ಈ ಹಿನ್ನೆಲೆಯಲ್ಲಿ ಈ ಪುಸ್ತಕ ಹಿಂದೆಂದಿಗಿಂತಲೂ ಇಂದು ಹೆಚ್ಚು ಅವಶ್ಯವಾಗಿದೆ ಎಂದು ಲೇಖಕ ರಂಜಾನ್ ದರ್ಗಾ ಅವರು ಅಭಿಪ್ರಾಯಪಟ್ಟಿರುವುದು ಸರಿಯಾಗಿದೆ.

ನೆಲ್ಸನ್ ಮಂಡೇಲಾ ಅವರ ತ್ಯಾಗ, ಸಾಟಿಯಿಲ್ಲದ ಸಹನಶೀಲತೆ, ಅಖಂಡ ಮಾನವತೆ, ರಾಜಕೀಯ ದೂರದರ್ಶಿತ್ವ ಎಲ್ಲ ಕಾಲಕ್ಕೂ ಮಾದರಿಯಾಗಿದೆ. ರಕ್ತಪಾತವಿಲ್ಲದೆ ಬಿಳಿಯರ ಸರ್ವಾಧಿಕಾರವನ್ನು ಕೊನೆಗಾಣಿಸಿ ಬಿಳಿಯರು ಮತ್ತು ಕರಿಯರು ಕೂಡಿದ ಪ್ರಭುತ್ವ ಸ್ಥಾಪನೆ ಮಾಡಿದ್ದು ಮಂಡೇಲಾರ ಬಹುದೊಡ್ಡ ಸಾಧನೆ. ಹೀಗಿದ್ದರೂ ನವವಸಾಹತುಶಾಹಿಗಳನ್ನು ದೇಶದಿಂದ ಹೊರಗಟ್ಟಲಾಗದ್ದು ಅವರ ಒಂದು ಮಿತಿ. ಆದರೆ ಹೊರಗಿನ ಯಾವುದೇ ಆಕ್ರಮಣವನ್ನು ತಡೆಯಲು, ಮೊದಲು ದೇಶದೊಳಗೆ ವಿವಿಧ ಧರ್ಮ, ಜನಾಂಗ, ವರ್ಣೀಯರ ನಡುವೆ ಸಮಾನತೆ ಸಹಬಾಳ್ವೆ ಇರಬೇಕು. ಜಗತ್ತಿನ ದೊಡ್ಡ ನಾಯಕರೆಲ್ಲ ಇದನ್ನು ತಮ್ಮ ಹೋರಾಟ, ನಡೆ ಮತ್ತು ಕಾರ್ಯಶೀಲತೆಯ ಮೂಲಕ ಸಾಧಿಸಿ ತೋರಿದ್ದಾರೆ. ಅವರಲ್ಲಿ ಮಂಡೇಲಾರಿಗೆ ವಿಶಿಷ್ಟ ಸ್ಥಾನವಿದೆ. ಇಂತಹ ಚಿಂತನೆಗಳನ್ನು ಮುನ್ನಲೆಗೆ ತರುವ ನಿಟ್ಟಿನಲ್ಲಿ ಲೇಖಕ ರಂಜಾನ್ ದರ್ಗಾ ಅವರು 'ನೆಲ್ಸನ್ ಮಂಡೇಲಾ' ಕೃತಿ ರಚಿಸಿ ಅಭಿನಂದನೀಯ ಕೆಲಸ ಮಾಡಿದ್ದಾರೆ.

**–ಸರ್ಜಾಶಂಕರ ಹರಳಿಮಠ**

ಹೊಸ ಮನುಷ್ಯ' ಸಮಾಜವಾದಿ ಮಾಸಿಕಕ್ಕೆ
ಶುಭ ಕೋರುವ–



–ಗಂಗಾಧರ ಬೀಚನಹಳ್ಳಿ
ಹಾಗೂ ಕುಟುಂಬ
ಬೆಂಗಳೂರು

ಹೊಸ ಮನುಷ್ಯ ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು

ಫ್ಲ್ಯಾಟುಗಳು ಮತ್ತು ಸ್ವತಂತ್ರ ಮನೆಗಳ
ಖರೀದಿ ಮತ್ತು ನಿರ್ಮಾಣಕ್ಕಾಗಿ ಸಂಪರ್ಕಿಸಿ:



ಶಿವ ಬಿಲ್ಡರ್ಸ್ ಅಂಡ್ ಡೆವಲಪರ್ಸ್
ಪ್ರೊ: ಶಶಿಧರ ಎಸ್. ಕಡಲೂರು
ನಂ.3, ಎಸ್.ಜೆ.ವಿ. ಕಾಂಪ್ಲೆಕ್ಸ್
ಮೆಂಟಲ್ ಆಸ್ಪತ್ರೆ ಎದುರು
ಧಾರವಾಡ

'ಹೊಸ ಮನುಷ್ಯ' ಸಮಾಜವಾದಿ ಮಾಸಿಕಕ್ಕೆ
ಶುಭ ಕೋರುವ–



ಚಿ. ಆರುಷ್ ತೇಜಸ್ವಿ
ಕು. ಅನಘಾ
ಮತ್ತು ಕು.ಅದಿತಿ
-ಇವರ ತಾತ ಮತ್ತು ಅಜ್ಜಿ. ಬೆಂಗಳೂರು

ತಿಂಗಳ ಸಾಲುಗಳು...



ಈ ಜಗತ್ತೇ ಮೊಟ್ಟಮೊದಲನೆಯ ಮಸೀದಿ. ಈ ಶರೀರವೇ ಪ್ರಾರ್ಥನೆಯ ದಿಕ್ಕು ತೋರಿಸುವ ಮಿನಾರ್. ಈ ಹೃದಯವೇ ಮನುಷ್ಯನನ್ನು ಪ್ರಾರ್ಥನೆಗೆ ಅರ್ಹನನ್ನಾಗಿಸುವ ಅಧ್ಯಾತ್ಮ ಜ್ಯೋತಿ ತುಂಬಿದ ದೀಪ.

–ಸೂಫಿ ಸಂತ ಅಮೀನ್–ಅರ್–ದೀನ್–ಆರಾ

ಪತ್ರಿಕೆಗೆ ಶುಭ ಕೋರುತ್ತಾ...

–ಬಿ.ಸುರೇಶ
ಡಾ. ವಿಜಯಾ

HOSA MANUSHYA, a kannada monthly solely owned, edited, published and printed by D. S. Nagabhushana, at HIG-5, Kallahally Extn.,Vinoba Nagara, SHIVAMOGGA-577204. Printed at Ila Mudrana, Bengaluru-560 026 Ph.: 080-26757159

**Regd. News Paper** RNI No. KARKAN/2012/47568
Rgd No. KA/SK/SMG-1209/2013-15
ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204 (Karnataka)